TIGHT BINDING BOOK

THE BOOK WAS DRENCHED

UNIVERSAL
LIBRARY
OU_200093
UNIVERSAL
LIBRARY

ನವಗಿರಿನಂದನವನ

# ಉತ್ತರ ಸಾವಿತ್ರಿ.

(ನೂತನ ಪೌರಾಣಿಕ ನಾಟಕ)


ಗ್ರಂಥಕರ್ತ.

ನವಗಿರಿನಂದ


★


ಮುದ್ರಕ-ಪ್ರಕಾಶಕ:

ಬಿ. ಪಿ. ಕಾಳೆ,

ಶ್ರೀ ಶೇಷಾಚಲ ಪ್ರೆಸ್ಸ,

ಮದಿಹಾಳ-ಧಾರವಾಡ



(ಎಲ್ಲ ಹಕ್ಕುಗಳು ಪ್ರಕಾಶಕರವು)



೧೯೪೭

ಬೆಲೆ ೧-೪-೦

# ಮುನ್ನುಡಿ

51

ಸಾವಿತ್ರಿಯ ವರಚರಿತೆಯ
ಸೇವಿಸಿ-ಕಲ್ಪನೆಯ ತಂದು ಪೋಣಿಸುತಲಿ
ಭಾವಿಸೆ ಪಾತಿವ್ರತ್ಯ ಪ್ರ-
ಭಾವವನಿಮ್ಮಡಿಸಿ ಬರೆದೆನೀ ಸತ್ಕೃತಿಯ -

"ಗ್ರಂಥಕರ್ತ"

---

# ಪಾತ್ರವರ್ಗ

| | | |
|---|---|---|
| ಸ್ತ್ರೀಯರು:— | ಸಾವಿತ್ರಿ | ಧೃತಿ |
| | ಲಕ್ಷ್ಮಿ | ಸರಸ್ವತಿ |
| | ಪಾರ್ವತಿ | ಗಂಗೆ |
| | ಸುಮಾಲಿನಿ | ಸೌದಾಮಿನಿ |
| ಪುರುಷರು:— | | |
| | ಬ್ರಹ್ಮ | ವಿಷ್ಣು |
| | ಶಿವ | ನಾರದ |
| | ಭದ್ರಬಾಹು | ಸತ್ಯವಾನ |
| | ಇಂದ್ರ | ಯಮ |
| | ಕುಬೇರ | ವರುಣ |
| | ವಾಯು | ಅಗ್ನಿ |
| | ಬೃಹಸ್ಪತಿ | ಘೋರ |
| | ಭೀಕರ | ಚಿತ್ರಗುಪ್ತ |

ಸೌದಾಮಿನಿಯ ಗಂಡ,

ಸತ್ಯವಾನನ ಮಕ್ಕಳು ಕುಬೇರ ಸೇವಕರು, ಯಮದೂತರು ಇತ್ಯಾದಿ.

# ಉತ್ತರ ಸಾವಿತ್ರಿ

## ಅಂಕ ೧

### ದೃಶ್ಯ ೧—ಶ್ರೀ ವೈಕುಂಠ

(ಶ್ರೀಮನ್ನಾರಾಯಣನು ಶೇಷಶಾಯಿಯಾಗಿರುವನು. ಲಕ್ಷ್ಮೀ ಸುಹಾಸ್ಯವದನದಿಂದ ಪಾದಸೇವೆ ಮಾಡುತ್ತಿರುವಳು. ತೆರೆಯಲ್ಲಿ ನಾರದನು ವೈಷ್ಣವೀಯ ಸಂಗೀತವನ್ನು * [೧] ಹಾಡುತ್ತಾ ಬರುತ್ತಿರುವಂತೆ ತೋರುವದು )

ಲಕ್ಷ್ಮಿ (ಆಲಿಸಿ):—ಕಾಂತಾ, ಕಲಹಪ್ರಿಯನಾದ ನಮ್ಮ ನಾರದನು ಬರುತ್ತಿರುವನು. ಏನು ವಿಶೇಷವೋ?

ನಾರಾ.—ಕಾಂತೆ! ವಿಶೇಷವಿಲ್ಲದೆ ನಾರದನು ಬರುವನೆ? ಒಂದುವೇಳೆ ವಿಶೇಷವಿಲ್ಲದಿದ್ದರೂ, ಇವನ ಆಗಮನ ಮಾತ್ರದಿಂದ ಏನಾದರೊಂದು ಘಟಿಸಿಯೇ ತೀರುವದು.

ಲಕ್ಷ್ಮಿ (ಮುಗುಳ್ನಗುತ್ತ).—ನಿಜ, ಕಾಂತಾ! ಎಷ್ಟೆಂದರೂ ಮಹತ್ತೋಮಹಿಮರಾದ ನಿಮ್ಮ ಮೊಮ್ಮಗನಲ್ಲವೆ?

ನಾರಾ:—(ಮಂದಸ್ಮಿತದಿಂದ ಪ್ರಿಯೆಯನ್ನು ನೋಡಿ ತಲೆಯೊಲಿವನು.)

ನಾರದ (ಪ್ರವೇಶಿಸಿ):—ಜಯ ಶ್ರೀ ಲಕ್ಷ್ಮೀನಾರಾಯಣ! ಸಚ್ಚಿದಾನಂದ ಸ್ವರೂಪ! ನಿನ್ನ ಪಾದಸೇವಕನಾದ ನಾರದನು ನಮಸ್ಕರಿಸುವನು. ಶತಸಹಸ್ರಕೋಟಿ ಮನಸಾ ನಮಸ್ಕಾರಗಳು. (ದೇವನ ಬಳಿ ಸಾರಿ ಬಾಗುವನು. ಪರಮಾತ್ಮನು ಮಂದಸ್ಮಿತನಾಗಿ ಕೈಯೆತ್ತಿ ಹರಸುವನು.)

---

* ಸಂಖ್ಯಾನುಸಾರವಾಗಿರುವ ಹಾಡುಗಳು ಅಂತ್ಯದಲ್ಲಿ ಬರೆಯಲ್ಪಟ್ಟವೆ

ಲಕ್ಷ್ಮಿ:—ನಾರದಾ! ನಿನ್ನ ಆಗಮನದ ಕಾರಣವೇನು?

ನಾರಾ:—ಎಲ್ಲವೂ ಕುಶಲವಷ್ಟೇ?

ನಾರದ.–ದೇವಾ! ನಿಮ್ಮ ದಿವ್ಯ ಮಂಗಳಾವಲೋಕನದಿಂದ ಎಲ್ಲವೂ ಕುಶಲ. ಮಂಗಳ ಮೂರ್ತಿಗಳಾದ ನಿಮ್ಮ ದರ್ಶನಾಪೇಕ್ಷಿಯಾಗಿಯೇ ಬಂದೆನು.

ಲಕ್ಷ್ಮಿ:—ಆಶ್ಚರ್ಯ! ನಾರದನು ಸುಮ್ಮನೆ ಬರುವದೆಂತು?

ನಾರದ—ತಾಯಿ! ಮತ್ತು ನನ್ನ ಹೃದಯದಲ್ಲಿ ಹಿಡಿಯಲಾರದ ಒಂದು ಸಂತೋಷವನ್ನು ನಿಮ್ಮ ಮುಂದೆ ನಿವೇದನ ಮಾಡಲಿಕ್ಕಾಗಿಯೂ ಬಂದೆನು

ಲಕ್ಷ್ಮಿ:—ಹಾ! ಈಗ ಬಂತು ಸ್ವಲ್ಪ ಗುಟ್ಟು!

ನಾರಾ.—ನಾರದಾ! ಅದು ಯಾವ ಸಂತೋಷ?

ನಾರದ.—ದೇವಾಧಿದೇವ! ಸರ್ವಾಂತರ್ಯಾಮಿಯಾದ ನಿನಗೆ ತಿಳಿಯದಿರುವುದೇನುಂಟು?

ಲಕ್ಷ್ಮಿ:—ಗೂಢಾರ್ಥವು ಬೇಡ ನಾರದಾ! ನಿಚ್ಚಳವಾಗಿ ನಿನ್ನ ಹೃದಯವನ್ನು ಬಿಚ್ಚಿಡು!

ನಾರದ.—ಹಾಗೆಯೇ ಆಗಲಿ ತಾಯಿ. ಕೇಳಬೇಕು. ನಾನೀಗ ಭೂಲೋಕದಿಂದ ಬರುತ್ತಿದ್ದೇನೆ. ಅಲ್ಲಿಯ ಪರಮ ಪತಿವ್ರತಾಶಿರೋಮಣಿಯಾದ ಸಾವಿತ್ರೀದೇವಿಯ ಸೌಭಾಗ್ಯಾತಿಶಯವನ್ನು ನೋಡಿ ಅತ್ಯಾನಂದವನ್ನು ಹೊಂದಿ, ಆ ಸಂತೋಷದಿಂದಲೇ ಹಗುರಾಗಿ ಇಲ್ಲಿಗೆ ಹಾರಿ ಬಂದೆನು

ಲಕ್ಷ್ಮಿ:—ತಿಳಿಯಿತು ನಾರದಾ! ಅಂದು ಅನಸೂಯಾದೇವಿಯಿಂದ ನಮ್ಮೆಲ್ಲರನ್ನು ಪೇಚಾಡಿಸಿದ ಹಾಗೆ, ಈಗ ಮತ್ತೊಂದು ಹೊಸ ತಂಟೆ ಪ್ರಾರಂಭಮಾಡಿದಿಯಾ?

ನಾರದ:—ಇಲ್ಲ ತಾಯಿ, ಹಾಗಿಲ್ಲ.

ನಾರಾ:—ನಾರದಾ! ಸತೀ ಅನಸೂಯೆಯ ದೆಸೆಯಿಂದ ಭೂಲೋಕದ ಪತಿವ್ರತೆಯರ ಪ್ರಭಾವವನ್ನು ಚೆನ್ನಾಗಿ ಮನವರಿತ ನಮ್ಮ ಲಕ್ಷ್ಮೀದೇವಿ ತುಂಬಾ ಹೆದರಿದ್ದಾಳೆ. ಆದುದರಿಂದ ಎಚ್ಚರಿಕೆಯಿಂದ ಮಾತಾಡು

ಲಕ್ಷ್ಮಿ:—ಇರಲಿ, ನಾರದಾ! ಆ ಸಾವಿತ್ರಿ ಎಂಬವಳು ಯಾರು? ಸತೀ ಅನಸೂಯೆಗಿಂತಲೂ ಹೆಚ್ಚಿನವಳೇನು?

ನಾರದ:—ಗೊತ್ತಿಲ್ಲವೆ?

ಲಕ್ಷ್ಮಿ—ನನಗೇನು ಗೊತ್ತು?

ನಾರದ:—ದೇವಾಧಿದೇವನೂ ತಿಳಿಸಲಿಲ್ಲವೆ?

ನಾರಾ:—ಇಲ್ಲ ನಾರದಾ, ನಾನು ಹೇಳಲಿಲ್ಲ. ಅನ್ಯ ಹೆಂಗಸರ ಹೊಗಳಿಕೆಯನ್ನು ಹೆಂಡತಿಯ ಮುಂದೆ ಹೇಳಿದರೆ ಹೆಂಡತಿಗೆ ಹೊಟ್ಟೇಕಿಚ್ಚು..

ಲಕ್ಷ್ಮಿ(ಕೃತಕ ಕೋಪದಿಂದ):—ಸಾಕು ನಿಮ್ಮ ಗೇಲಿ! ನಾರದಾ! ನೀನು ಹೇಳು!

ನಾರದ:—ಕೇಳು ತಾಯೆ! ಆ ಸಾವಿತ್ರಿ ಅಶ್ವಪತಿ ಮಹಾರಾಜನಿಗೆ ವರಪ್ರಸಾದದಿಂದ ಹುಟ್ಟಿದ ಒಬ್ಬೊಂಟಿಗಳಾದ ಮಗಳು. ತನ್ನ ಪ್ರೇಮಪಾತ್ರನು ಅಲ್ಪಾಯುಷಿಯೆಂದು ಗೊತ್ತಾಗಿದ್ದರೂ, ಆತನನ್ನೇ ಪತಿಯಾಗಿ ವರಿಸಿಕೊಂಡಳು ರಾಜ್ಯಭ್ರಷ್ಟನಾದ ಸಾಳ್ವರಾಜ ದ್ಯುಮತ್ಸೇನನ ಮಗ ಸತ್ಯವಾನನೇ ಅವಳ ಪತಿ ತರುವಾಯ ವಿಧಿನಿಯಮದಂತೆ ಸತ್ಯವಾನನು ಗತಾಯುವಾಗಿ ಸಾಯಲು, ಆ ಧೀರ ಸಾಧ್ವೀಸಾವಿತ್ರಿ ಯಮನನ್ನೇಬೆಂಬತ್ತಿದಳು. ಯಮನು ಅವಳ ಪತಿಭಕ್ತಿಗೆ ಮೆಚ್ಚಿ, ಅವಳ ಅತ್ತೆ-ಮಾವಂದಿರ ಅಂಧತ್ವವು ಹೋಗುವಂತೆಯೂ, ರಾಜ್ಯವು ಸಿಕ್ಕುವಂತೆಯೂ, ತಂದೆಗೆ ಶತಪುತ್ರರಾಗುವಂತೆಯೂ ವರವನ್ನುಕೊಟ್ಟನು. ಇಷ್ಟೇ ಅಲ್ಲದೆ, ಆ ಚದುರಿ ಯಮನನ್ನು ವಾದದಲ್ಲಿ ಜಯಿಸಿ, ತನಗೆ ನೂರು ಮಕ್ಕಳಾಗುವಂತೆ ವರವನ್ನು ಪಡೆದು ಪತಿಯ ಜೀವವನ್ನು ಬಿಡಿಸಿಕೊಂಡು ಬಂದು, ಈಗ ಸಕಲ ಸೌಭಾಗ್ಯದಿಂದ ರಾಣಿಯಾಗಿ ಮೆರೆಯುತ್ತಿದ್ದಾಳೆ!

ಲಕ್ಷ್ಮಿ—ಆಶ್ಚರ್ಯ! ಅದ್ಭುತ!

ನಾರದ—ಸಾವಿತ್ರಿಯ ಪಾತಿವ್ರತ್ಯದ ಮಹಿಮೆಯನ್ನು ಅಳತೆ ಮಾಡಲು, ಮಹಾಸಾಗರ ಪಾತ್ರವೂ ಸಾಲದು.

ಲಕ್ಷ್ಮಿ—ಆಹಾ! ನಾರದಾ! ಆ ಪುಣ್ಯಾಂಗನೆಯನ್ನು ಕಣ್ಣಾರೆ ಕಂಡು, ಕೈಯಾರೆ ಆಲಿಂಗಿಸಿಕೊಳ್ಳಬೇಕೆಂದು ನನ್ನ ಮನಸ್ಸು ಹಾತೊರೆಯುತ್ತಿದೆ. ನಾರದಾ! ನನಗೆ ಈ ಸುಯೋಗವನ್ನು ಕಲ್ಪಿಸಿಕೊಡಬಾರದೆ?

ನಾರದ:—ಇದೇನು ತಾಯಿ, ವಿಚಿತ್ರವಾಗಿ ಮಾತಾಡುವಿ? ಮಹಾ ದೇವಿಯಾದ ನಿನಗೆ ಭೂಮಿಯಲ್ಲಿರುವ ಸಾವಿತ್ರಿ ದುರ್ದರ್ಶನಳಾದಳೆ?

ಲಕ್ಷ್ಮಿ:—ಹಾಗಲ್ಲ ನಾರದ! ನನ್ನ ಭಕ್ತರಿಗಾದರೆ ನಾನಾಗಿ ಹೋಗಿ ಕಾಣಿಸಿಕೊಳ್ಳಬಲ್ಲೆನು! ನನ್ನ ಭಕ್ತಳಲ್ಲದ ಸಾವಿತ್ರಿಯ ಬಳಿಗೆ ನಾನಾಗಿ ಹೋಗುವದೆಂದರೆ ನನ್ನ ಅಭಿಮಾನಕ್ಕೆ ಒಪ್ಪುವದೆ? ಅಲ್ಲದೆ, ಈಗ ನಾನೇ ಸಾವಿತ್ರಿಯ ಭಕ್ತಳು. ಅವಳೇ ಇಲ್ಲಿಗೆ ಬಂದು ನನಗೆ ಪ್ರತ್ಯಕ್ಷ ಸೌಖ್ಯವನ್ನು ಕೊಡಬೇಕಾಗಿದೆ!

ನಾರಾಯಣ.—ಭಲೆ! ಕಾಂತೆ! ಪಾತಿವ್ರತ್ಯಪ್ರಭಾವವನ್ನು ನೀನು ಚನ್ನಾಗಿ ತಿಳಿದುಕೊಂಡುದನ್ನು ನೋಡಿ ಸಂತುಷ್ಟನಾದೆನು. ಪ್ರಿಯೆ! ನಿನ್ನ ಉದಾತ್ತವಾದ ಕೋರಿಕೆಯನ್ನು ನಮ್ಮ ನಾರದನು ನಿಶ್ಚಯವಾಗಿಯೂ ಈಡೇರಿಸುವನು. ನಾರದಾ! ತಿಳಿಯಿತಷ್ಟೆ? ಆ ಸಾಧ್ವೀಮಣಿಯಾದ ಸಾವಿತ್ರಿ ಈ ವೈಕುಂಠಕ್ಕೆ ಬರುವಂತೆ ಮಾಡಬೇಕು. ನಾನೂ ಅವಳನ್ನು ಕಂಡು ಧನ್ಯ ನಾಗುವೆನು.

ನಾರದ:—ಆಹಾ! ಗುಣಾಕರ ದೇವ! ಅಸಾಧ್ಯವಾದ ಕಾರ್ಯವನ್ನೆ ನಿಯಮಿಸಿದೆಯಲ್ಲಾ! ಈ ವೈಕುಂಠವೆಂದರೇನು ಅಷ್ಟು ಸುಲಭವೆ? [೨] ಎಂತೆಂತಹ ಮಹಾನ್ ಮಹಾನ್ ತಪಸ್ವಿಗಳೂ-ದೇವೇಂದ್ರಾದಿಗಳೂ ಇಲ್ಲಿಗೆ ಬರಲು ಅಶಕ್ತರಾಗಿ ಅಂಜುತ್ತಿರುವಾಗ, ಆ ಯಃಕಶ್ಚಿತ್ ಮರ್ತ್ಯಳಾದ ನಾರಿ ಹೇಗೆ ಬಂದಾಳೊ!

ನಾರಾ:—ಬರುವಳು ನಾರದಾ! ಪಾತಿವ್ರತ್ಯದ ಶಕ್ತಿಗೆ ಯಾವುದೂ ಅಸಾಧ್ಯವಲ್ಲ. ಇದನ್ನು ನೀನು ಜಗತ್ತಿಗೆ ತೋರಿಸಿಕೊಟ್ಟು, ಸಾವಿತ್ರಿಯ ಪ್ರಭಾವವನ್ನು ಇನ್ನಷ್ಟು ಕಳೆಗೊಳಿಸಬೇಕು. ನಾರದಾ! ಅಘಟಿತ ಘಟನಾ ಸಮರ್ಥನಾದ ನಿನ್ನಿಂದಾಗದ ಕಾರ್ಯವುಂಟೆ?

ನಾರದ:—ಆಗಲಿ ಪರಮಾತ್ಮ, ನಿನ್ನ ಅನುಗ್ರಹವಿದ್ದರೆ ನನ್ನಿಂದ ಏನಾದರೂ ಆದೀತು. ದೇವಾ! ಅಪ್ಪಣೆ! ನನ್ನ ಸೇವನದಿಂದಾಗುವ ಶುಭಾ ಶುಭ ಫಲಗಳಿಗೆಲ್ಲ ನೀನೇ ಬಾಧ್ಯನಾಗು! ಹೋಗಿ ಬರುವೆನು! ಜಯ! ನಾರಾಯಣ [೩] (ಹೋಗುವನು.)

---

ದೃಶ್ಯ ೨-ಬೀದಿ.

ಸೌದಾಮಿನಿ (ತೆರೆಯಲ್ಲಿ):—ಅಯ್ಯೊ, ಈ ಪಾಪಿ ಬೆನ್ನಟ್ಟಿ ಬರುತ್ತಿರುವನಲ್ಲ! ಹಾ! (ದಾರಿದ್ರ್ಯ ಸೂಚಕವಾಗಿಯೂ, ಅಸ್ತವ್ಯಸ್ತವಾಗಿಯೂ ಇರುವ ಭೂಷಣದಿಂದ ಪ್ರವೇಶಿಸಿ) ಅಯ್ಯೋ! ಈ ಹೆಂಡಕುಡುಕನ ಬಾಧೆಯಿಂದ ಈ ಅಬಲೆಯನ್ನು ಕಾಪಾಡುವವರಿಲ್ಲವೆ? ಈ ಚಾಂಡಾಲನು ಗಂಟುಬಿದ್ದನಲ್ಲ! ಹಾ! (ಓಡುವಳು)

ಭದ್ರಬಾಹು (ಉನ್ಮತ್ತತೆಯಿಂದ ಪ್ರವೇಶಿಸಿ):—ಎ. ಏ. ಹುಡುಗಿ! ನಿಲ್-ನಿಲ್ಲಲ್ಲಿ! ಎಲ್-ಎಲ್ಲಿಗೋಡುತ್ತಿ? ನ-ನ-ನ್ನನ್ನ ಕೈತಪ್ಪೀ!

(ಹಾರಿ ಅವಳ ಕೈಯನ್ನು ಹಿಡಿದೆಳೆದು ರಂಗಮಧ್ಯಕ್ಕೆ ತರುವನು.)

ಸೌದಾ:—ಅಯ್ಯೋ! ದೇವಾ! ರಕ್ಷಿಸು! ರಕ್ಷಿಸು!

ಭದ್ರ:—ದೆ-ದ್ದೇವಾನೂ ಇಲ್ಲ-ದಿ-ದ್ದಿಂಡಾನೂ ಇಲ್ಲ! ನಾ-ನ್ನಾ-ನ್ನಾನೇ-ನಿನ್ನದ್ದೇವಾ! ಬಾ-ಬ್ಬಾರೇ—[೪]

ಸೌದಾ (ಉರುಳಾಡುತ್ತಾ):—ಅಯ್ಯಯ್ಯೋ! ಪಾಪಿ!—

ಸೌದಾಮಿನಿಯ ಗಂಡ (ಸಿಟ್ಟಿನಿಂದ ಹೊಕ್ಕು):—ಯಾರದು? ಪಾಪಿ! ನರಪಶು! (ಕೈದೊಣ್ಣೆಯಿಂದ ಭದ್ರಬಾಹುವಿನ ತಲೆಗೆ ಒಂದೇಟನ್ನು ಕೊಡುವನು. ಅದರಿಂದ ಭದ್ರಬಾಹು 'ಆ!' ಎಂದು ಕೂಗಿ ಹಿಂಮುಗುಚಿ ಬೀಳುವಾಗ ಒದೆಯುವನು, ಗುದ್ದುವನು. ಭದ್ರಬಾಹು ವಿಕಾರವಾಗಿ ಕೂಗಿ ನಿಶ್ಚೇಷ್ಟಿತನಾಗುವನು. ಆ ಮೇಲೆ ದೂರ ನಿಂತಿರುವ ತನ್ನ ಮಡದಿಯ ಕೈ ಹಿಡಿದು:-ಪ್ರಿಯೆ! ಸೌದಾಮಿನಿ! ಬಾ. ಪಾಪಿಗೆ ತಕ್ಕಪ್ರಾಯಶ್ಚಿತ್ತವಾಯಿತು! ಇನ್ನು ಈ ದುಷ್ಟ ಭದ್ರಬಾಹು ಬದುಕಲಾರನು. ಬಾ, ಹೋಗೋಣ.

(ಪತ್ನಿಯನ್ನು ಕರೆದುಕೊಂಡು ಹೋಗುವನು.

ನಾರದ [೫] (ನಾರಾಯಣ ನಾಮಸಂಕೀರ್ತನೆ ಮಾಡುತ್ತ ಪ್ರವೇಶಿಸುವನು ಹಾಗು ಬಿದ್ದಿರುವ ಭದ್ರಬಾಹುವನ್ನು ನೋಡಿ):—ಓಹೋ! ಭದ್ರಬಾಹು! ಪರಮ ಪಾಪಿ! ಆಹಾ! ಈ ನರಪಶುವಿನ ಪಾಪವ್ಯಾಖ್ಯಾನಗಳಿಂದ ಚಿತ್ರಗುಪ್ತರ ಎಷ್ಟು ಪುಟಗಳು ತುಂಬಿರುವವೋ ಏನೋ! ಆದರೇನು? ಈತನ ಹೆಂಡತಿ ಮಹಾಪತಿವ್ರತೆ! ಇರಲಿ! ಜಯ ನಾರಾಯಣ!-ಸರಿ! ಇನ್ನು ಈ ಭದ್ರಬಾಹು ಬದುಕಲಾರನು! ನನ್ನ ಕಾರ್ಯಕ್ಕೆ ಇದೊಂದು

ಮುಖ್ಯ ಸಾಧನವಾಯಿತು. ಆಗೋ! ಈತನ ಪತ್ನಿಯಾದ ಸಾಧ್ವೀ ಭೈರವಿ ಪತಿಯನ್ನು ಹುಡುಕುತ್ತ ಬರುತ್ತಿದ್ದಾಳೆ! ಪಾಪ! ಅವಳಿಗೇನು ಗೊತ್ತು ಇವನ ದುರ್ಗತಿ! ಜಯ ನಾರಾಯಣ! ನಾನೀಗ ಅಡಗುವೆನು

[೬] (ಮರೆಯಾಗುವನು)

ಭದ್ರಬಾಹು (ಮೆಲ್ಲನೆ ಎದ್ದು ಕುಳಿತು ನರಳುತ್ತ).—ಅಯ್ಯೋ! ಸತ್ತೆ! ಸೋವು! ಅ...ಯ್..ಯ್ಯೋ! ಹಾ! (ಬೀಳಹೋಗಲು)

ಭೈರವಿ (ಗಾಬರಿಯಾಗಿ ಓಡಿ ಬಂದು):—ಹಾ! ನಾಥಾ! ಇದೇನಿದೇನವಸ್ಥೆ! (ಪತಿಯನ್ನು ಆನಿಸಿಕೊಳ್ಳುವಳು) ಅಯ್ಯೋ! ಪೆಟ್ಟು ಬಲವಾಗಿದೆ! ಹಾ! ರಕ್ತ! ರಕ್ತ! ಯಾರು ಹೊಡೆದರು? ಏನು-ಏನು ಅನ್ಯಾಯ ಮಾಡಿದಿರಿ?

ಭದ್ರ:-ಅನ್ಯಾ-ಯಾ-ನೂ-ಇಲ್ಲಾ! ಸೌದಾಮಿ-ನಿ-ನನ್ನ... ಪ್ರಿಯೇ! ....ಆ ..ಅವಳ ಗಂಡ. .ಅವನ-ಮನೆ-ಹಾ-ಳಾ-ಗ! ನನ್ನ....ಮಂಡೆ . ಒಡೆದಾ. .! ಆ!

ಭೈರವಿ:—ಅಯ್ಯೋ! ಒಳ್ಳೇ ದಾರಿಯಲ್ಲಿ ನಡೆಯಿರಿ ಎಂದು ಎಷ್ಟು ಹೇಳಿದರೂ ನೀವು ಕೇಳುವದಿಲ್ಲವಲ್ಲಾ! ಯಾಕೆ ಪರಸ್ತ್ರೀಯನ್ನು ಕೆಣಕಬೇಕು? ಹಾ! ದೇವಾ! ಇನ್ನಾದರೂ ನನ್ನ ಗಂಡನಿಗೆ ಒಳ್ಳೆಯ ಬುದ್ಧಿಯನ್ನು ಕೊಡು! ಅಯ್ಯೋ! ಮೆ-ಮೆಲ್ಲ ನನ್ನ ಮೇಲೆ ಭಾರ ಹಾಕಿ ನಡೆಯಿರಿ!-ಹಾ! ಗ್ರಹಚಾರವೆ!

ಭದ್ರ:—ಹೂ! ಹಾ! ಅಯ್ಯೋ!-(ಹೆಂಡತಿಯ ಮೇಲೆ ಭಾರ ಹಾಕಿಕೊಳ್ಳುವನು. ಮೆಲ್ಲಮೆಲ್ಲನೆ ಹೋಗುವನು.

---

## ದೃಶ್ಯ ೩-ಪೂಜಾಗೃಹ.

(ರಾಣೀ ಸತೀಸಾವಿತ್ರಿ ಯಮಧರ್ಮನ ವಿಗ್ರಹಕ್ಕೆ ಆರತಿ ಮಾಡುತ್ತಿರುವಳು. ರಾಜಾ ಸತ್ಯವಾನನೂ, ಅವನ ಇಬ್ಬರು ಕುಮಾರರೂ ಕೈ ಮುಗಿದುಕೊಂಡು ಕುಳಿತಿರುವರು. ಒಬ್ಬ ಹುಡುಗನು ಎಲ್ಲರಿಗೂ ಆರತಿಯನ್ನು ಕೊಡುವನು. ಸಾವಿತ್ರಿ ಯಮಧರ್ಮನನ್ನು [೭] ಸ್ತುತಿಸುವಳು.

ಎಲ್ಲರೂ ದೇವರ ವಿಗ್ರಹಕ್ಕೆ ಪುಷ್ಪಾಕ್ಷತೆಗಳನ್ನು ಎರಚುವರು. ನಾರದನು ಹಾಡುತ್ತಾ ಪ್ರವೇಶಿಸುವನು. [೮]

ನಾರದ:— ಜಯ! ನಾರಾಯಣ!

ಸತ್ಯವಾನ (ಥಿಗ್ಗನೆದ್ದು) —ಓಹೋ! ದೇವ ಮುನೀಂದ್ರರು! ನಾರದರು! ಸ್ವಾಮಿ! ದಯಮಾಡಬೇಕು! (ನಾರದನ ಪಾದಕ್ಕೆ ಬಾಗಿ, ಕರೆದು ತಂದು ಅವನನ್ನು ಪೀಠದಲ್ಲಿ ಕುಳ್ಳಿರಿಸುವನು, ಹಾಗೂ ಹರಿವಾಣದಲ್ಲಿ ನಾರದನ ಪಾದವನ್ನಿರಿಸಿ, ಸಾವಿತ್ರಿ ನೀರೆರೆಯಲು, ಆ ಪಾದಗಳನ್ನು ತೊಳೆದು ಪುಷ್ಪಗಳಿಂದ ಅರ್ಚಿಸಿ, ಪಾದತೀರ್ಥವನ್ನು ತಮ್ಮೆಲ್ಲರಿಗೂ ಪ್ರೋಕ್ಷಿಸಿ ಕೊಳ್ಳುವನು. ಅಡ್ಡಬೀಳುವನು )

ನಾರದ.—ದೀರ್ಘಾಯುಷ್ಮಾನ್ ಭವ!

ಸಾವಿತ್ರಿ:—(ನಾರದನಿಗೆ ಅಡ್ಡಬೀಳುವಳು)

ನಾರದ —ಸುದೀರ್ಘ ಸುಮಂಗಲೀ ಭವ!

ಹುಡುಗರು.—(ನಾರದನಿಗೆ ಅಡ್ಡಬೀಳುವರು )

ನಾರದ —ಆಯುರಾರೋಗ್ಯ ಶ್ರೇಯೋಭಿವೃದ್ಧಿರಸ್ತು!

ಸತ್ಯ (ನಾರದನ ಸಂಜ್ಞೆಯಿಂದ ಆಸನದಲ್ಲಿ ಕುಳಿತು).—ಬ್ರಹ್ಮಪುತ್ರಾ! ತಮ್ಮ ಆಗಮನದಿಂದ ನನ್ನ ಈ ಗೃಹವೂ ದೇಶವೂ ಭೂಮಿಯೂ ಪವಿತ್ರವಾದುವು. ದಯಮಾಡಿಸಿದ ಕಾರ್ಯವಿಶೇಷವೇನೋ ಅಪ್ಪಣೆಯಾಗಲಿ!

ನಾರದ:—ರಾಜಾ! ಸತ್ಯವಾನ್ ಚಕ್ರವರ್ತಿನ್! ವಿಶೇಷವೇನಿದೆ? ನಿಮ್ಮ ಸ್ಥಿರ ಕುಶಲವನ್ನು ವಿಚಾರಿಸಿಕೊಂಡು ಹೋಗೋಣವೆಂದು ಬಂದೆನು ಎಲ್ಲವೂ ಕುಶಲವೆ?

ಸತ್ಯ —ದೇವಾನುಗ್ರಹದಿಂದ ಎಲ್ಲವೂ ಕುಶಲ ತಾವೀಗ ಯಾವ ಪುಣ್ಯಲೋಕದಿಂದ ದಯಮಾಡಿಸೋಣವಾಯಿತು?

ನಾರದ.—ಶ್ರೀ ವೈಕುಂಠದಿಂದ!

ಸತ್ಯ —ಆಹಾ! ಧನ್ಯರಾದೆವು!

ಸಾವಿತ್ರಿ:—ಆಹಾ! ವೈಕುಂಠದ ದಿವ್ಯರಜಃಕಣಗಳು ನಮ್ಮ ಪಾವನ ಗೃಹದಲ್ಲಿ ಬಿದ್ದವು! ಧನ್ಯರಾದೆವು!

ನಾರದ:—ಎಲ್ಲಾ ನಿನ್ನ ಪುಣ್ಯಪ್ರಭಾವವು! ಸತೀಮಣಿ ಸಾವಿತ್ರಿ, ನಿನ್ನ ಪಾತಿವ್ರತ್ಯದ ದಿವ್ಯ ಚರಿತ್ರೆಯನ್ನು ಕೇಳಿ ದೇವಲೋಕವೇ ಮುಗ್ಧವಾಗಿದೆ! [೯] ಯಮವಿಜೇತಳಾದ ನಿನ್ನ ಹೆಸರನ್ನು ಕೇಳಿ ಕಮಲಾಕ್ಷನು ಮೆಚ್ಚಿ ತಲೆದೂಗಿದನು! ಕಮಲಾದೇವಿ ನಿನ್ನ ದಿವ್ಯಾಲಿಂಗನವನ್ನು ಬಯಸಿ ಚಾತಕಪಕ್ಷಿಯಂತೆ ಕಾದಿರುವಳು! ಆಹಾ ಸಾತ್ವಿಕರೆ! ಈ ಶುಭ ಸಮಾಚಾರವನ್ನು ನಿಮಗೆ ತಿಳಿಸಬೇಕೆಂದೇ ಮುಖ್ಯವಾಗಿ ಇಲ್ಲಿಗೆ ಬಂದೆನು

ಸಾವಿತ್ರಿ—ಎಲ್ಲವೂ ಯಮಧರ್ಮ ದೇವನ ಪರಮಾನುಗ್ರಹ!

ನಾರದ.—ಹೌದು ಹೌದು! ಆಹಾ! ಅಂತೆಯೇ ಯಮದೇವನಿಗೆ ಪೂಜಾ ಸೇವೆಯನ್ನು ಸಲ್ಲಿಸುತ್ತಿರುವಿಯಲ್ಲವೆ? ಧನ್ಯೆ! ಸಾವಿತ್ರಿ! ಧನ್ಯೆ!

ಸಾವಿತ್ರಿ:-ಮುನೀಂದ್ರಾ! ಯಮಧರ್ಮದೇವನೇ ನಮ್ಮ ಭಾಗ್ಯವಿಧಾತನು. ಅವನನ್ನು ನಮ್ಮ ಕುಲದೈವತವೆಂದೇ ನಂಬಿರುವೆವು!

ನಾರದ -ಯಥಾರ್ಥವೇ ಸರಿ. ಆದರೆ ಮಹಾ ಭಯಂಕರ ಕಾಲನಾದ ತೆಂಕಣ ದಿಕ್ಕಿನ ಆ ಯಮರಾಜನೆಂದರೆ ಎಲ್ಲರೂ ಗಡಗುಟ್ಟಿ ನಡುಗುವಾಗ, ನಿಮ್ಮ ಕೃತಿಯೊಂದು ಅತಿಶಯವೂ ಆಗಿದೆ!

ಸತ್ಯ:—ಅತಿಶಯವೇನಿದೆ? ಮುಖ್ಯವಾದ ಚತುರ್ದಿಕ್ಪಾಲಕರಲ್ಲಿ ಮಹಾ ಭೋಗಿಯಾದ ಪೂರ್ವದಿಗೀಂದ್ರನನ್ನು ಬಿಟ್ಟರೆ, ಎರಡನೆಯವನಾದ ದಕ್ಷಿಣಾಧಿಪತಿ ಯಮಧರ್ಮನಿಗಿರುವಷ್ಟು ಉತ್ತಮವಾದ ಕರ್ತವ್ಯವು ಬೇರೆ ಯಾವ ದಿಕ್ಪತಿಗಳಿಗುಂಟು?

ಸಾವಿತ್ರಿ:—ಅಂತೆಯೇ ಆತನು ಧರ್ಮಸಿಂಹಾಸನಕ್ಕೆ ಯೋಗ್ಯಬಾಧ್ಯನಾಗಿರುವನು.

ನಾರದ:—ನಿಜ ನಿಜ! ಆದರ್ಶ ರಾಜದಂಪತಿಗಳೆ! ನಿಮ್ಮ ಈ ಸಾತ್ವಿಕ ಭಾವವು ನಿಮಗೆ ಇನ್ನೂ ಮೇಲನ್ನುಂಟು ಮಾಡುವದು! ಶೀವ್ರದಲ್ಲಿಯೇ ನಿಮಗೆ ದಿವ್ಯಮಂಗಳ ಮೂರ್ತಿಗಳ ಸಂದರ್ಶನಭಾಗ್ಯವು ಲಭಿಸಲಿರುವದು! ನಾನು ಹೋಗಿಬರುವೆನು.(ಏಳುವನು)

ಸಾವಿತ್ರಿ—ಸತ್ಯವಾನರು:—ಎಲ್ಲವೂ ತಮ್ಮ ಅನುಗ್ರಹ! (ಬಾಗುವರು) (ನಾರದನು ಕೈಯಿಂದ ಅವರನ್ನು ಹರಸಿ-ನಾರಾಯಣ ಕೀರ್ತನೆ ಮಾಡುತ್ತಾ ಹೋಗುವನು. [೧೦] ಸತ್ಯವಾನ-ಸಾವಿತ್ರಿಯರು ಅವನ ಕಡೆಗೆ ಕೈಜೋಡಿಸಿ ಭಕ್ತಿಪರವಶರಾಗಿ ನಿಂತಿರುವರು)

## ದೃಶ್ಯ ೪—ಬೀದಿ.

ನಾರದ [೧೧](ಪ್ರವೇಶಿಸುತ್ತ).-ಜಯನಾರಾಯಣ! (ತನ್ನ ತಂಬೂರಿಯನ್ನು ನೋಡಿ) ಹೇ, ನನ್ನ ಎಡೆಬಿಡದ ಸಂಗಾತಿಯಾದ ತಂಬೂರಿಯೆ! ಪ್ರಿಯ ತಂಬೂರಿಯೆ! ದೇವಾಧಿದೇವನನ್ನು ಮೆಚ್ಚಿಸಿದ ನನ್ನ ಈ ನಾರದನ ತಂಬೂರಿಯೆ! ನೀನೇ ಕೇಳು! ನೀನೇ ನೋಡು! ಎಲ್ಲರೂ ನನಗೆ "ಜಗಳಗಂಟ ನಾರದ' 'ಚಾಡಿಗಾರ ನಾರದ' ಎಂದು ಬಿರುದು ಕೊಟ್ಟಿದ್ದಾರೆ, ಆದರೆ ತಂಬೂರಿಯೆ! ನೋಡುತ್ತಿರುವಿಯಷ್ಟೆ? ನಾನು ಎಂದಾದರೂ ಸುಳ್ಳು ಹೇಳಿರುವೆನೆ? ನಾನು ಹೆಣ್ಣು ಜನ್ಮವನ್ನು ತಾಳಿದುದರಿಂದಲೋ ಏನೋ-ಹೊಟ್ಟೆಯಲ್ಲಿ ಯಾವ ರಹಸ್ಯವನ್ನೂ ಬಚ್ಚಿಟ್ಟುಕೊಳ್ಳಲು ಶಕ್ತನಲ್ಲ! ನಾರಾಯಣ! ನಾರಾಯಣ! ಹೀಗೆ ಕಂಡುದನ್ನು ಹೇಳಿಯೇ ನಿಂದೆಗೊಳಗಾದೆನು, ಆದರೆ ನಿನಗೆ ಗೊತ್ತಿದೆ, ನಾನು ಕಿಂಚಿತ್ತಾದರೂ ಸ್ವಾರ್ಥಪರನಲ್ಲ. ನಾನು ಆ ಕಪಟ ನಾಟಕ ಸೂತ್ರಧಾರಿಯ ಪ್ರೇರಣೆಯಂತೆ ಕುಣಿಯುವವನು. ಲೋಕ ಕಲ್ಯಾಣವೇ ನನ್ನ ಗುರಿ. ಹೀಗಿದ್ದೂ ನನಗೆ 'ಕಲಹಪ್ರಿಯ'ನೆಂಬ ಬಿರುದು ಬರಬೇಕಾದರೆ, ಪಾಪದ ಫಲವೋ-ಹಣೆ ಬರೆಹವೋ! ಇರಲಿ. ನಾರಾಯಣ! ನಾರಾಯಣ! ನಾನೀಗ ದೇವೇಂದ್ರನ ಸಭೆಗೆ ಹೋಗಿ ನನ್ನ ಆ ಬಿರುದನ್ನು ಸಾರ್ಥಕಪಡಿಸಿಕೊಳ್ಳುವೆನು. ಈ ಸಂದರ್ಭದಲ್ಲಿ ಕುಬೇರನಿಗೊಂದು ನೀತಿಪಾಠವಾಗಬೇಕಾಗಿದೆ. ಇತ್ತೀಚೆಗೆ ಅವನು ಧನಮದದಿಂದ ಮತ್ತನಾಗಿರುತ್ತಾನೆ. ತನ್ನ ನಟ್ಟದಿರಿನಲ್ಲಿರುವ ಧರ್ಮಾತ್ಮನಾದ ಯಮನನ್ನು ಕುಬೇರನು ಕಿಡಿಗಣ್ಣಿನಿಂದ ನೋಡುತ್ತಿದ್ದಾನೆ. ಅವನ ಆ ಜ್ವಾಲೆಗೆ ನಾನಿಷ್ಟು ತುಪ್ಪವನ್ನು ಸುರುವಿ, ಅವನ ಅವಿವೇಕವನ್ನು ಸುಟ್ಟು ಬೂದಿಮಾಡಬೇಕು. ಅವನ ಗರ್ವವನ್ನು ಮುರಿಯಬೇಕು. ಅಯ್ಯಾ ತಂಬೂರಿ! ನೀನು ಮಾತ್ರ ನನ್ನ ಕೈಯನ್ನು ಬಿಡದೆ, ನನ್ನ ಸತ್ಯನಿಷ್ಠೆಗೆ ಸಾಕ್ಷಿಯಾಗಿರು! ಜಯ ನಾರಾಯಣ! (ಕೀರ್ತನೆ ಮಾಡುತ್ತಾ ಹೋಗುವನು) [೧೨]

## ದೃಶ್ಯ ೫—ಇಂದ್ರಸಭೆ

(ದೇವೇಂದ್ರನು ಸಿಂಹಾಸನಾರೂಢನಾಗಿರುವನು. ಎಡಗಡೆಯಲ್ಲಿ ಯಮನೂ, ಬಲಗಡೆಯಲ್ಲಿ ಯಮನಿಗಿದಿರಾಗಿ ಕುಬೇರನೂ ಕುಳಿತಿರುವರು ಇತರ ದಿಕ್ಪತಿಗಳೂ ಇರುವರು. ದೇವೇಂದ್ರನ ಪಕ್ಕದಲ್ಲಿ ಗುರು ಬೃಹಸ್ಪತಿಗಳೂ ಮಂಡಿಸಿರುವರು. ಸ್ತುತಿಪಾಠಕರು ಸ್ತುತಿಗೀತ [೧೩] ವನ್ನು ಹೇಳುವರು. ನರ್ತಕರು ನರ್ತಿಸುವರು. ಆ ವೇಳೆ—

(ನಾರದನು ವೈಷ್ಣವಸಂಕೀರ್ತನ ಮಾಡುತ್ತ[೧೪] ಪ್ರವೇಶಿಸುವನು. ಎಲ್ಲರೂ ನಿಲ್ಲುವರು. ದೇವೇಂದ್ರನು ಬಳಿಯ ಆಸನದಲ್ಲಿ ನಾರದನನ್ನು ಕುಳ್ಳಿರಿಸಿ ಗೌರವಿಸುವನು.)

ದೇವೇಂದ್ರ:-ನಾರದರೆ! ಯಾವ ಲೋಕದಿಂದ ಬರೋಣವಾಯಿತು? ವಿಶೇಷವೇನು?

ನಾರದ:—ದೇವೇಂದ್ರಾ, ನಾನು ಭೂಲೋಕದಿಂದ ಬರುತ್ತಿರುವೆನು, ನಿನ್ನ ಕುಶಲವನ್ನು ವಿಚಾರಿಸಿಕೊಂಡು ಹೋಗಲು ಬಂದೆನು. ಕುಶಲವೇ?

ದೇವೇಂದ್ರ.—ಕುಶಲ. ನಿಮ್ಮ ಆಗಮನದಿಂದ ನನ್ನ ಸಭಾಮಂದಿರವು ಪವಿತ್ರವಾಯಿತು. ಭೂಲೋಕದಲ್ಲಿ ಸಜ್ಜನರು ಕ್ಷೇಮವಾಗಿರುವರೆ?

ನಾರದ:—ಆಹಾ! ಕ್ಷೇಮ. (ಯಮನನ್ನು ನೋಡಿ) ಯಮಧರ್ಮ! ನಿನ್ನ ಭಕ್ತರ ವಿಷಯವಾಗಿ ನೀನೇನೂ ವಿಚಾರಿಸುವದಿಲ್ಲವೆ?

ಕುಬೇರ:—ನಾರದರೆ, ಕಾಲಾಂತಕ ಭಯಂಕರ ಭಾವೀಯನಾದ ಯಮದಂಡೇಶ್ವರನಿಗೆ ಭಕ್ತರು ಯಾರಪ್ಪಾ, ಅಂತಹ ಮಹಾತ್ಮರು?

ನಾರದಃ—ನಿಜವಾಗಿಯೂ ಮಹಾತ್ಮರೆ! (ಯಮನನ್ನು ನೋಡಿ ಮುಗುಳ್ನಗುವನು.)

ಯಮ:—ನಾರದರೆ! ನಾನು ಕೇಳಬೇಕೆಂದಿರುವಾಗ ನೀವೇ ಕೇಳಿದಿರಿ, ನನ್ನ ಭಕ್ತರಾದ ಮದ್ರದೇಶಾಧಿಪತಿಗಳಾದ ಸಾವಿತ್ರೀ ಸತ್ಯವಾನರು ಕುಶಲವಷ್ಟೆ?

ನಾರದ:—ಆಹಾ! ಪರಮ ಕುಶಲ! ಯಮಧರ್ಮ! ನಿನ್ನ ಮೇಲೆ ಅವರು ತುಂಬಾ ಭಕ್ತಿನಿಷ್ಠರಾಗಿರುವರು. ನಾನು ಕಣ್ಣಾರೆ ಕಂಡೆನು!

ಯಮಧರ್ಮನೆ ತಮ್ಮ ಕುಲದೈವತವೆಂದು ಅವರ ನಂಬುಗೆ. ಯಮನ ವಿಗ್ರಹವೇ ಅವರ ಮುಖ್ಯ ಪೂಜಾ ವಸ್ತು

ಕುಬೇರ:-ಆಶ್ಚರ್ಯ! ಯಮನೆಂದರೆ ಗಡಗಡನೆ ನಡಗುವ ಮರ್ತ್ಯರು ಯಮಪೂಜೆಯನ್ನು ಮಾಡುವರೆ? ಅತ್ಯಾಶ್ಚರ್ಯ!

ಬೃಹಸ್ಪತಿ.— ಕುಬೇರಾ, ಹಾಗೆ ನಡುಗುವವರು ಪಾಪಿಗಳು. ಪುಣ್ಯಾತ್ಮರಿಗೆ ಯಮನು ಸೌಮ್ಯ ಸ್ವರೂಪನಲ್ಲವೆ? ಸಾವಿತ್ರಿಯಾದರೋ ಯಮನಿಂದಲೇ ಸರ್ವ ಸೌಭಾಗ್ಯಗಳನ್ನು ಪಡೆದು ಸಾಧ್ವಿಯಾದುದರಿಂದ, ಅವಳು ಯಮನನ್ನು ಪೂಜಿಸುವದರಲ್ಲಿ ಏನೂ ಆಶ್ಚರ್ಯವಿಲ್ಲ.

ನಾರದ.— ಹೌದು. ದೇವಗುರುಗಳ ಮಾತು ಯಥಾರ್ಥವಾಗಿದೆ. ಆ ಸಾಧ್ವೀಮಣಿಯ ಅಭಿಪ್ರಾಯವಾದರೂ ಹೀಗೇ ಇದೆ- ಅಷ್ಟದಿಕ್ಪಾಲಕರಲ್ಲಿ ದೇವೇಂದ್ರನನ್ನು ಬಿಟ್ಟರೆ ಯಮನಷ್ಟು ನಿಗ್ರಹಾನುಗ್ರಹ ನೀತಿ ಪಾರಾಯಣ-ದಂಡಶಿಕ್ಷರು ಬೇರಿಲ್ಲವೆಂದೇ ಆ ಪುಣ್ಯ ದಂಪತಿಗಳ ನಂಬುಗೆ.

ಕುಬೇರ (ಕೋಪದಿಂದ):—ಏನೇನು! ಯಮನನ್ನು ಹೊಗಳಿ, ನಮ್ಮನ್ನು ತೆಗಳಿದರೆ?

ನಾರದ.— ಛೆ! ಹಾಗಿಲ್ಲಲ್ಲಾ! ಯಮಧರ್ಮನ ಕರ್ತವ್ಯಗುಣವನ್ನು ಪ್ರಶಂಸೆಮಾಡಿದರೇ ಹೊರತು, ನಿಮ್ಮನ್ನೆಲ್ಲಾ ದೂಷಣೆ ಮಾಡಲಿಲ್ಲವಲ್ಲಾ ಅವರು!

ಕುಬೇರ —ಓಹೋ! ಅದಕ್ಕೆ ನೀವೇನು ಹೇಳಿದಿರಿ ನಾರದರೆ?

ನಾರದ.—ನಾನೇನು ಹೇಳಲಿ? ಅವರವರ ಇಷ್ಟ ದೈವತವನ್ನು ಪೂಜಿಸುವುದು ಅವರವರ ಧರ್ಮ, ಎಂದೆನು.

ಬೃಹಸ್ಪತಿ:-ನಿಜ, ಇದಕ್ಕಾಗಿ ಕುಬೇರಾದಿಗಳು ಕೋಪಿಸುವ ಕಾರಣವಿಲ್ಲ. ಅವರವರ ಇಷ್ಟ ದೈವತವನ್ನು ಹೊಗಳುವದೂ ಪೂಜಿಸುವದೂ ಆ ಆ ಭಕ್ತರಿಗೆ ಸಹಜವೇ ಸರಿ. ಇದರಿಂದ ಉಳಿದವರ ಮಾಹಾತ್ಮ್ಯಕ್ಕೆ ಚ್ಯುತಿಯುಂಟಾಗುವುದು ಹೇಗೆ? ದಿಕ್ಪಾಲಕರೆಲ್ಲರೂ ಸರಿಸಮಾನರು.

ನಾರದ.—ನಿಜ. ನಿಜ. ಇತ್ತಣಿಂದ ಪ್ರದಕ್ಷಿಣೆ ಮಾಡಿದರೆ ಯಮನಿಗೆ ಎರಡನೇ ಸ್ಥಾನವೂ, ಅತ್ತಣಿಂದ ಮಾಡತೊಡಗಿದರೆ ಕುಬೇರನಿಗೆ ಎರಡನೇ ಸ್ಥಾನವೂ ಬಂದೇ ಬರುತ್ತೆ

ಕುಬೇರ:—ಹಾಗೆ ಅಪಸವ್ಯವಾಗಿ ಯಾರೂ ಪ್ರದಕ್ಷಿಣೆ ಮಾಡುತ್ತಿಲ್ಲವಯ್ಯಾ ನಾರದರೆ! ಏನಾದರೂ ಹೇಳಿ ಸಮಾಧಾನ ಮಾಡಬೇಕೆಂದು ಬಯಸುವಿರಾ? ಸಾವಿತ್ರಿ ಯಮನನ್ನು ಪೂಜಿಸುವದರಲ್ಲಿ ನನ್ನದೇನೂ ಹೋಕಿಲ್ಲ, ಆದರೆ ಅದಕ್ಕೆ ಕಾರಣವಾದ ಯಮನ ಕಾರ್ಯವು ಮಾತ್ರ ನ್ಯಾಯವಿರುದ್ಧವೆಂದು ನಾನು ಸಾರಿ ಹೇಳಬಲ್ಲೆನು

ಯಮ:—ಅದು ಹೇಗೆ?

ಕುಬೇರ:–ಹೇಗೆಂದರೆ? [೧೫] ಯಃಕಶ್ಚಿತಳಾದ ಮರ್ತ್ಯ ನಾರಿಯೊಬ್ಬಳ ಮಾತಿಗೆ ಸೋತು, ಅವಳಿಗೆ ನೀನು ಕೊಟ್ಟ ವರಗಳು ನಿನ್ನ ಬುದ್ಧಿಯನ್ನು ಮೀರಿವೆ! ಧರ್ಮಕ್ಕೆ ವಿರೋಧವಾಗಿವೆ! ನೀನು ಬ್ರಹ್ಮದ್ರೋಹಿಯಾಗಿರುತ್ತೀ!

ಯಮ:—ಓಹೋ! ಕುಬೇರಾ! ನಾನು ಬ್ರಹ್ಮದ್ರೋಹಿಯಾಗಿದ್ದ ಬ್ರಹ್ಮದೇವನನೇ ವಿಚಾರಿಸಿಕೊಳ್ಳುವದಿಲ್ಲವೆ? ನಿನಗೇಕೆ ಈ ಗೊಡವೆ?

ಕುಬೇರ:—ಬ್ರಹ್ಮನು ಕಮಲನಾಳದೊಳಗೆ ಕಣ್ಣುಮುಚ್ಚಿ ಕುಳಿತಿ ಬೇಕು! ಅವನಿಗೆ ತಿಳಿದಿದ್ದರೆ ಆಗಲೇ ಆಗಿಬಿಡುತ್ತಿತ್ತು ನಿನ್ನ ಪರಿಣಾಮ

ಯಮ.—ಅಯ್ಯಾ! ಬ್ರಹ್ಮಪುತ್ರರಾದ ನಾರದರೆ! ನಾನು ಧರ್ಮ ಕಟ್ಟುಬಿದ್ದು ಸಾವಿತ್ರಿಗೆ ಕೊಟ್ಟವರಗಳ ವಿವರವನ್ನು ಬ್ರಹ್ಮದೇವರಿಗೆ ಅರಿ ಮಾಡಿಕೊಂಡಿದ್ದೇನೆ. ಅವರೂ ಸಮ್ಮತಿಯ ಮುದ್ರೆಯನ್ನು ದಯಮಾ ರುತ್ತಾರೆ!

ಕುಬೇರ (ನಕ್ಕು):–ಅಹ್ಹಹ್ಹ! ಅದೆಲ್ಲಿಯೋ ಪರಧ್ಯಾನ ಪರವಶನ ಗಿಯೋ–ಯಮಧರ್ಮನು ಮಾಡುವವೆಲ್ಲ ಧರ್ಮಕ್ಕೆ ಸರಿಯಾಗಿಯೇ ಇದ್ದಿ ತೆಂಬ ಮೂಢನಂಬಿಕೆಯಿಂದಲೋ- ವಿಚಾರ ಮಾಡದೆ ಬ್ರಹ್ಮದೇವ ಸಮ್ಮತಿಮುದ್ರೆಯನ್ನು ಕೊಟ್ಟಿರಬಹುದು! ಪಾಪ! ಕೊಡದೇನು ಮಾ ಯಾನು?

ಯಮ:–ಕುಬೇರಾ! ಎಚ್ಚರದಿಂದ ಮಾತಾಡು! ಜಗತ್ಪಿತಾಮಹನಾ ಬ್ರಹ್ಮದೇವನಿಗೆ ಹೆಸರಿಡುವ ನೀನೇ ಬ್ರಹ್ಮದ್ರೋಹಿಯಾಗಬೇಕಾದೀತ ಕಡೆಗೆ!

ಕುಬೇರ:—ವಿಚಾರ ಮಾಡಲಿ. ಆಗ ಯಾರು ದ್ರೋಹಿಗಳೋ ಆ ಬ್ರಹ್ಮನಿಗೇ ಗೊತ್ತಾದೀತು.

ಯಮ:—ಅಯ್ಯಾ ನಾರದರೆ! ನಿಮ್ಮ ತಂದೆಗೆ ನಾನು ದ್ರೋಹ ಮಾಡಿದುದು ನಿಜವಾದರೆ ನೀವೇಕೆ ಸುಮ್ಮನಿರುವಿರಿ? ಹೇಳಿರಿ ನಿಮ್ಮ ತಂದೆಯೊಡನೆ!

ನಾರದ.–ನಾನೇ?–ಛೆ! ಛೆ! ನನಗೆ ಬೇಡಪ್ಪಾ! ನಾರಾಯಣ! ನನ್ನ ವಿಧಿ ಎಲ್ಲಿ ಹೋದರೂ ಬಿಡಲಿಲ್ಲ "ಜಗಳಗಂಟಿ" ಎಂಬುದೀಗ ಸಾರ್ಥಕವಾಯಿತು.

ಕುಬೇರ.–ಹೇಳಿರಿ ನಾರದರೆ! ಒಬ್ಬ ಕ್ಷುದ್ರ ಹೆಂಗುಸಿಗೆ ಸೋತುಹೋದ ಕ್ಷುದ್ರ ಸ್ವಭಾವಿಯಾದ ಯಮನು, ಧರ್ಮಸಿಂಹಾಸನಕ್ಕೆ ಎಷ್ಟರ ಮಟ್ಟಿಗೆ ಯೋಗ್ಯನಿರುವನೆಂದು ಚನ್ನಾಗಿ ವಿಚಾರ ಮಾಡಲಿಕ್ಕೆ ಹೇಳಿರಿ ನಿಮ್ಮ ತಂದೆ ಬ್ರಹ್ಮದೇವನಿಗೆ!

ಯಮ:—ಆಹಾ! ಈ ಧನಮತ್ತ ಕುಬೇರನ ಮಾತುಗಳು ಅಸಹನೀಯವಾಗಿವೆ! ಪಾಪಕ್ಕೆ ಮೂಲ ಕಾರಣವಾದ ದ್ರವ್ಯದ ಭಾಂಡಾರಿಯಾದ ಈ ಕುಬೇರನಿಗೆ ಮದೋನ್ಮತ್ತಿನಿಂದ ತಲೆಯೇ ತಿರುಗಿರಬೇಕು!

ಕುಬೇರ:—ತಲೆತಿರುಗಿದವನು ಪ್ರಪಂಚವೇ ತಿರುಗುತ್ತಿದೆ, ಎಂದ ಹಾಗಿದೆ ಈ ಮಾತು! ಯಮಾಂತಕಾ! ನಿನ್ನ ಅವಿಧೇಯ ವರ್ತನೆಯಿಂದ ನೀನು ಬೇಗನ ನಾಶವಾಗುವಿ!

ಯಮ(ಕೋಪದಿಂದ):-ಛಿ! ದುರಾತ್ಮ! ಹದ್ದು ಮೀರುತ್ತಿರುವಿ! ನಿಲ್ಲಿಸು!

ಕುಬೇರ:—(ಎದ್ದು) ಛಿ! ಅಯೋಗ್ಯ! ಬೆದರಿಸುವಿಯಾ? (ಮುಷ್ಟಿಗಟ್ಟಿನಿಲ್ಲುವನ್ನು.)

ಯಮ (ಎದ್ದು ಮುಷ್ಟಿಗಟ್ಟಿ) ಓಃ! ಮುಂಗಾಲು ಕೆದರಿ ಯುದ್ಧಕ್ಕೆ ಕರೆಯುವಿಯಾ?

ಬೃಹಸ್ಪತಿ (ಬೇಗನೆದ್ದು ಅವರ ನಡುವೆ ನಿಂತು):-ಹಾ! ನಿಲ್ಲಿಸಿರಿ ನಿಲ್ಲಿಸಿರಿ! ಕುಬೇರ–ಯಮಧರ್ಮರೆ! ಅನುಚಿತವು! ಅನುಚಿತವು! ಅಲ್ಪ ಮಾತಿನಿಂದ ಹೀಗೆ ಹೊಡೆದಾಡಿಕೊಳ್ಳಬಹುದೆ? ಸಾಕು! ದೇವಸಭೆಗೆ ಅನುಚಿತವಾದ ಈ ಕಲಹವನ್ನು ನಿಲ್ಲಿಸಿರಿ!

ಕುಬೇರ:—ಒಳ್ಳೆಯದು ಗುರುಗಳೇ! (ಮುಂದೆ ನಸ್ನೋಪ್ಪು ತಿರಸ್ಕಾರ ದಿಂದ ನೋಡಿ ರಭಸದಿಂದ ಹೊರಟು ಹೋಗುವನು)

ನಾರದ:—ನಾರಾಯಣ! ನಾರಾಯಣ!

---

ದೃಶ್ಯ ೬—ಗಗನವೀದಿ

ಕುಬೇರ (ಪ್ರವೇಶಿಸಿ—ಸ್ವಗತ):—ಹೂಂ. ಕಡೆಗೆ ಇಂದ್ರಸಭೆಯಲ್ಲಿ ನನಗೇ ಅವಮಾನವಾಯಿತು. ಏಳನೆಯ ದಿಕ್ಕೇ ಕಡಿಮೆಯದು ನಾನಾದರು ಅದನ್ನು ಕೇಳರಿ ತೋರಬೇಕೆ? ಉಬ್ಬಾ! ಆ ಗರ್ವಿಷ್ಠನಾದ ಯಮನು ಎದೆಷ್ಟು ಧಿಃಕಾರದಿಂದ ಮಾತಾಡಿದ! ಇದಕ್ಕೇನಾದರೂ ಪ್ರತೀಕಾರ ಮಾಡಲೇಬೇಕು! ಹೇಗೆ—

(ತೆರೆಯಲ್ಲಿ [೧೬] ನಾರದನ ಸಂಕೀರ್ತನೆಯನ್ನು ಕೇಳಿ ದಿಟ್ಟಿಸಿ) ತ್ರಿಲೋಕ ಸಂಚಾರಿಗಳು ಹೋಗುತ್ತಿದ್ದಾರೆ! ನಾನು ಆ ಜಗಳಗಂಟರ ನೆರವು ಮಾಡಿಕೊಂಡು ನನ್ನ ಕಾರ್ಯವನ್ನು ಕೊನೆಗಾಣಿಸುವೆನು. ನಾರದರ ಸಹಾಯವಿಲ್ಲದಿದ್ದರೆ ಯಾವದೂ ಜಯಪ್ರದವಾಗಿ ನೆರವೇರಲಾರದು. (ತೆರೆಯ ಬದಿಗೆ ಹೋಗಿ) ಸ್ವಾಮಿ, ನಾರದರೆ! ನಾರದರೆ!

ನಾರದ (ತೆರೆಯಿಂದ) ಹೋ! ಕುಬೇರನೆ? (ಬರುವನು.)

ಕುಬೇರ (ವಂದಿಸಿ ಕರೆತರುತ್ತ).—ಸ್ವಾಮಿ, ನಿಮ್ಮೊಡನೆ ಸ್ವಲ್ಪ ಮಾತಾಡುವ ಕೆಲಸವಿದ್ದುದರಿಂದ, ನಿಮ್ಮ ಲೋಕಸಂಚಾರಕ್ಕೆ ವಿಘ್ನವನ್ನುಂಟುಮಾಡಿದೆನು, ಮನ್ನಿಸಿರಿ.

ನಾರದ:—ಹಾಗೇನು? ನಾನೂ ನಿನ್ನ ಅಲಕಾಪುರಿಯ ಕಡೆಗೇ ಹೊರಟಿದ್ದೆನು; ಆದರೆ ಕುಬೇರಾ! ನೀನು ನನ್ನ ಮೇಲೆ ಸಿಟ್ಟಿನಿಂದಿರುವೆಯೋ ಏನೋ ಎಂದು ಹೆದರಿದ್ದೆನು! ಈಗ ನೀನೇ ಮನ್ನಿಸಿರಿಯೆಂದು ಹೇಳಿದುದರಿಂದ ಅಭೇದಾನಂದವಾಯಿತು.

ಕುಬೇರ:—ಸತ್ಯವಾದಿಗಳಾದ ನಿಮ್ಮ ಮೇಲೆ ಸಿಟ್ಟು ಮಾಡಿದರೆ, ಶ್ರೀಮನ್ನಾರಾಯಣನ ಮೇಲೆ ಸಿಟ್ಟು ಮಾಡಿದಂತೆಯೆ ಸರಿ

ನಾರದ:—ಜಯ ನಾರಾಯಣ! ಹಾಗಲ್ಲ. ಈ ನಾರದನು ಜಗಳಗಂಟನೆಂದು ದೂರುವಿಯೋ ಏನೋ ಎಂದಿದ್ದೆ.

ಕುಬೇರ.—ತಾವು ಜಗಳಗಂಟರಾದರೂ ಅದರ ಪರಿಣಾಮವು ಒಳ್ಳೆಯದಾಗುವದೆಂದು ನಾನು ಚನ್ನಾಗಿ ಬಲ್ಲೆನು. ನಾರದರೆ! ಈಗ ನಮ್ಮೊಳಗೆ ತಂದಿಟ್ಟ ಈ ಕಲಹದಲ್ಲಿ ಯಾರಿಗೆ ಮೇಲಾಗುವದು? ಯಮನಿಗೋ-ನನಗೋ? ಸತ್ಯ ಹೇಳಿರಿ!

ನಾರದ —ಅದು ನೀನೇ ಊಹಿಸಿ ನೋಡು-ನೋಡೋಣ!

ಕುಬೇರ:—ಆದರೆ ಯಮನ ವರ್ತನೆಯಿಂದ—

ನಾರದ —ಅಂದರೆ?-

ಕುಬೇರ —ಅಂದರೆ ಗೊತ್ತಿಲ್ಲವೆ?-ಯಮನು ಮಾಡಿದ ಆ ಬ್ರಹ್ಮದ್ರೋಹಕಾರಣದಿಂದ ಬ್ರಹ್ಮಪುತ್ರರಾದ ನಿಮಗೆ ತಿರಸ್ಕಾರವುಂಟಾಗಿರಬೇಕು

ನಾರದ.—ಆ! ಸರಿಯಾಗಿ ಹೇಳಿದಿ. ಆದುದರಿಂದ—

ಕುಬೇರ.—ಆದುದರಿಂದ ನನ್ನ-ಅವನ ಈ ಕಲಹದಲ್ಲಿ ನನಗೇ ಮೇಲಾದೀತು!

ನಾರದ.—ಸಂದೇಹವೇ ಬೇಡ, ಕುಬೇರಾ! ಸಾವಿತ್ರಿಗೆ ಅವನು ಯಾವಾಗ ವರವನ್ನು ಕೊಟ್ಟನೋ, ಆಗಲೇ ನಾನು ಅವನ ಮೇಲೆ ಕತ್ತಿ ಮಸೆಯಲು ಪ್ರಾರಂಭಿಸಿದ್ದೇನೆ ಆ ವಿಷಯದಲ್ಲಿ ನನ್ನ ತಂದೆ ಹೆಚ್ಚು ವಿಚಾರಿಸುವ ಗೊಡವೆಗೆ ಹೋಗಲಿಲ್ಲ. ನಾನಾದರೂ ತಕ್ಕ ಸಹಾಯ-ಸಾಧನಗಳು ದೊರಕದೆ ಇಷ್ಟು ಕಾಲ ಬಾಯಿಮುಚ್ಚಿ ಕುಳಿತಿದ್ದೆನು. ಇನ್ನು ಮೇಲೆ ನನಗೆ ನೀನೊಬ್ಬನು ಮುಖ್ಯ ಸಹಾಯಕನು ಸಿಕ್ಕಿದಿ!

ಕುಬೇರ.—ನೀವು ನನಗೆ ನಿಶ್ಚಯವಾಗಿಯೂ ಸಹಾಯ ಮಾಡುವಿರಾ?

ನಾರದ.—ಮಾಡಲೇಬೇಕು. ಈ ದಿನ ದೇವಸಭೆಯಲ್ಲಿ ನಾನು ಬಿತ್ತಿದ ಕಲಹವೇ ಯಮಪತನ ಕಾರ್ಯದ ಮೂಲ ಬೀಜವೆಂದು ತಿಳಿ! ಇನ್ನು ಆ ಧರ್ಮ ಪಟ್ಟಕ್ಕೆ ಬೇರೊಬ್ಬ ಯೋಗ್ಯ ಅಧಿಕಾರಿಯನ್ನು ಗೊತ್ತು ಮಾಡಬೇಕಾಗಿದೆ! ಅದೂ ನನ್ನ ಮನಸ್ಸಿಗೆ ತಕ್ಕಹಾಗೆಯೇ ಗೊತ್ತಾಗಿ ಹೋಯಿತು!

ಕುಬೇರ:—ಅವನಾರು?

ನಾರದ:—ಕುಬೇರನು! ನೀನು!

ಕುಬೇರ:—ಸತ್ಯವಾಗಿಯೂ ನೀವು ನನಗೆ ಧರ್ಮಾಧಿಕಾರವನ್ನು ಕೊಡಿಸುವಿರಾ?

ನಾರದ:-ನಿಶ್ಚಯವಾಗಿಯೂ ನಿನಗಾ ಸುಯೋಗವು ಬೇಗನೆ ಬರುವುದು! ಲೋಕಪಿತಾಮಹನಿಗೆ ದ್ರೋಹ ಮಾಡಿದ ಈ ಯಮನ ಗತಿ, ಅಧೋಗತಿಯೇ ಸರಿ!

ಕುಬೇರ:—ಹಾಗಾದರೆ ಸಾಕು! ನನಗೆ ಧರ್ಮಾಧಿಕಾರದ ಗೌರವ ಬರಬೇಕೆಂದೇನೂ ನಾನು ಆಶೆ ಇಟ್ಟಿಲ್ಲ! ಒಮ್ಮೆ ಯಮನ ಗರ್ವ ಮುರಿದರೆ ಸಾಕಾಗಿದೆ!

ನಾರದ:—ಅದಂತೂ ಖಂಡಿತ! ಗೌರವವು ತಾನಾಗಿ ಬರುವಾಗ ನೀನು ಬೇಡೆನ್ನಲಾರೆಯಷ್ಟೆ?

ಕುಬೇರ:—ಅಂತಹ ಗೌರವ ಪದವಿಯನ್ನು ಅಲಂಕರಿಸಲು ನಾನು ಸಮರ್ಥನೆಂದು ನೀವುಗಳು ತಿಳಿಯುವುದಾದರೆ-ಬಹಳ ಸಂತೋಷವೇಸರಿ!

ನಾರದ:—ಹಾಗೆಯೇ ಆಗುತ್ತದೆ! ಪದಚ್ಯುತನಾದನೆಂದರೆ ಯಮನ ಗರ್ವವು ತನ್ನಷ್ಟಕ್ಕೆ ತಾನೇ ಮುರಿಯುತ್ತೆ. ಅಂತೆಯೇ ಧರ್ಮಾಧಿಕಾರವೂ ತಾನಾಗಿ ನಿನ್ನ ಪಾಲಿಗೇ ಬರುತ್ತೆ. ಇವು ನನ್ನ ಊಹೆ.

ಕುಬೇರ:—ಯಮಪಟ್ಟಣವು ಖಂಡಿತ ನನಗೇ ಹೇಗೆನ್ನುವಿರಿ?

ನಾರದ:—ಪ್ರತಿಜ್ಞೆಮಾಡಿ ಹೇಳುತ್ತೇನೆ ಕುಬೇರಾ! ನಿನ್ನನ್ನು ಯಮನ ಧರ್ಮಸಿಂಹಾಸನಕ್ಕೆ ಅಧಿಕಾರಿಯನ್ನಾಗಿ ಮಾಡಿಸದಿದ್ದರೆ ನಾನು ಅಸತ್ಯವಾದಿಯೆಂದು ಅಪಖ್ಯಾತನಾಗಲಿ! ಆಯಿತಷ್ಟೆ?

ಕುಬೇರ:—ಆಯಿತು!

ನಾರದ (ಯೋಚಿಸಿ):—ಆದರೆ ಕುಬೇರಾ, ನಮ್ಮೊಳಗೊಂದ ಯೋಚನೆ! ನಿನಗೆ ಧರ್ಮಾಧಿಕಾರವು ಸಿಕ್ಕಿದ ಮೇಲೆ ಯಮನು ಸಾವಿತ್ರಿಗೆ ಕೊಟ್ಟ ವರಗಳ ವಿಷಯದಲ್ಲಿ ತಕ್ಕ ನಡೆವಳಿಕೆ ತೆಗೆದುಕೊಳ್ಳುವ ಆಲೋಚನೆ ಉಂಟೋ—ಇಲ್ಲವೊ?

ಕುಬೇರ (ಯೋಚಿಸಿ):-ಇಲ್ಲದೇ ಉಂಟೆ? ನಾರದರೆ! ಅವೆಲ್ಲ ಪುನವಿಚಾರಕ್ಕೆ ತಕ್ಕ ವರಗಳೇ ಆಗಿವೆ. ಬ್ರಹ್ಮಲಿಖಿತಕ್ಕೆ ವಿರೋಧವಾ

ಯಮನು ಸತ್ಯವಾನನಿಗೆ ಕೊಟ್ಟ ಆಯುಷ್ಯವನ್ನು ರದ್ದು ಪಡಿಸಬೇಕಾದೀತು!

ನಾರದ:—ಅದೇ ನನ್ನ ಮನಸ್ಸಿಗೂ ಬಂದ ಶಂಕೆ! ಬ್ರಹ್ಮದತ್ತ ಆಯುರ್ದಾಯದ ಮೇಲೆ ಇಷ್ಟು ವರ್ಷ ಅವನು ಬದುಕಿದುದೇ ವಿಶೇಷ. ಇದರ ಮೇಲೆ ಸಾವಿತ್ರಿಗೆ ಪುತ್ರಲಾಭವೂ ಆಯಿತಷ್ಟೆ? ಇನ್ನು ಯಮನು ಕೊಟ್ಟ ಆಯುಷ್ಯವನ್ನು ರದ್ದುಪಡಿಸಿದರೇ ಲೋಕವಿಧಾತನ ಕೀರ್ತಿಯುಳಿದೀತು!

ಕುಬೇರ:—ನಿಜ ನಿಜ! ಇದು ಬ್ರಹ್ಮದೇವನೇ ವಿಚಾರ ಮಾಡಿ ಒಪಿಕೊಳ್ಳಬೇಕಾದ ವಿಷಯು.

ನಾರದ:—ಅದಕ್ಕೆಲ್ಲಾ ನಾನಿದ್ದೇನೆ, ಆದರೆ ಹೀಗಾದರೆ ಪಾಪ! ಪತಿವ್ರತೆಯಾದ ಸಾವಿತ್ರಿಯನ್ನು ಮಾತ್ರ ಪತಿವಿಯೋಗ ದುಃಖದಲ್ಲಿ ಮುಳುಗಿಸಿದಂತಾಗುತ್ತೆ!

ಕುಬೇರ:—ಅದಕ್ಕೇನು ಮಾಡುವದು? ಸತ್ಯವಾನನು ಅಲ್ಪಾಯುಷಿಯೆಂದು ತಿಳಿದೇ ಅವನನ್ನು ವರಿಸಿದಳಲ್ಲವೆ? ಈಗ ಅವಳು ಯಮನಿಂದ ಪಡೆದ ವರದಿಂದ ಪುತ್ರಭಾಗ್ಯವನ್ನು ಬೇರೆ ಹೊಂದಿರುವದರಿಂದ, ಪತಿವಿಯೋಗ ದುಃಖವನ್ನು ಅಪತ್ಯ ಪ್ರೇಮದ ಆನಂದದಲ್ಲಿ ಕಳೆದುಕೊಳ್ಳಲಿ! ಅಲ್ಲದೆ ಅವಳು ವಿಧವಾಧರ್ಮವನ್ನು ಜಗತ್ತಿಗೆ ತೋರಿಸಲು ಆದರ್ಶ ರಮಣಿಯಾಗಿ ತನ್ನ ಆಯುಶ್ಶೇಷವನ್ನು ಕಳೆಯಲಿ!

ನಾರದ:—ಹೌದು, ಸರಿ. ಕುಬೇರಾ! ನಾನು ಈಗಲೇ ಲೋಕಪಿತಾಮಹನ ಬಳಿಗೆ ಹೋಗಿ ಯಮ ಪತನಕ್ಕೆ ತಕ್ಕ ಮದ್ದನ್ನು ಅರೆಯುವೆನು.

ಕುಬೇರ:–ಒಳ್ಳೆಯದು, ನಾರದರೆ! ನಾನು ನಿಮ್ಮನ್ನೇ ನಂಬಿದ್ದೇನೆ! (ವಂದಿಸಿ ಹೋಗುವನು.)

ನಾರದ (ಇನ್ನೊಂದು ಭಾಗದ ತೆರೆಯೊಳಗೆ ಹೋಗಿ–ಪುನಃ ರಂಗಕ್ಕೆ ಬಂದು, ಕುಬೇರನು ಹೋದ ಕಡೆಗೆ ನೋಡಿ ನಕ್ಕು):—ಆಹಾ! ಮೂರ್ಖ ಕುಬೇರಾ! ನಿನಗೆ ಧರ್ಮಸಿಂಹಾಸನವು ಬೇಕೇ? ಆಗಲಿ. ಸ್ವಲ್ಪ ಕುಳಿತು ನೋಡು ಅದರ ರುಚಿಯನ್ನು! ಸತ್ಯವಾನನ ಆಯುಷ್ಯವು ರದ್ದಾಗಬೇಕ

ಲ್ಲವೆ? ಆಹಾ! ಸಾವಿತ್ರಿಯ ಪಾತಿವ್ರತ್ಯ ಪ್ರಭಾವವು ಲೋಕಕ್ಕೆಲ್ಲಾ ತಿಳಿಯಲು ಅದೇ ದಾರಿ! ಎಲ್ಲೈ ನನ್ನ ತಂಬೂರಿಯೆ! ನೋಡಿದಿಯಾ? ನಾರದನು ತಂಟೆಗಾರನೆಂದು ಗೊತ್ತಿದ್ದರೂ ಎಲ್ಲರಿಗೂ ನಾರದನೆ ಬೇಕು! ಆಹಾ! ನಾರಾಯಣಾ! ನಿನ್ನ ಮಹಿಮೆ! [೧೭] (ಸಂಕೀರ್ತನೆ ಮಾಡುತ್ತ ಹೋಗುವನು.

---

### ದೃಶ್ಯ ೭—ಬಡ ಗುಡಿಸಲು

(ಮುರುಕು ಮಂಚದಲ್ಲಿ ಹರಕು ಚಾಪೆಯಲ್ಲಿ ಭದ್ರಬಾಹು ಮರಣಾವಸ್ಥೆಯಲ್ಲಿ ಮಲಗಿರುವನು. ಭೈರವಿ ಬಳಿಯಲ್ಲಿ ಕುಳಿತು ದುಃಖಿಸುವಳು.)

ಭೈರವಿ:—ಅಯ್ಯೋ ದುಷ್ಟವಿಧಿಯೆ! ಅಂದು ಪೆಟ್ಟು ತಾಗಿ ಬಿದ್ದ ನನ್ನ ಪತಿಯನ್ನು ಹಾಗೆಯೇ ಮಲಗಿಸಿಬಿಟ್ಟೆಯಾ? ದೇವಾ! ನಿನಗೆ ದಯವಿಲ್ಲವೆ? ಕಠಿಣವಾದ ಜ್ವರದಿಂದ ಪತಿಯನ್ನು ಏಕೆ ಪೀಡಿಸುವಿ? ಬಡವಳಾದ ನನಗೆ ಯಾರು ದಿಕ್ಕು?

ಭದ್ರ (ವಿಕಾರದಿಂದ).—ಹಾ! ಹೋ! ಯಮದೂತರು! ಅ....ಯ್ಯೋ! ಸಾಯುತ್ತೇನೆ! ಹಾ!—ಆ! ನೀ..ರು! .ಸತ್ತೆ ಸ. ತ್ತೆ!

ಭೈರವಿ (ಹೆದರಿ ಗಡಿಬಿಡಿಯಿಂದ ನೀರು ತಂದು ಪತಿಯ ಬಾಯಿಗೆ ಸೂಸುವಳು. ಭದ್ರಬಾಹು ಮರಣಸ್ಥಿತಿಯನ್ನು ತೋರಿಸಿ ನಿಶ್ಚೇಷ್ಟಿತನಾಗುವನು.) ಹಾ! ಇದೇನು! ನೀರು ಬಾಯಲ್ಲೇ ಇದೆ! (ಮೈ ಮುಟ್ಟಿ) ಅಯ್ಯೋ! ತಣ್ಣಗಾಗಿದೆ! ಹೋದನು! ಹೋದನು! ಅಯ್ಯೋ! (ಪತಿಯ ದೇಹದ ಮೇಲೆ ಬೀಳುವಳು.)

ನಾರದ (ಪ್ರವೇಶಿಸುತ್ತ [೧೮]):—ಜಯ! ನಾರಾಯಣ!

ಭೈರವಿ (ಎದ್ದು):—ಹಾ! ಇದಾರು? ಮಹಾತ್ಮರು! (ಎದ್ದು ಬಂದು ನಾರದನ ಕಾಲಡಿಗೆ ಬಿದ್ದು) ಸ್ವಾಮಿ! ಉದ್ಧರಿಸಬೇಕು!

ನಾರದ (ಹರಸುತ್ತ):—ಭೈರವಿ! ನಿನ್ನ ಪಾತಿವ್ರತ್ಯವು ಬೆಳಗಲಿ!

ಭೈರವಿ:—ಸ್ವಾಮಿ! ತಾವು ಯಾರೋ ನಾನರಿಯೆನು! ನೋಡಿದರೆ ದೇವಲೋಕದವರಂತೆಯೇ ಕಾಣುವಿರಿ!

ನಾರದ:—ಭದ್ರೆ! ನನಗೆ ನಾರದನೆಂದು ಹೆಸರು.

ಭೈರವಿ:—ಹೊ! ನಾರದ ಮಹಾಮುನಿಗಳೆ! ನನ್ನಂತಹ ದರಿದ್ರಳಿಗೂ, ತಮ್ಮಂತಹರ ದರ್ಶನ ಭಾಗ್ಯವು ಲಭಿಸುವದುಂಟೆ? ಆಹಾ! ಇದೇನು ಸ್ವಪ್ನವೋ ದೃಷ್ಟಾಂತವೊ!

ನಾರದ.—[೧೯] ಸ್ವಪ್ನದಲ್ಲಿ ದೃಷ್ಟಾಂತವೇ! ವನಿತಾಮಣೀ! ನಿನ್ನ ಉನ್ನತವಾದ ಸತೀಧರ್ಮಕ್ಕೆ ಮೆಚ್ಚಿ, ಗತಾಸುವಾದ ನಿನ್ನ ಈ ಪತಿಯನ್ನು ನೀನು ತಿರುಗಿ ಪಡೆದುಕೊಳ್ಳುವಂತಹ ಒಂದು ದಾ ರಿ ಯ ನ್ನು ನಿನಗೆ ತೋರಿಸಿ ಕೊಡಬೇಕೆಂದೇ ಇಲ್ಲಿಗೆ ಬಂದೆನು!

ಭೈರವಿ.—(ಅಡ್ಡ ಬಿದ್ದು) ಅಹಾ! ಶರಣು! ಶರಣು ಸ್ವಾಮಿ! ದಿಕ್ಕಿಲ್ಲದ ನನಗೆ ನೀವೇ ದಿಕ್ಕು! ಸರ್ವಜ್ಞರಾದ ತಮಗೆ ಹೆಚ್ಚೇನು ಹೇಳಲಿ? ಪತಿ ಹೀನೆಯಾದವಳ ಬಾಳು ವ್ಯರ್ಥವಲ್ಲವೆ? ಮಹಾತ್ಮರೆ! ನನಗೆ ಪತಿಭಿಕ್ಷೆಯನ್ನು ದಯಪಾಲಿಸಬೇಕು! (ಬಾಗುವಳು)

ನಾರದ.—ಸಾಧ್ವೀ! [illegible] ಮಹಾ ಪಾಪಿಯೂ ಪರಸ್ತ್ರೀ ಲಂಪಟನೂ ಆದ ಪತಿಯನ್ನೇ ಪರದೈವವೆಂದು ನಂಬಿರುವ ನಿನ್ನ ಪತಿಭಕ್ತಿಯನ್ನು ನೋಡಿದರೆ [illegible] ಸತೀ ಮಣಿ! ನಿನ್ನ ಪಾತಿವ್ರತ್ಯದ ಮಹಿಮೆಯಿಂದ ನಿನ್ನ [illegible]ಗಳೆಲ್ಲಾ ಭಸ್ಮವಾಗುವವು. ಭದ್ರೆ! ಅವನೀಗ ಯಮಲೋಕದ [illegible]ಲ್ಲಿರುವನು; ಆದರೆ ನಿನ್ನ ಪತಿನಿಷ್ಠೆಯ ಪ್ರಭಾವದಿಂದ ಯಮ[illegible]ಗಳೊಂದೂ ಅವನನ್ನು ಬಾಧಿಸುವದಿಲ್ಲ.

ಭೈರವಿ.—ಆದರೆ ಸ್ವಾಮಿ! ನಾನು ಹೆಚ್ಚು ಬಲ್ಲವಳಲ್ಲ. ಪತಿಯನ್ನು ಹಿಂಬಾಲಿಸುವದೇ ಸತಿಯ ಧರ್ಮವೆಂದು ಕೇಳಿದ್ದೇನೆ. ಪತಿ ನರಕದಲ್ಲಿದ್ದರೂ ಸ್ವರ್ಗದಲ್ಲಿದ್ದರೂ ನಾನು ಅವನೊಂದಿಗೇ ವಾಸವಾಗಿರಬೇಕೆಂದಿರುವೆನು. ಆ ಯಮನು ನನ್ನನ್ನೂ ಕೊಂಡೊಯ್ಯುವಂತೆ ಮಾಡಲಾರಿರಾ?

ನಾರದ:—ಸಾಧ್ವೀ! ನಾನೊಂದು ಮಾರ್ಗವನ್ನು ನಿನಗೆ ತೋರಿಸಿ ಕೊಡುವೆನು. ನೀನು ವಿಶ್ವಾಸವಿಟ್ಟು ಅದರಂತೆ ನಡೆದರೆ, ನಿನ್ನ ಮನೋಭೀಷ್ಟವು ಸಿದ್ಧಿಸುವದು.

ಭೈರವಿ.—ಅನುಗ್ರಹಿಸೋಣಾಗಬೇಕು.

ನಾರದ:—ಕೇಳು! ಈ ದೇಶದ ರಾಣಿಯಾದ ಸತೀ ಸಾವಿತ್ರೀದೇವಿ ಅಂದು ಯಮನಿಂದ ತನ್ನ ಪತಿಯನ್ನು ಬಿಡಿಸಿಕೊಂಡು ಬರಲಿಲ್ಲವೆ?

ಭೈರವಿ:—ಸ್ವಾಮಿ! ಮಹಾದೇವಿಯು ವರಪ್ರಸಾದದಿಂದ ಜನ್ಮವೆತ್ತಿದ ಮಹಾತ್ಮಳಾದ ಆ ರಾಣಿಗೂ ಹುಟ್ಟು ದರಿದ್ರಳಾದ ನನಗೂ ಸಾಮ್ಯವೆ?

ನಾರದ:—ಹಾಗೆ ತಿಳಿಯಬೇಡ ಭೈರವಿ! [೨೦] ಧರ್ಮದೃಷ್ಟಿಗೆ ದೊಡ್ಡವ-ಬಡವನೆಂಬ ಭೇದವಿಲ್ಲ. ನೀನು ಹೋಗಿ ಆ ಸಾವಿತ್ರೀದೇವಿಯ ಪಾದಕ್ಕೆ ಬಿದ್ದು, ಅವಳ ವರದ ಹಸ್ತವನ್ನು ತಲೆಯಮೇಲೆ ಧರಿಸಿಕೊಂಡು ಯಮಲೋಕಕ್ಕೆ ಹೋಗುವ ಶಕ್ತಿಯನ್ನು ಸಂಪಾದಿಸು. ಆಗ ನಿನ್ನ ಮನೋಭೀಷ್ಟವು ಫಲಿಸುವುದು! ಇನ್ನು ನಾನು ಹೋಗುವೆನು.

ಭೈರವಿ:—ತಮ್ಮ ಅಪ್ಪಣೆಯಂತೆಯೆ ನಡೆಯುವೆನು. (ನಾರದನ ಕಾಲಿಗೆ ಬೀಳುವಳು )

ನಾರದ:—ನಿನ್ನ ಮನೋಭೀಷ್ಟ[illegible] ನಿನ್ನ ಪಾತಿವ್ರತ್ಯವು ಬೆಳಗಲಿ. [೨೧] (ಹೋಗುವನು.)

ಭೈರವಿ (ಪ್ರಸನ್ನತೆಯಿಂದ):—ಆಹಾ! ಒಂದು ಹುಲ್ಲಿಗೆ ಸಮಾನಳಾದ ನನಗೆ, ಮಹತೋಮಹಿಮರಾದ ನಾರದ ಮಹಾಮುನಿಗಳ ದರ್ಶನವಾಯಿತು! ಅದೂ ನನ್ನ ಪತಿಯ ಅಂತ್ಯಾವಸ್ಥೆಯ ಈ ಸಮಯದಲ್ಲಿ! ಆಹಾ! ನಿಶ್ಚಯವಾಗಿಯೂ ನಾನು ಭಾಗ್ಯಶಾಲಿನಿಯೇ ಸರಿ! ಅವರು ಆಜ್ಞಾಪಿಸಿದಂತೆ ನಾನು ದಯಾಸಾಗರೆಯಾದ ರಾಣೀ ಸಾವಿತ್ರೀದೇವಿಗೇ ಶರಣು ಹೋಗುವೆನು. (ಪತಿಯ ಕಳೇಬರಕ್ಕೊಂದು ಹರಕು ಬಟ್ಟೆಯನ್ನು ಮುಚ್ಚಿ, ಹೋಗುವಳು.)

———

ದೃಶ್ಯ ೮—ಒಂದು ಕಾಲುದಾರಿ.

ಭೈರವಿ (ಪ್ರವೇಶಿಸಿ) ಸಾವಿತ್ರೀ ದೇವಿಗೆ ಶರಣಾಗತಳಾಗಬೇಕೆಂದೇನೋ ಹೊರಟು ಬಂದೆನು; ಆದರೆ ನನ್ನಂತಹ ದರಿದ್ರಳಿಗೆ ಮಹಾರಾಣಿಯ ಸಂದರ್ಶನವು ಹೇಗಾದೀತು? ದ್ವಾರಪಾಲಕರು........

(ಇದಿರುಗಡೆಯಿಂದ ಸುಮಾಲಿನಿಯೂ ಅವಳ ಹಿಂದೆ ಸತೀ ಸಾವಿತ್ರಿಯೂ ಬರುವರು, ಸುಮಾಲಿನಿಯ ಕೈಯಲ್ಲಿ ಸ್ನಾನಕ್ಕೆ ಬೇಕಾದ ಸೀರೆ-ಕುಪ್ಪಸ ಇತ್ಯಾದಿಗಳುಂಟು.)

ಸುಮಾಲಿನಿ:—ಯಾರಮ್ಮಾ ನೀನು? ಮಹಾರಾಣಿ ಸಾವಿತ್ರೀ ದೇವಿಯ ಹೆಸರನ್ನು ಹೇಳಿಕೊಂಡೆಯೇಕೆ? ಅವಳಿಂದ ನಿನಗೇನಾಗಬೇಕು?

ಭೈರವಿ.—ನನ್ನ ಮಾತು ನಿಮಗೆ ಕೇಳಿಸಿತೆ? ಅಮ್ಮಾ, ನಿಮ್ಮನ್ನು ನೋಡಿದರೆ ರಾಜಮನೆತನದವರಂತೆ ಕಾಣುವಿರಿ. ಮಹಾ ಪುಣ್ಯಮಯಿಯಾದ ರಾಣೀ ಸಾವಿತ್ರಿದೇವಿಯ ಪಾದಧೂಳಿಯಿಂದ ನನಗೊಂದು ಮುಖ್ಯವಾದ ಕಾರ್ಯವಾಗಬೇಕಾಗಿದೆ. ನೀವು ದಯಮಾಡಿ ನನಗೆ ಆ ದೇವಿಯ ದರ್ಶನವನ್ನು ಮಾಡಿಸುವಿರಾ?

ಸುಮಾಲಿನಿ:—ಮಾಡಿಸುವೆನು. ಅವಳೀಗ ಈ ದಾರಿಯಿಂದಲೇ ಗಂಗಾಸ್ನಾನಕ್ಕೆ ಹೋಗುತ್ತಿರುವಳು. ಇಲ್ಲಿಯೇ ನಿನಗೆ ರಾಣಿಯ ದರ್ಶನವಾಗುವದು. ಚಿಂತಿಸಬೇಡ. ನೀನು ಯಾರು? ನಿನ್ನ ಹೆಸರೇನು?

ಭೈರವಿ:— ನಾನೊಬ್ಬಳು ಬಡ ಹೆಂಗುಸು, ಹೆಸರು ಭೈರವಿ.

ಸುಮಾ:—ಇಗೋ! ಈಕೆಯೆ ಮಹಾರಾಣಿಯಾದ ಸಾವಿತ್ರಿ. ನಿನ್ನ ಕಾರ್ಯವನ್ನು ಇವಳೊಡನೆ ವಿಜ್ಞಾಪಿಸು

ಭೈರವಿ:—ಹೇ! ತಾಯಿ! ಉದ್ಧರಿಸು! (ಸಾವಿತ್ರಿಯ ಕಾಲಿಗೆಬಿದ್ದು) ಆಹಾ! ಕರುಣಾಮಯಿ! ಮಾರ್ಗದಲ್ಲೇ ದರುಶನವಿತ್ತೆಯಾ? ತಾಯಿ! ನೀನೇ ನನಗೆ ದಿಕ್ಕು! ನೀನೇ ಗತಿ! ರಕ್ಷಿಸು!

ಸಾವಿತ್ರಿ (ಭೈರವಿಯನ್ನು ಕೈಹಿಡಿದೆಬ್ಬಿಸುತ್ತ):—ಏಳಮ್ಮಾ! ತಂಗೀ ಭೈರವಿ! ನಿನ್ನನ್ನು ನೋಡಿದರೆ ತುಂಬಾ ದುಃಖಿತಳಾಗಿರುವಂತೆ ಕಾಣುವಿ! ನನ್ನಿಂದ ನಿನಗೆ ಏನಾಗಬೇಕಮ್ಮಾ? ಕೈಲಾದ ಸಹಾಯವನ್ನು ಮಾಡುವೆನು. ಏನಾಗಬೇಕು, ಹೇಳು.

ಭೈರವಿ—ತಾಯಿ! ನನಗೆ ಬೇಕಾದುದು ನಿನ್ನ ಪರಮ ದಯೆ. ಒಂದು ವರ. ನಿನ್ನ ಪವಿತ್ರವಾದ ಪಾದಧೂಳಿ! ಅಮ್ಮಾ! ನಾನು ಈಗತಾನೇ ಪತಿಯನ್ನು ಕಳೆದುಕೊಂಡು ಅಭಾಗಿನಿಯಾದೆನು. ನನ್ನ ಪತಿಯ ಜೀವವನ್ನು ಈಗತಾನೇ ಯಮರಾಯನು ಕೊಂಡೊಯ್ದನು.

ಸಾವಿತ್ರಿ:—ಪಾಪ!

ಭೈರವಿ:—ನಾನು ಪತಿಯ ಕಳೇವರದ ಮೇಲೆ ಬಿದ್ದು ಬಡ ಕಾಣ್ಣ ರೋದಿಸುತ್ತಿರಲು, ಭಗವಂತರಾದ ನಾರದ ಮಹಾಮುನಿಗಳು ಬಂದು.

ಮಹಾರಾಣೀ ಸತೀ ಸಾವಿತ್ರಿಯ ಪಾದವನ್ನು ಶರಣುಹೊಕ್ಕುದಾದರೆ ಪತಿಯನ್ನು ಪಡೆಯಬಹುದೆಂದು ಕನಿಕರದಿಂದ ಆಜ್ಞಾಪಿಸಿದರು

ಸಾವಿತ್ರಿ:—ಆಹಾ! ಆಶ್ಚರ್ಯ!

ಸುವ್ರಾ:—ಅತ್ಯಾಶ್ಚರ್ಯ!

ಭೈರವಿ:—ತಾಯಿ! ಮಹಾಪತಿವ್ರತೆ! ನೀನು ಅಂದು ಯಮಧರ್ಮನನ್ನು ಮೆಚ್ಚಿಸಿ, ಸರ್ವ ಸೌಭಾಗ್ಯಗಳನ್ನೂ ಪಡೆದಿರುವಿ ಮಹಾ ದೇವೀ, ನನಗೂ ನನ್ನ ಪತಿಯನ್ನು ಹಿಂಬಾಲಿಸಲು ತಕ್ಕ ಶಕ್ತಿಯನ್ನು ದಯಪಾಲಿಸು. ಪತಿಹೀನೆಯಾಗಿ ನಾನು ಒಂದು ಕ್ಷಣವೂ ಭೂಮಿಯಲ್ಲಿ ಬಾಳಲಾರೆನು. ದಯಾಮಯಿ! ದಿಕ್ಕುಗಾಣದ ನನಗೆ ಯಮಲೋಕಕ್ಕೆ ಹೋಗುವ ಮಾರ್ಗವನ್ನು ತೋರಿಸಿಕೊಡು! ನಿನ್ನ ದಿವ್ಯವಾದ ಹಸ್ತವನ್ನು ನನ್ನ ತಲೆಯಮೇಲಿಡು! ರಕ್ಷಿಸು ತಾಯಿ! ನಿನಗೆ ಶರಣಾಗಿರುವೆನು. (ಮಣಿಯುವಳು)

ಸಾವಿತ್ರಿ:—ಆಹಾ! ತ್ರಿಕಾಲಜ್ಞಾನಿಗಳಾದ ದೇವರ್ಷಿ ನಾರದರೇ ನಿನಗೆ ದರ್ಶನವಿತ್ತರೆಂದ ಮೇಲೆ, ಭೈರವಿ! ನಿನ್ನ ಭಾಗ್ಯಕ್ಕೆ ಕೊರತೆಯೇ ಇಲ್ಲ! ಏಳಮ್ಮಾ-ಏಳು! (ಅವಳ ತಲೆಯ ಮೇಲೆ ಕೈಯಿಟ್ಟು ಎಬ್ಬಿಸಿ) ಸಾಧ್ವೀಮಣಿ ಭೈರವಿ! ನಿನಗೆ ಯಮನಿರುವ ದಾರಿಯನ್ನು ತೋರಿಸುವೆನು. ಅಗೋ, ಅಲ್ಲಿ ಮುಂದೆ ಕಾಣುವ ದಾರಿಯನ್ನು ಹಿಡಿದು ನೇರಾಗಿ ದಕ್ಷಿಣ ದಿಕ್ಕಿಗೆ ತೆರಳು. ಹೋಗಹೋಗುತ್ತಿದ್ದಂತೆ ಮಾರ್ಗವು ಕಡು ದುರ್ಗಮವಾಗುವದು ಭೈರವಿ! ನಿನ್ನ ಮನಸ್ಸು ಕಡು ದೃಢವಾಗಿರಬೇಕು. ನಿನ್ನ ಪತಿಯನ್ನೇ ನೀನು ಧ್ಯಾನಿಸುತ್ತಿರಬೇಕು. ಆಗ ನಿನಗೆ ಮಾರ್ಗಾಯಾಸವೇ ತೋರದು. ಹೋಗುತ್ತಾ ದಕ್ಷಿಣ ದಿಗಂತದ ಕೊನೆಯಲ್ಲಿ ಪುಣ್ಯವಾಹಿನಿಯಾದ ವೈತರಣೀ ನದಿಯನ್ನು ಕಾಣುವಿ. ಸತ್ಯಸಂಕಲ್ಪರೂ, ದೃಢವ್ರತನಿಷ್ಠರೂ ಮಾತ್ರವೇ ಆ ನದಿಯನ್ನು ದಾಟಲು ಶಕ್ತರಾಗುವರು. ಭೈರವಿ! ನೀನು ನಾರದ ಮಹಾಮುನಿಗಳ ಅನುಗ್ರಹವನ್ನು ಪಡೆದವಳು. ಅಂದಮೇಲೆ ಆ ವೈತರಣಿಯನ್ನು ತರಣಮಾಡುವಿಯೆನ್ನಲು ಸಂದೇಹವಿಲ್ಲ. ಆ ಮೇಲೆ ನೀನು ನಿರಾಯಾಸವಾಗಿ ಯಮಲೋಕವನ್ನು ಸೇರುವಿ. ಸಾಧ್ವೀ! ನಿನ್ನ ಮನೋಭಿಷ್ಟವು ಸಿದ್ಧಿಸಲಿ!

ಭೈರವಿ.—(ಸಾವಿತ್ರಿಯ ಪಾದಕ್ಕೆ ಬಿದ್ದು) ಅನುಗ್ರಹೀತಳಾದೆನು. (ಎದ್ದು ಇಬ್ಬರಿಗೂ ವಂದಿಸಿ ಹೊರಡುವಳು.)

ಸಾವಿತ್ರಿ —(ತನ್ನ ವರದ ಹಸ್ತವನ್ನು ಅವಳ ಕಡೆಗೆ ತೋರಿಸುವಳು)

ಭೈರವಿ —(ಮೆಲ್ಲಮೆಲ್ಲನೆ ಹೊರಟು ಹೋಗುವಳು.)

ಸುಮಾಲಿನಿ.—ಸತೀ ರಾಣಿ! ನಿನ್ನ ಆಶೀರ್ವಾದ ಪ್ರಭಾವದಿಂದ ಭೈರವಿಯ ಸರ್ವಾಂಗವೂ ನೂತನ ಕಾಂತಿಯಿಂದ ಒಪ್ಪಿತು.

ಸಾವಿತ್ರಿ—ಸುಮಾಲಿನಿ! ಈ ಭೈರವಿ ಸತ್ಯವಾದ ಪತಿವ್ರತೆಯಿರುವಳು. ಮಹಾ ಸಾಹಸಕ್ಕೆ ತೊಡಗಿದ ಈ ಸಾಧ್ವಿಗೆ ವಿಜಯವಾಗುವದರಲ್ಲಿ ಯಾವ ಸಂದೇಹವೂ ಇಲ್ಲ. ನಡೆ, ಸುಮಾಲಿನೀ! ಗಂಗಾನದಿಗೆ ತೆರಳೋಣ.

ಸುಮಾಲಿನಿ—ನಡೆ, ಸತೀ ರಾಣಿ! (ಹೋಗುವರು)

---

## ದೃಶ್ಯ ೯—ವೈತರಣೀ ನದಿ.

(ಭಯಂಕರವೂ ವಿಲಕ್ಷಣವೂ ಆಗಿ ಕಾಣುವ ನದಿ. ಅದರಾಚೆಗೆ ವಿಚಿತ್ರವಾದ ಗುಡ್ಡಗಳು, ಈಚೆಗೆ ಭಯಂಕರವಾದ ಕಾಡು.)

ಭೈರವಿ (ಪ್ರವೇಶಿಸಿ)—ಜಯ ಸಾವಿತ್ರಿ! ಆಹಾ! ಸಾವಿತ್ರೀದೇವಿಯ ಶಕ್ತಿಯನ್ನು ಏನೆಂದು ಹೇಳಲಿ? ಇಷ್ಟು ದೂರ ನಡೆದರೂ ನನಗೆ ಮಾರ್ಗಾಯಾಸವೇ ತೋರುವದಿಲ್ಲವಲ್ಲಾ! ಹಸಿವೆ ಬಾಯಾರಿಕೆಗಳೂ ಇಲ್ಲ! ಮುಂದೆ ಮುಂದೆ ಉಲ್ಲಾಸವೇ ಹೆಚ್ಚುತ್ತದೆ! (ಮೇಲೆ ನೋಡಿ) ಓಹೋ! ಆಕಾಶವು ಮೋಡದಿಂದ ಮುಚ್ಚುತ್ತ ಬರುತ್ತದೆ. ಗಾಢಾಂಧಕಾರವು ವ್ಯಾಪಿಸುತ್ತದೆ! (ಹುಲಿ ಚಿರತೆ ಮೊದಲಾದ ಮೃಗಗಳ ಗರ್ಜನೆ ಕೇಳುವುದು.) ಆಹಾ! ದೇವಿಯ ಅನುಗ್ರಹದಿಂದ ನನಗೆ ದುಷ್ಟ ಮೃಗಗಳ ಬಾಧೆಯೂ ಇಲ್ಲ. ಜೈ ಸಾವಿತ್ರೀದೇವಿ! (ಸಿಡಿಲು ಮಿಂಚು ಮಳೆ ಭೈರವಿ ಲಕ್ಷ್ಯಮಾಡದೆ ಹೋಗುತ್ತ ನದೀತೀರವನ್ನು ಸೇರುವಳು. ಮಳೆ ನಿಂತು ಬೆಳಕಾಗುವದು) ಆಹಾ! ದಕ್ಷಿಣದಿಕ್ಕಿನ ಕೊನೆಯೇ ಬಂತು! ಓಹೋಹೊ! ಈ ಮಹಾನದಿಯನ್ನೂ ಇದರ ಮಲೆಯಂತಹ ತೆರೆಗಳನ್ನೂ ನೋಡಿದರೆ, ಇದೇ ವೈತರಣಿಯಾಗಿರುವುದೆನ್ನಲು ಸಂದೇಹವಿಲ್ಲ. ಹೋ, ನೀರು ಕುದಿಯುತ್ತಿರುವಂತೆ ಕಾಣುವದು. (ಕಣ್ಣು ಮುಚ್ಚಿ ಸಾವಿತ್ರಿಯನ್ನು ಸ್ತುತಿಸಿ) ದೇವೀ! ಮಹಾತಾಯಿ! ಸಾವಿತ್ರೀ

ಪತಿಯನ್ನು ಹಿಂಬಾಲಿಸುತ್ತಿರುವ ನನಗೆ ಈ ವೈತರಣಿಯನ್ನು ದಾಟುವ ಶಕ್ತಿಯನ್ನು ದಯಪಾಲಿಸು. (ನದಿಗೆ ವಂದಿಸಿ) ಜನನೀ, ವೈತರಣಿ' ನನ್ನನ್ನು ಯಮಲೋಕಕ್ಕೆ ಸೇರಿಸು. (ನದಿಗೆ ಧುಮುಕುವಳು) ಕೂಡಲೆ ನದಿ ಮಹಾಶಬ್ದದೊಂದಿಗೆ ಇಬ್ಭಾಗವಾಗಲು, ಅವಳು ಸಾವಿತ್ರಿಯ ಸ್ತೋತ್ರ ಮಾಡುತ್ತ ದಿವ್ಯದೇಹದಿಂದ ಮುಂದೆ ಮುಂದೆ ಹೋಗುವಳು [೨೨]

---

ದೃಶ್ಯ ೧೦—ಶ್ಯೈಮಿನಿಯ ಬೀದಿ.

ಘೋರ (ಓಡುತ್ತ ಬಂದು).—ಅದೇನು ಸದ್ದು? (ತೆರೆಯಲ್ಲಿ ವೈತರಣಿಯ ಘೋರ ಶಬ್ದ. ಹಿಂಬದಿಗೆ ನೋಡಿ) ಎಲೆ ಭೀಕರಾ! ಕೊಂಚ ದ್ವಾರಪಾಲನೆಯನ್ನು ಬಿಟ್ಟು ಹೀಗೆ ಬಾ!

ಭೀಕರ (ಬಂದು):—ಏನೇನು?

ಘೋರ (ತೆರೆಯ ಸದ್ದಾಲಿಸಿ):—ಕೇಳಿತೆ?

ಭೀಕರ:—ವೈತರಣೀನದಿಯ ಆರ್ಭಟ!

ಘೋರ:—ಏನೋ ಆಗದ ಅದ್ಭುತವೆಂದೇ ಕಾಣುತ್ತೆ!

ಭೀಕರ.—ಯಾರೋ ಪುಣ್ಯಾತ್ಮರ ಶಕ್ತಿಯ ಹಾಗೇ ತೋರುತ್ತೆ!

ಭೈರವಿ (ತೆರೆಯಲ್ಲಿ):—ಜೈ ಸಾವಿತ್ರಿ!

ಘೋರ:—(ನೋಡಿ ಗಾಬರಿಯಾಗಿ) ಅದಿಗೋ! ಹೆಂಗುಸೊಬ್ಬಳು ಮರ್ತ್ಯಲೋಕದಿಂದ ದೇಹದೊಂದಿಗೇ ಬರುತ್ತಿದ್ದಾಳೆ!

ಭೀಕರ:—ಹಾ! ಏನೇನು? (ನೋಡಿ) ಛೇ; ಅಂದಿನ ಸಾವಿತ್ರಿಯ ಹಾಗೇ ಇವಳಾರೋ ಬಂದಿರಬೇಕು.

ಘೋರ:—ಇದೇನನರ್ಥ ಬಂತಲ್ಲ ಯಮಲೋಕಕ್ಕೆ!

ಭೀಕರ:—ನಡೆ ನಡೆ! ನಾವು ನಮ್ಮ ಕರ್ತವ್ಯಸ್ಥಾನದಲ್ಲಿ ನಿಂತು, ಅವಳು ಒಳಗೆ ಬಾರದಂತೆ ನೋಡಿಕೊಳ್ಳೋಣ.

ಘೋರ:—ನಡೆ ನಡೆ! (ಹೋಗುವರು.)

ಭೈರವಿ:-ಜಯ ಸಾವಿತ್ರಿ! ಓಹೊ! ಅಕಸ್ಮಾತ್ತಾಗಿ-ಈ ಹೊಸಲೋಕದ ಬೀದಿಗೇ ಬಂದಿರುವೆನಲ್ಲ! ವಿಲಕ್ಷಣವಾಗಿ ತೋರುವ ಈ ಲೋಕವೇ ಯಮಲೋಕವಾಗಿರಬೇಕು. ಅಲ್ಲಿ ಕಾಣುವ ಒಂದೇ ಒಂದು ಮಹಾ

ದ್ವಾರವೇ ಒಳಗೆ ಪ್ರವೇಶಿಸುವ ದ್ವಾರವಾಗಿರಬೇಕು ನಿಜ ನಿಜ! ಯಮ ಕಿಂಕರರಂತೆ ಕಾಣುವ ದ್ವಾರಪಾಲಕರು ನಿಜವಾಗಿಯೂ ಯಮಕಿಂಕರರೇ ಸರಿ! ಅವರು ನನ್ನನ್ನು ಒಳಗೆ ಬಿಡುವರೋ ಇಲ್ಲವೋ? ಬಿಡದೇನು? ಕರುಣಾ ಮಯಿಯಾದ ಸಾವಿತ್ರೀ ದೇವಿಯ ದಯವು ಸಂಪೂರ್ಣವಾಗಿರಲಿ! ಜಯ ಸಾವಿತ್ರಿ (ಹೋಗುವಳು)

---

ದೃಶ್ಯ ೧೧—ಜೈಮಿನೀಪುರದ್ವಾರ

(ಘೋರ-ಭೀಕರರು ಕಾವಲುಗಾರರಾಗಿ, ಕೆರೆಯ ಬದಿಗೆ ನೋಡುತ್ತ ಪರಸ್ಪರ ವಿಚಿತ್ರವಾಗಿ ಸಂಜ್ಞೆಮಾಡಿಕೊಳ್ಳುತ್ತಿರುವರು. ಭೈರವಿ ಪ್ರವೇಶಿಸುವಳು)

ಘೋರ:—ಯಾರು ನೀನು?

ಭೀ—ಇಲ್ಲಿಗೆ ಬಂದಿ?

ಘೋರ:—ಇದು ಯಮಲೋಕವೆಂದು ಗೊತ್ತಿದೆಯೆ?

ಭೈರವಿ:—ಅಯ್ಯಾ! ನಾನೋರ್ವ ಮಾನವಿ. ಜೈಮಿನಿಯನ್ನರಸಿ ಕೊಂಡು ಬಂದಿರುವೆನು.

ಭೀಕರ.—ಭಲೆ ಭಲೆ! ಬಹಳ ಅಸಾಧ್ಯಳಿರುವಿಯಲ್ಲ!

ಘೋರ.—ಇಲ್ಲಿಗೇಕೆ ಬಂದಿ?

ಭೈರವಿ:—ಯಮದೂತರು ನನ್ನ ಪತಿಯನ್ನು ಇಲ್ಲಿಗೆ ತಂದಿರುವರು. ನಾನು ಪತಿಯನ್ನು ಹಿಂಬಾಲಿಸಿಕೊಂಡು ಬಂದಿರುವೆನು.

ಭೀ:—ಅರೇ-ಘೋರಾ! ಸತ್ಯವಾಗಿಯೂ ಇದೇನೋ ಕೇಡುಗಾಲವೇ ಸರಿ!

ಘೋರ:—ಬಂತಪ್ಪಾ! ನಾಶ ಕಾಲ ಬಂತು! ಭೂಲೋಕದ ಮಾನವರು ಇಷ್ಟಪ್ರಕಾರ ಯಮಲೋಕಕ್ಕೆ ಬರುವುದೆಂದರೆ?—

ಭೀಕರ:—ಯಮಲೋಕಕ್ಕೇನೋ ವಿನಾಶಕಾಲ!

ಘೋರ:—ಎಲೆ, ಮಾನವಿ! ಹೆಚ್ಚು ಮಾತಾಡಬೇಡ. ಜೈಮಿನೀ ಪುರಿಯ ಕಾವಲುಗಾರರು ನಾವು, ತಿಳಿಯಿತಷ್ಟೆ?

ಭೈರವಿ:—ಮಹಾತ್ಮರಾದ ನಿಮಗಿದೋ ನಮಸ್ಕಾರ!

ಭೀಕರ:—ನಿನ್ನ ನಮಸ್ಕಾರವೂ ಬೇಡ

ಘೋರ—ಚಮತ್ಕಾರವೂ ಬೇಡ.

ಭೀಕರ:—ಇನ್ನೊಂದು ಕ್ಷಣವೂ ಇಲ್ಲಿರಬೇಡ, ನಡೆ.

ಭೈರವಿ.—ಅಯ್ಯಾ, ನನ್ನನ್ನು ತಡೆಯುವದು ನಿಮಗೆ ಧರ್ಮವಲ್ಲ! ನಾನು ನನ್ನ ಪತಿಯನ್ನು ಹಿಂಬಾಲಿಸಿಕೊಂಡು ಬಂದಿರುವೆನು ದಯಮಾಡಿ ನನ್ನನ್ನು ಒಳಗೆ ಬಿಡಿರಿ. ಸೆರಗೊಡ್ಡಿ ಬೇಡಿಕೊಳ್ಳುವೆನು.

ಭೀಕರ.—ಛೀ! ಬೇಡುವದೂ ಬೇಡ!

ಘೋರ.—ಕಾಡುವುದೂ ಬೇಡ!

ಭೀಕರ.-ಸುಮ್ಮನೆ ಹಿಂದಿರುಗು, ಇಲ್ಲದಿದ್ದರೆ ಅಪಾಯಕ್ಕೊಳಗಾಗುವಿ

ಭೈರವಿ:—ಎಂತಹ ಅಪಾಯವಾದರೂ ನಾನು ಹೆದರುವವಳಲ್ಲ! ಪತಿಯನ್ನು ಅನುಸರಿಸುವದು ಸತಿಯ ಧರ್ಮ ನಾನು ನನ್ನ ಪತಿಯ ಸಾನ್ನಿಧ್ಯವನ್ನು ಸೇರಿಯೇ ತೀರಬೇಕು! (ಮುಂದುವರಿಯುವಳು.)

ಘೋರ —ಎಲೆ, ದುರ್ವಿದಗ್ಧೆ! ನಿಲ್ಲಿಲ್ಲಿ! ಇನ್ನೊಂದಡಿ ಮುಂದಿಟ್ಟರೆ ಭೂಲೋಕಕ್ಕೇ ತಳ್ಳುವೆವು!

ಭೀಕರ —ಮಾನವೀ! ಕೇಳು. ಮರ್ತ್ಯಲೋಕದ ಆಯುಷ್ಯವು ತೀರದಿದ್ದವರು ಈ ದ್ವಾರವನ್ನು ಪ್ರವೇಶಿಸಕೂಡದು. ಒಳಗೆ ಬಿಡಲಿಕ್ಕೂ ನಮಗೆ ಅಪ್ಪಣೆಯಿಲ್ಲ

ಭೈರವಿ —ಹಾಗಾದರೆ ಹೋಗಿ ಅಪ್ಪಣೆಯನ್ನಾದರೂ ಪಡೆದುಕೊಂಡು ಬನ್ನಿರಿ.

ಭೀಕರ:—ಅಂತಹ ಅವಶ್ಯಕವಿಲ್ಲ

ಘೋರ:—ಹೂಂ, ನಡಿ ನಡಿ!

ಭೈರವಿ (ಮೇಲೆ ನೋಡಿ ಕೈ ಮುಗಿದು):-ಜನನಿ! ದೇವಿ! ಸಾವಿತ್ರಿ! ಪತಿಯ ಸಹಚಾರಿಣಿಯಾದ ನನ್ನನ್ನು ಈ ಘೋರರೂಪಿಗಳು ತಡೆಯುತ್ತಿರುವರಲ್ಲ! ಕಾಪಾಡು! ಕಾಪಾಡು! (ಮುಂದುವರಿಯುವಳು.)

ಘೋರ-ಭೀಕರರು:—ಹಾ! ನಿಲ್ಲು! (ಭೈರವಿಯನ್ನು ದೂಡಲು ಮುಂಬಾಯ್ದು ತಾವೇ ಪೆಟ್ಟು ತಿಂದಂತೆ ಬೀಳುವರು. ಬಳಿಕ ಮೆಲ್ಲನೆ ಏಳುವರು ಭೈರವಿ ಹಾಗೆಯೇ ನಿಲ್ಲುವಳು.)

ಭೀಕರ:—ಅಪ್ಪಾ, ಘೋರಾ! ಈಕೆಯ ಶಕ್ತಿ ಅಸಾಮಾನ್ಯವಾಗಿದೆ!

ಘೋರ:—ಹೌದು. ಭೀಕರಾ! ಹಾಗಿಲ್ಲದಿದ್ದರೆ ಇಲ್ಲಿಯವರೆಗೆ ಬರಲು ಶಕ್ತಳಾದಾಳೆ? (ಭೈರವಿಗೆ)ಮಹಾತ್ಮಳೇ! ಮನ್ನಿಸು. ನಿನ್ನ ಶಕ್ತಿಯನ್ನು ತಿಳಿಯದೆ ದುಡುಕಿದೆವು.

ಭೀಕರ —ಆದರೆ ನಿನ್ನನ್ನು ಒಳಗೆ ಬಿಟ್ಟರೆ ನಾವು ಅಪರಾಧಿಗಳಾಗಬೇಕಾಗುತ್ತದೆ ಹೋಗಿ ಧರ್ಮರಾಜರಿಗೆ ಬಿನ್ನವಿಸಿಕೊಂಡು ಬರುತ್ತೇವೆ. ಘೋರಾ! ನೀನು ಇಲ್ಲಿರು. (ಒಳಗೆ ಹೋಗುವನು)

ಘೋರ (ಅತ್ತಿತ್ತ ತಿರುಗುತ್ತ):—ಆಹಾ! ಮಾನವಿ! ನಿನ್ನ ಸಾಹಸವು ಆಶ್ಚರ್ಯಕರವಾಗಿದೆ! ಅಮಾನುಷವಾಗಿದೆ! ನೀನು ಸುಮ್ಮನೆ ಹಿಂದಿರುಗುವವಳಾಗಿ ಕಾಣುವದಿಲ್ಲ! ಈ ಧರ್ಮಸಂಕಟಕ್ಕೆ ಧರ್ಮದೇವನು ಏನು ನಿವೃತ್ತಿ ಮಾಡುವನೊ?

ಭೈರವಿ:—ಯಮಧರ್ಮದೇವರು ನನ್ನ ಸತೀಧರ್ಮಕ್ಕೆ ತಕ್ಕ ಫಲ ಕೊಡುವರೆಂದು ನಾನು ದೃಢವಾಗಿ ನಂಬಿರುತ್ತೇನೆ.

ಘೋರ:—ನೋಡೋಣ-ಪರಿಣಾಮವೇನಾಗುವದೊ? (ಭೀಕರನು ಓಡಿಯೋಡಿ ಬರುವನು) ಏನು ಭೀಕರಾ! ಆತುರವೇನು?

[illegible]—ಏನು ಹೇಳಲಿ! ಘೋರಾ! ಈ ಮಾನವಿಯ ಸಮಾಚಾ[illegible] ವಿಜ್ಞಾಪಿಸಲು, ಅವರೂ ಅತ್ಯಾಶ್ಚರ್ಯದಿಂದ [illegible]ಗೆ-ಸ್ವತಃ ಹೊರಟು ಬರುತ್ತಿದ್ದಾರೆ-ಅಗೊ[illegible]

ಘೋ[illegible] ಮಾನವಿ! ಮಾನವರ ಕಣ್ಣಿಗೇ ಕಾಣಿಸಲಾರದ ಧರ್ಮದೇವರು ನಿನ್ನ ದರ್ಶನಕ್ಕಾಗಿ ಬರುತ್ತಿದ್ದಾರಲ್ಲ!

ಭೈರವಿ — ಎಲ್ಲವೂ ದೇವಿಯ ದಯೆ!

(ಯಮನೂ ಚಿತ್ರಗುಪ್ತರೂ ಇಬ್ಬರು ದೂತರೂ ಬರುವರು.)

ಘೋರ-ಭೀಕರರು.—ಧರ್ಮರಾಜರಿಗೆ ಜಯವಾಗಲಿ!

ಯಮ.—ಎಲ್ಲಿರುವಳು ಆ ವಿಚಿತ್ರ ಮಾನವಿ?

ಭೈರವಿ:—ಧರ್ಮದೇವ! ಅನಾಥೆಯಾದ ಭೈರವಿನಾಮಕ ಮಾನವಿ ಇದೋ ವಂದಿಸುವಳು! ದೇವಾ, ಶರಣು (ಅಡ್ಡಬೀಳುವಳು.)

ಯಮ:— ಅಯ್ಯ ಚಿತ್ರಗುಪ್ತರೆ! ಈ ಮಾನವಿ ಯಾರು! ಇವಳು ಇಲ್ಲಿಗೆ ಬಂದಿರುವಳೇಕೆ? ನೋಡಿ ಹೇಳಿರೀಗಾಗಲಿ

ಚಿತ್ರ (ಪುಸ್ತಕವನ್ನು ಬಿಡಿಸಿ ನೋಡಿ):— ಪ್ರಭೋ! ಈಕೆ ಮದ್ರ ದೇಶಾಧಿಪತಿಯಾದ ಸತ್ಯವಾನ ಚಕ್ರವರ್ತಿಯ ಪ್ರಜೆಯಾದ ಭದ್ರಬಾಹು ಎಂಬ ಮಹಾಪಾಪಿಯ ಪತ್ನಿ ಮಹಾಗುಣವತಿ-ಪ್ರಖರ ಪತಿವ್ರತೆ ನಿನ್ನೆ ತಾನೇ ನಮ್ಮ ಕ್ರಿಮಿನಿಗೆಯನ್ನು ಸೇರಿದ ತನ್ನ ಪತಿಯನ್ನು ಅನುಸರಿಸಿ ಕೊಂಡು ಈಕೆ ಇಲ್ಲಿಗೆ ಬಂದಿದ್ದಾಳೆ.

ಭೈರವಿ:— ಧರ್ಮಾತ್ಮನೆ! ನನ್ನನ್ನು ದಯಮಾಡಿ ನನ್ನ ಪತಿಯ ಸನ್ನಿಧಿ ಸೇರಿಸಿರಿ. ಪತಿಹೀನೆಯಾಗಿ ನಾನು ಭೂಮಿಯಲ್ಲಿ ಬಾಳಲಾರೆ!

ಯಮ:— ಚಿತ್ರಗುಪ್ತರೆ! ಈಕೆಯ ಮರ್ತ್ಯ ಲೋಕದ ಆಯುಷ್ಯವು ಇನ್ನೆಷ್ಟಿದೆ ನೋಡಿರಿ!

ಚಿತ್ರ (ಪುಸ್ತಕ ನೋಡಿ-ಎಣಿಕೆ ಹಾಕಿ)-ಪ್ರಭೋ! ಇನ್ನು ಇಪ್ಪತ್ತೈದು ವರ್ಷ-ಆರುತಿಂಗಳು-ನಾಲ್ಕು ದಿವಸ-ಮೂರು ಗಂಟೆ-ಎರಡು ಗಳಿಗೆ-ಒಂದೂವರೆ ವಿಘಳಿಗೆ-ಅರ್ಧ ಕ್ಷಣ.

ಯಮ:— ಎಲೆ ಭೈರವಿ! ನಿನ್ನ ಸಾಹಸವನ್ನು ನೋಡಿದರೆ ಆಶ್ಚರ್ಯ ವಾಗುತ್ತದೆ. ನಿನ್ನ ಪಾತಿವ್ರತ್ಯದ ಪ್ರಭಾವವು ಸತೀ ಸಾವಿತ್ರಿಯನ್ನೂ ಮೀರಿ ಸುತ್ತದೆ. ಆದುದರಿಂದಲೆ ನೀನು ನನ್ನ ದರ್ಶನವನ್ನು ಮಾಡಲು ಶಕ್ತಳಾದಿ! ಆದರೇನು? ಪುಣ್ಯವತಿ! ಬ್ರಹ್ಮಲಿಖಿತವನ್ನು ಮೀರಲು ಯಾರಿಗೂ ಸಾಧ್ಯ ವಿಲ್ಲ. ಮರ್ತ್ಯಲೋಕದ ನಿನ್ನ ಆಯುಷ್ಯವು ಇನ್ನೂ ಮುಗಿದಿಲ್ಲ ನೀನು ಹಿಂದಿರುಗಿ ಭೂಮಿಗೇ ಹೋಗು ಪಾಪಿಯಾದ ನಿನ್ನ ಪತಿಗೆ ವೈಕುಂಠ ಪ್ರಾಪ್ತಿಯಾಗುವಂತೆ ವಿಧವಾ ವ್ರತವನ್ನು ಆಚರಿಸಿಕೊಂಡಿರು. ನಿನ್ನ ಸತ್ಕರ್ಮಗಳಿಂದ ನಿನ್ನ ಪತಿಯ ಪಾಪಗಳು ಸುಟ್ಟು ಹೋಗಲಾರಂಭಿಸಿ, ಕಡೆಗೆ ಅವನು ಪುಣ್ಯವಂತನಾಗಿ ವೈಕುಂಠವನ್ನು ಸೇರುವನು. ನಿನ್ನ ಪುಣ್ಯ ಪ್ರಭಾವದಿಂದಲೇ ಈಗಲಾದರೂ ಅವನು ಈ ಲೋಕದ ಭಯಂಕರವಾದ ಶಿಕ್ಷೆಗೆ ಗುರಿಯಾಗದೆ-ಸುಮ್ಮನೆ ಸೆರೆಯಲ್ಲಿರುವನು. ಅವನು ಇಲ್ಲಿಂದ ಮುಕ್ತನಾಗುವಂತೆ ಸತ್ಕರ್ಮಗಳನ್ನು ಆಚರಿಸು. ಆ ಮೇಲೆ ನೀನೂ ಪತಿ ಯೊಂದಿಗೆ ವೈಕುಂಠವನ್ನು ಸೇರುವಿ. ಅದೇ ಸತಿಯ ಧರ್ಮ!

ಭೈರವಿ:—ದೇವಾ! ಧರ್ಮದೇವಾ! ನಾನು ಮಾತಾಡುವದಕ್ಕೆ ಕ್ಷಮಿಸಬೇಕು. ಪತಿಯನ್ನು ಅನುಸರಿಸುವದೇ ಪತ್ನಿಯ ಧರ್ಮವೆಂದು ಬಲ್ಲವರು ಹೇಳುವರು ಅದಕ್ಕೆ ಶಕ್ತಿಯಿಲ್ಲದಿದ್ದವರು ವಿಧವಾ ವ್ರತವನ್ನು ಆಚರಿಸಿಕೊಂಡಿರಬೇಕಾಗಿದೆ. ನಾನಾದರೋ ಸತೀ-ಸಾವಿತ್ರಿದೇವಿಯ ಕರುಣೆಯಿಂದ ಇಲ್ಲಿಯವರೆಗೂ ಬಂದು, ಧರ್ಮದೇವನನ್ನೇ ಸಾಕ್ಷಾತ್ಕರಿಸಿ ಕೊಂಡಿರುವೆನಲ್ಲಾ! ದೇವಾ! ನನ್ನನ್ನು ಫಲಹೀನೆಯನ್ನಾಗಿ ಮಾಡುವದು ನ್ಯಾಯವೇ ಧರ್ಮದೇವಾ!

ಯಮ.—ಮಾನಿನಿ! ನಿನ್ನ ಪರಮ ಭಕ್ತಿಗೆ ಮೆಚ್ಚಿದೆನು, ಹಾಗು ನೀನು ಬೇರೆ ಯಾವ ವರವನ್ನೂ ಕೇಳಲಾರೆ ಎಂಬುದನ್ನೂ ಬಲ್ಲೆನು. ನಾನೇನು ಮಾಡಲಿ? ನಿನ್ನ ಇಷ್ಟ! (ದೂತರನ್ನು ನೋಡಿ) ಎಲೈ ದೂತರೆ! ಈ ಮಾನವಿ ಈ ಪುರದ್ವಾರದ ಹೊಸ್ತಿಲನ್ನು ದಾಟದಂತೆ ಎಚ್ಚರಿಕೆಯಿಂದ ನೋಡಿಕೊಳ್ಳತಕ್ಕದ್ದು. ಇವಳಿಗೆ ಪತಿಭಕ್ತಿಯ ಹುಚ್ಚೇ ಹಿಡಿದಿರುವ ಕಾರಣ ನಿಮ್ಮನ್ನು ಮೀರಿ ಬಂದಾಳು ಹಾಗೆ ಬಂದರೆ ಇವಳನ್ನು ಪೆಟ್ಟಾಗದಂತೆ ಭೂಮಿಗೆ ದೂಡಿಬಿಡಿರಿ! ಇವಳ ಪಾತಿವ್ರತ್ಯದ ಶಕ್ತಿಗೆ ನಿಮ್ಮ ಶಕ್ತಿ ಕಡಿಮೆಯಾದೀತು, ಅದಕ್ಕೆ ತಕ್ಕ ಹೊಸ ಶಕ್ತಿಯನ್ನು ನಾನು ನಿಮಗೆ ಕೊಡುವೆನು-ತೆಗೆದುಕೊಳ್ಳಿರಿ

ದೂತರು.—ಶಿರಸಾಜ್ಞೆ (ಬಾಗಿ ಶಕ್ತಿಯನ್ನು ತೆಗೆದುಕೊಳ್ಳುವರು. ಯಮನು ಚಿತ್ರಗುಪ್ತಾದಿಗಳೊಂದಿಗೆ ಹೊರಟು ಹೋಗುವನು.)

ಭೈರವಿ.—ಧರ್ಮದೇವಾ! ಅಯ್ಯೋ! ಧರ್ಮದೇವಾ! (ಯಮನ ಹಿಂದೆ ಹೋಗುವಳು ದೂತರು ತಡೆಯುವರು ಆ ದೂತರ ಶಕ್ತಿಯಿಂದ ಭೈರವಿ ಹೆದರಿ ಹಿಂಜರಿಯುತ್ತ ಜರಿಯುತ್ತ ತೆರೆಯೊಳಗೆ ಹೋಗುವಳು. ದೂತರೂ ಹೋಗುವರು.)

ಘೋರ.—ಭೈರವಿ! ಯಮರಾಜ್ಞೆಯಂತೆ ನಿನ್ನನ್ನು ಭೂಮಿಗೆ ತಳ್ಳುತ್ತೇವೆ. (ದೂತರು ತಳ್ಳುವರು. ತೆರೆಯಲ್ಲಿ ಅವಳು ಭೂಮಿಗೆ ಬಿದ್ದ ಸದ್ದು ಭೈರವಿ ತೆರೆಯಲ್ಲಿ-'ಹಾ ಪತಿ! ಹಾ! ಸಾವಿತ್ರಿ! ಹಾ! ಧರ್ಮದೇವಾ!' ಎಂದು ಆರ್ತ ನಾದ ಮಾಡುವಳು.)

——

ದೃಶ್ಯ ೧೨—ಬೀದಿ.

ನಾರದ (ಪ್ರವೇಶಿಸಿ):—ಜಯ ಲಕ್ಷ್ಮೀನಾರಾಯಣಾ! ಹೇ ಕಪಟ ನಾಟಕ ಸೂತ್ರಧಾರಿ! ನೀನು ನನ್ನಿಂದ ಎಂತೆಂತಹ ನಾಟಕಗಳನ್ನು ಆಡಿಸುವಿಯಲ್ಲ! ನಿನ್ನ ದಿವ್ಯ ವರಬಲದಿಂದ ನಾನು ಎಂತೆಂತಹ ಕಾರ್ಯಗಳನ್ನು ಮಾಡಿದೆನಲ್ಲ! ನೋಡೆಲೈ ತಂಬೂರಿಯೆ!

(ತೆರೆಯಲ್ಲಿ ಭೈರವಿ—"ಹಾ! ಪತಿ! ಹಾ! ಸಾವಿತ್ರಿ! [೨೨]" ಎಂದು ಪ್ರಲಾಪಿಸುವಳು. ಅದನ್ನಾಲಿಸಿ-ನೋಡಿ) ಆಹಾ! ಸಾಧ್ವೀ ಭೈರವಿಯ ಸಾಹಸವೇ ಸಾಹಸ! ಯಮದೂತರು ಅವಳನ್ನು ಭೂಮಿಗೆ ತಳ್ಳುತ್ತಲೇ ಇದ್ದಾರೆ! ಅವಳು ಮತ್ತೆ ಮತ್ತೆ ಕೈಮಿಸಿಗೆ ಹೋಗುತ್ತಲೇ ಇದ್ದಾಳೆ! (ತೆರೆಯಲ್ಲಿ ಯಮದೂತರು—"ಹೇ ಮಾನವಿ! ಪುನಃ ಬಂದೆಯಾ! ನಡೆ-ಭೂಮಿಗೆ!" ಎಂದು ಗರ್ಜಿಸುವರು. ಭೈರವಿ ಭೂಮಿಗೆ ಬಿದ್ದ ಸದ್ದು. ಭೈರವಿಯ ಆರ್ತನಾದ "ಹಾ! ಧರ್ಮದೇವಾ! ಹೇ ಸಾವಿತ್ರಿ! ಅಯ್ಯೋ! ಪತಿಹೀನೆಯಾಗಿ ನಾನು ಎಂದಿಗೂ ಭೂಮಿಯಲ್ಲಿರಲಾರೆನು!") ಆಹಾ! ಧನ್ಯೆ! ಭೈರವಿ! ಧನ್ಯೆ! ಹೇ ತಂಬೂರಿಯೇ! ಇನ್ನು ಕಾಲವಿಳಂಬ ಮಾಡಬಾರದು! ಬ್ರಹ್ಮಲೋಕಕ್ಕೆ ಈಗಲೆ ತೆರಳೋಣ. ಜಯ ನಾರಾಯಣ [೨೩] (ಹೋಗುವನು.)

ಪ್ರಥಮಾಂಕಂ ಸಮಾಪ್ತಂ॥

---

# ಅಂಕ ೨

## ದೃಶ್ಯ ೧—ಬ್ರಹ್ಮಮಂದಿರ

(ಚತುರ್ಮುಖ ಬ್ರಹ್ಮನು ಪದ್ಮಾಸನಸ್ಥನಾಗಿ ಕುಳಿತಿರುವನು. ಸರಸ್ವತಿ ಮಯೂರಾಸನದಲ್ಲಿ ಅಲಂಕೃತೆಯಾಗಿ, ವೀಣೆಯನ್ನು ಬಾರಿಸುತ್ತ ಹಾಡುತ್ತಿರುವಳು [೨೩]

ನಾರದ —(ಪ್ರವೇಶಿಸುತ್ತ[೨೪] ಜನನಿ-ಜನಕರೆ! ಬಾಲಕ ನಾರದನ ಸಾಷ್ಟಾಂಗ ನಮಸ್ಕಾರಗಳು.

ಸರ.—ಆಯುಷ್ಯವಂತನಾಗು

ಬ್ರಹ್ಮ:— ಚಿರಂಜೀವಿಯಾಗು. ಪುತ್ರ! ಕ್ಷೇಮವೆ? ಎಲ್ಲಿಂದ ಬರುತ್ತಿರುವಿ?

ನಾರದ:—ಕ್ಷೇಮ. ತಂದೆಯೆ, ನಾನು ಭೂಲೋಕದಿಂದ ಬರುತ್ತಿರುವೆನು (ಬ್ರಹ್ಮನ ಬಳಿಯ ಆಸನವೊಂದರಲ್ಲಿ ಮಂಡಿಸುವನು.)

ಬ್ರಹ್ಮ:- ಕುಮಾರ, ಭೂಮಿಯಲ್ಲಿ ಸತ್ಕರ್ಮಿಗಳು ಕ್ಷೇಮವಾಗಿರುವರೆ?

ನಾರದ:—ಆ! ತಕ್ಕಮಟ್ಟಿಗೇನೋ ಇದ್ದಾರೆ!

ಬ್ರಹ್ಮ:—ಅದೇನು? ಸಂದೇಹದ ರಾಗದಲ್ಲಿ ಹೇಳುವಿ?

ನಾರದ:—ಜನಕ! ನಮ್ಮ ಯಮರಾಯನು ಮಾಡಿದ ಒಂದು ಹೆಡ್ಡು ಕೆಲಸದಿಂದಾಗಿ ಭೂಲೋಕದಲ್ಲಿರುವ ಪತಿವ್ರತೆಯರಾದ ಸ್ತ್ರೀಯರು ಬಹಳ ಸಂಕಟವನ್ನು ಅನುಭವಿಸುವಂತಾಗಿದೆ.

ಸರ:—ಅದೇನು ನಾರದಾ?

ಬ್ರಹ್ಮ (ತಲೆದೂಗಿ ಮುಗುಳ್ನಗುತ್ತ) — ಹುಂ, ಹುಂ. ಹೇಳು! ಹೇಳು!

ನಾರದ: - ಜನಕ! ಅಂದು ಯಮನು ಸತ್ಯವಾನನ ಜೀವವನ್ನು ಸಾವಿತ್ರೀ ದೇವಿಗೆ ಹಿಂದಿರುಗಿ ಕೊಡುವಾಗ, ಅದರ ಜತೆಗೆ ಕೆಲವು ವರಗಳನ್ನೂ ಕೊಟ್ಟಿರುವನಷ್ಟೆ?

ಬ್ರಹ್ಮ:—ಆಹಾ!

ನಾರದ:—ಅವುಗಳಲ್ಲಿ ನ್ಯಾಯವಾದ ವರಗಳೆಷ್ಟು? ಅನ್ಯಾಯವಾದ ವರಗಳೆಷ್ಟು? ಯೋಚನೆ ಮಾಡಿರುವಿರಾ ಅಪ್ಪಾ?

ಬ್ರಹ್ಮ:-ನಾರದಾ! (ವಕ್ರದೃಷ್ಟಿಯಿಂದ ನಾರದನನ್ನು ನೋಡುವನು!)

ನಾರದ:—(ಮೆಟ್ಟಬಿದ್ದು) ತಾತಾ!

ಬ್ರಹ್ಮ:—ಹುಂ, ಸಾಗಲಿ ನಿನ್ನ ಅಭಿನವ ಪುರಾಣ.

ನಾರದ:—ಆಹಾ! ಸರ್ವಜ್ಞರು ಬೇಕೆಂದೇ 'ಜಡಬ್ರಹ್ಮ' ಎಂಬ ಬಿರುದು ಪಡೆದಿರುವಿರಿ. ಈ ಅಜ್ಞಬಾಲಕನ ಬಾಲಾಲಾಪಗಳನ್ನು ಲಾಲಿಸ ಬೇಕು ತಂದೆಯೆ!

ಬ್ರಹ್ಮ:—ಹೇಳಪ್ಪ, ಕಾದಿರುವೆನಲ್ಲಾ?

ನಾರದ:—(ಸ್ವ) ಲೋಕಜನಕನಿಗೆ ಎಲ್ಲವೂ ತಿಳಿದಿದೆ ಇರಲಿ.(ಪ್ರ) ಅಪ್ಪಾ, ಮತ್ತೇನಿಲ್ಲ. ಯಮನು ಸಾವಿತ್ರಿಯ ಭಕ್ತಿಗೆ ಮೆಚ್ಚಿ ಕೊಟ್ಟ ವರ ಗಳಾವು?-ಯುಕ್ತಿಗೆ ಸಿಕ್ಕಿ ಬಿದ್ದು ಕೊಟ್ಟ ವರಗಳಾವು?-ಎಂಬದನ್ನು ಯೋಚನೆ ಮಾಡಬೇಕಾದ ಸಮಯವು ಈಗ ಬಂದಿದೆ!

ಬ್ರಹ್ಮ:—ಹಾಗೇನು ಬಂತು?

ನಾರದ:—ತಂಟಿಗೇ ಬಂತು! ಕೇಳಿರಿ. ಸತ್ಯವಾನನಿಗೆ ನೀವು ವಿಧಿ ಸಿದ ಅವಧಿ ತೀರಲು, ಯಮನು ಅವನ ಜೀವವನ್ನು ಸೆಳೆದೊಯ್ಯುವಾಗ ಸಾವಿತ್ರಿ ಯಮನ ಬೆಂಬಿಡಿದು ಹೋದಳಷ್ಟೆ? ಆಗ ಯಮನು 'ಪತಿಯ ಜೀವವೊಂದರ ಹೊರತು ಬೇಕಾದ ವರಗಳನ್ನು ಬೇಡು' ಎಂದನು. ಸಾವಿತ್ರಿ ಮೊದಲು ತನ್ನ ತಂದೆಗೆ ಪುತ್ರಭಾಗ್ಯವಾಗುವಂತೆ ವರವನ್ನು ಕೇಳಿದಳು. ಯಮನು ಅಶ್ವಪತಿರಾಜನಿಗೆ ನೂರು ಜನ ಮಕ್ಕಳಾಗುವಂತೆ ವರವನ್ನು ಕೊಟ್ಟುಬಿಟ್ಟನು. ಸತೀ ಸಾವಿತ್ರಿ ಮತ್ತೂ ಬಿಡದೆ ಯಮನನ್ನು ಹಿಂಬಾ ಲಿಸಿ ತನ್ನ ಅತ್ತೆ-ಮಾವಂದಿರಿಗೆ ಅಂಧತ್ವವು ಹೋಗುವಂತೆಯೂ-ಅವರಿಗೆ ರಾಜ್ಯಪ್ರಾಪ್ತಿಯಾಗುವಂತೆಯೂ ವರಗಳನ್ನು ಕೇಳಿದಳು. ಯಮನು ಅವುಗಳನ್ನೂ ಕೊಟ್ಟನು. ತಾತಾ! ಇವಿಷ್ಟು ಸಾವಿತ್ರಿಯ ಶ್ರದ್ಧಾ-ಭಕ್ತಿ-ನಿಷ್ಠೆ-ಸಾಹಸ ಮೊದಲಾದ ಅಪೂರ್ವ ಸುಗುಣಗಳಿಗೆ ಮೆಚ್ಚಿ ಕೊಟ್ಟ ನಿಜ ವಾದ ವರಗಳು.

ಬ್ರಹ್ಮ:—ಹೌದು, ಆ ಮೇಲೆ?

ನಾರದ:—ಆ ಮೇಲೆಯೂ ಬಿಡದೆ ಸಾವಿತ್ರಿ ಯಮನನ್ನು ಬೆಂಬತ್ತಲು, ಯಮನು "ಸತ್ಯವಾನನ ಜೀವದ ಹೊರತು ಇನ್ನೂ ಒಂದು ವರವನ್ನು ಕೇಳು" ಎಂದನು. ಕೂಡಲೆ ಚದುರೆಯಾದ ಸಾವಿತ್ರಿ "ನನಗೆ ಮಕ್ಕಳಾಗುವಂತೆ ವರವನ್ನು ಕೊಡು" ಎಂದು ಬೇಡಿದಳು. "ತಥಾಸ್ತು. ನಿನಗೆ ನೂರು ಮಂದಿ ಮಕ್ಕಳಾಗಲಿ" ಎಂದು ಯಮನು ವರ ಕೊಟ್ಟನು. ಮಹಾ ಪತಿವ್ರತೆಯಾದ ಸಾವಿತ್ರಿ ಇದರಿಂದಲೇ ಯಮನನ್ನು ಬಿಗಿಹಿಡಿದು, ತನ್ನ ಪತಿಯ ಜೀವಕ್ಕಾಗಿ ಹೆಣಗಾಡಿದಳು. ತನ್ನ ಮಾತಿನಿಂದಲೇ ಸಿಕ್ಕಿಬಿದ್ದ ಯಮನು ಸತ್ಯವಾನನ ಜೀವವನ್ನು ಸಾವಿತ್ರಿಗೆ ಒಪ್ಪಿಸಲೇಬೇಕಾಯಿತು. ತಂದೆಯೆ! ಇದು ಯಮನು ಸಾವಿತ್ರಿಗೆ ಸಿಕ್ಕಿಬಿದ್ದು ಕೊಟ್ಟ ವರವಲ್ಲವೆ?

ಬ್ರಹ್ಮ(ತಲೆದೂಗಿ):—ಇರಲಿ, ಆ ಮೇಲೆ?

ನಾರದ.—ಆ ಮೇಲೆ-ಅದೇ-ಯಮನು ನಿಮಗೆ ಮೋಸವನ್ನೇ ಮಾಡಿರುವನು "ಅರಿವುಗೇಡಿತನ"ದ ಅಪರಾಧಕ್ಕೆ ಭಾಗಿಯಾಗಿರುವನು ಜನಕಾ! ಹಿಂದೊಮ್ಮೆ ಯಮನು ಹೀಗೆಯೇ ಅರಿವುಗೆಟ್ಟು, ಶಿವಭಕ್ತನಾದ ಮಾರ್ಕಾಂಡೇಯನ ಜೀವವನ್ನು ಸೆಳೆಯಲು ಹೋಗಿ, ಪರಮೇಶ್ವರನಿಂದ ಪೆಟ್ಟು ತಿಂದು ಬರಲಿಲ್ಲವೆ? ಅಪ್ಪಾ! ಅವನು ಸ್ವಾತಂತ್ರ್ಯದ ಪರಮಾವಧಿಯನ್ನೇ ತೋರಿಸಿದನು. ಸರ್ವ ವಿಧಾತನಾದ ನಿನ್ನನ್ನೇ ಧಿಃಕರಿಸಿದನು.

ಬ್ರಹ್ಮ:—ಆಹಾ!

ನಾರದ:—ತಾತಾ! [೨೫] ಮಕ್ಕಳಿಲ್ಲದವರು ಮಕ್ಕಳು ಬೇಕೆಂದು ಘನಘೋರವಾದ ಪ್ರಯತ್ನವನ್ನು ಮಾಡಿದರೂ ಮಕ್ಕಳನ್ನು ಪಡೆಯುವದು ಅರಿದಾಗಿರುವಾಗ, ಯಮನು ಸಾವಿತ್ರಿಗೆ ಎಷ್ಟು ಜನ ಮಕ್ಕಳಾಗುವಂತೆ ವರವನ್ನು ಕೊಟ್ಟನು ನೋಡಿದಿರಾ? ಸಾವಿತ್ರಿಯ ತಂದೆಗೆ ಎಷ್ಟು ಸಂತಾನಗಳನ್ನಿತ್ತನು? ಜಗತ್ಪಿತಾ! ಸರ್ವ ಜೀವಿಗಳಿಗೂ ನೀನು ಕೊಟ್ಟ ಆಯುಷ್ಯದ ಅವಧಿ ಮೀರದಂತೆ ಜೀವಗಳನ್ನು ತೆಗೆದುಕೊಂಡು ಹೋಗುವದು ಮಾತ್ರವೇ ಯಮನ ಕರ್ತವ್ಯವಲ್ಲವೆ? ದೇವತೆಗಳಿಗೆ ವರವನ್ನು ಕೊಡುವ ಅಧಿಕಾರವಿದ್ದರೂ ಹೀಗೆ ಪದವಿಗೆ ಮೀರಿದ ವರಗಳನ್ನು ಕೊಡುವುದುಂಟೆ?

ಬ್ರಹ್ಮ:—ಸರಿಯಪ್ಪಾ ಸರಿ, ನಾರದಾ! ಈಗ ಇದಕ್ಕಾಗಿ ಖೇದ ಬಡುವ ಮಹಾನುಭಾವರು ಯಾರು?

ನಾರದ:—ಯಾತ್ತಾರು? ತಮ್ಮ ಪುತ್ರನಾದ ನಾನೂ, ನಮ್ಮ ಅಭಿಮಾನಿಗಳೂ! ಅಪ್ಪಾ! ಕುಬೇರನಂತಹ ಧನಶಾಲಿಗಳು ಏನೆನ್ನುವರು ಗೊತ್ತೊ?

ಬ್ರಹ್ಮ:—ಕುಬೇರನಂತಹ ಭಾಂಡಾರಿಗಳೆ?

ನಾರದ:—ಹೌದು. 'ಯಮನು ಸಾವಿತ್ರಿಯ ಪಾಕ್ಕಿನಲ್ಲಿ ಸಿಕ್ಕಿಬಿದ್ದಾಗ ಲೋಕಪಿತಾಮಹನೊಡನೆ ಒಂದು ಮಾತನ್ನು ಕೇಳಿಕೊಳ್ಳಬೇಕಿತ್ತು' ಎಂದು ನ್ಯಾಯಸೂಕ್ಷ್ಮವನ್ನು ಬಲ್ಲ ಕುಬೇರನು ಹೇಳುತ್ತಾನೆ

ಬ್ರಹ್ಮ:—ವಿವೇಕಶೂನ್ಯನಾದ ಯಮನು ಕೊಟ್ಟವರಗಳಿಗೆ ಸಮ್ಮತಿಯನ್ನಿತ್ತ ನನ್ನನ್ನೂ 'ಮೂಢಬ್ರಹ್ಮ'ನೆಂದು ಹಳಿಯಲಿಲ್ಲವಷ್ಟೆ?

ನಾರದ:—ಸರ್ವಜ್ಞ, ಜನಕನಿಗೆ ತಿಳಿಯದಿರುವುದುಂಟೆ?

ಬ್ರಹ್ಮ:—ಆಯಿತು. ನಿನ್ನ ಬಾಯಿಯಿಂದಲೇ ಕೇಳಿಬಿಡೋಣ. ಕಪಟ ನಾಟಕ ಸೂತ್ರಧಾರಿಯ ಕೈಯಾಳಲ್ಲವೇ ನೀನು? ಹೇಳು ಯಮನಿಗೆ ಇನ್ನು ಏನೇನು ಆಗಬೇಕೋ ಹೇಳು.

ನಾರದ:—ಅದಿಷ್ಟೇ, ಯಮನನ್ನು ವಿಚಾರರಹಿತವಾಗಿಯೇ ಅಧಿಕಾರದಿಂದ ಚ್ಯುತಿಗೊಳಿಸಬೇಕು!

ಬ್ರಹ್ಮ:—ಆಹಾ! ದೇವಾಧಿದೇವ ಮಹಾವಿಷ್ಣುವೇ ನಿನ್ನ ಬಾಯಿಂದ ಹೀಗೆನ್ನಿಸಿದ ಮೇಲೆ ಇದಕ್ಕೆ ಇನ್ನೇನು ತಡೆ? ಅದಿರಲಿ. ನಾರದಾ! ಭೂಲೋಕದಲ್ಲಿ ಪತಿವ್ರತೆಯರಿಗೆ ಸಂಕಟವು ಪ್ರಾಪ್ತವಾಯಿತೆಂದೆಯಲ್ಲಾ?

ಸರ—ಅದೇನು ನಾರದಾ?

ಬ್ರಹ್ಮ:—ನಾರದಾ! ಅದನ್ನು ಹೇಳಿ ಸರಸ್ವತಿಗೂ ಲಕ್ಷ್ಮೀದೇವಿಗೆ ಹುಟ್ಟಿದ ಬಯಕೆಯನ್ನೇ ಹುಟ್ಟಿಸಿಬಿಡು!

ನಾರದ:—ಹೌದು. ಮರೆತೆನು ಎಲ್ಲಾ ಬಲ್ಲ ನೀವೇ ನೆನಪಿಗೆ ತಂದಿರಿ ಕೇಳೋಣಾಗಲಿ. ಯಮನು ಸಾವಿತ್ರಿಗೆ ಪತಿಯ ಜೀವವನ್ನು ಹಿಂದಿರುಗಿ ಕೊಟ್ಟುದರಿಂದ, ಪತಿಯನ್ನು ಕಳೆದುಕೊಂಡ ಇತರ ಸತೀಮಣಿ

ಯರೂ ಯಮಲೋಕಕ್ಕೆ ಹೊರಡುವ ಸಾಹಸಕಾರ್ಯಕ್ಕೆ ತೊಡಗುವಂತಾಗಿದೆ ಅಪ್ಪಾ! ಅಂತಹ ಒಬ್ಬಳು ಸಾಧ್ವಿಯನ್ನು ಅಗೋ, ನೋಡೋಣಾಗಲಿ! (ತೋರಿಸುವನು ಆ ದಿಕ್ಕಿನಲ್ಲಿ ಪರದೆಯೊಂದು ಸರಿಯುವುದು. ಅಲ್ಲಿ ಭೈರವಿ ಭೂಲೋಕದಿಂದ ಯಮಲೋಕಕ್ಕೆ ಏರುವ ದೃಶ್ಯವು ಕಾಣುವದು. ಯಮದೂತರು ಅವಳನ್ನು ಭೂಮಿಗೆ ತಳ್ಳುವರು. ಅವಳು ಮತ್ತೆ ಮೇಲಕ್ಕೆ ಏರುವಳು.)

ನಾರದ.-ನೋಡಿದಿರಾ! ಆ ಬಡ ಹೆಂಗಸು ಇನ್ನೂ ಇಪ್ಪತ್ತೈದು ವರ್ಷ ಭೂಮಿಯಲ್ಲಿರಬೇಕಾಗಿದೆ, ಆದರೆ ಸಾವಿತ್ರಿಗೆ ಪತಿಯ ಜೀವವು ಮರಳಿ ದೊರೆತಂತೆ ತನಗೂ ದೊರೆಯುವದೆಂದು ನಂಬಿ, ಅವಳು ವರಬಲದಿಂದ ಬಾರಿ ಬಾರಿಗೂ ಯಮಲೋಕಕ್ಕೆ ಏರುತ್ತ ಯಮದೂತರಿಂದ ತಳ್ಳಲ್ಪಟ್ಟು ಬೀಳುತ್ತ ಇದ್ದಾಳೆ. ಹೀಗೆ ಅವಳು ಕಷ್ಟಪಡುತ್ತಿರುವ ಪಾಪವು ಯಾರನ್ನು ಸೇರಬೇಕು? ನಾರಾಯಣ! ನಾರಾಯಣ!

ಬ್ರಹ್ಮ (ತಲೆದೂಗುತ್ತ):—ನಾರಾಯಣ! ನಾರಾಯಣ! ಈ ಬಗೆಯ ಕಲ್ಪನೆಯ ಪಾಪವು ಯಾವ ಮಹತೋಮಹಿಮನ ಪ್ರೇರೇಪಣೆಯಿಂದಾಯಿತೋ ಅವನನ್ನೇ ಸೇರಬೇಕು!

ನಾರದ:—ನಾರಾಯಣ! ನಾರಾಯಣ! ಈ ದೃಷ್ಟಾಂತವನ್ನಂತೂ ನೋಡಿದಿರಷ್ಟೆ?

ಬ್ರಹ್ಮ:— ಆಹಾ! ಬಲು ಚನ್ನಾಗಿ ಸೃಷ್ಟಿಯಾಗಿದೆ!

ನಾರದ:-ಅಪ್ಪಾ! ಸೂಕ್ಷ್ಮ ವಿಚಾರಿಗಳ ಕಣ್ಣಿಗೆ ಇದರ ಮೂಲ ತತ್ವವು ಹೊಳೆದರೂ, ಸಾಮಾನ್ಯರ ಕಣ್ಣುಗಳಿಗೆ ಇವೆಲ್ಲಾ ಹೇಗೆ ಹೊಳೆದಾವು?

ಬ್ರಹ್ಮ. -ಹೌದು ಇದಕ್ಕೆ ನಾನೇನೂ ಆಕ್ಷೇಪಿಸಲಿಲ್ಲವಲ್ಲಪ್ಪಾ! ಆದರೆ ಯಮನು ಧರ್ಮಕ್ಕೆ ಲೋಪವನ್ನುಂಟುಮಾಡಿದವನಾಗಿದ್ದರೆ ಆ ಧರ್ಮಸಿಂಹಾಸನವು ಅವನನ್ನು ತಳ್ಳಿಬಿಡುತ್ತಿದ್ದಿತಲ್ಲವೆ? ಇದಕ್ಕೆ ಏನು ಉತ್ತರವು ಸಿದ್ಧವಾಗಿದೆಯೋ?

ನಾರದ: -ಅದಕ್ಕೆ ಉತ್ತರವಿಷ್ಟೆ; ಯಮನು ಎಷ್ಟೋ ಕಾಲದಿಂದ ಆ ಧರ್ಮಾಸನದಲ್ಲಿಯೇ ಕುಳಿತವನಾದುದರಿಂದ ಆ ಧರ್ಮಾಸನಕ್ಕೂ ಯಮ

ನಿಗೂ ಅಚ್ಚುಮೆಚ್ಚಾಗಿದೆ. ಅಲ್ಲದೆ ಮೇಲಧಿಕಾರಿಗಳಾದ ತ್ರಿಮೂರ್ತಿಗಳೇ ಸುಮ್ಮನಿರುವಾಗ ಧರ್ಮಾಸನವು ಏನು ಮಾಡೀತು ಪಾಪ! ಅದೂ ಅಲ್ಲದೆ ಯಮನ ಪಾಪದ ಕೊಡವೂ ತುಂಬಿ ಬರಬೇಡವೆ? ಈಗ ಸತೀ ಭೈರವಿ ಪಡುತ್ತಿರುವ ತಾಪದ ಪಾಪವು ಯಮನಿಗಲ್ಲವೇ ತಗಲಬೇಕು? ಅಂತೆಯೇ ನಾವೀಗ ಯಮಪತನವನ್ನು ಕುರಿತು ಚರ್ಚೆಗೂ ಪ್ರಾರಂಭಮಾಡಿರು ತ್ತೇವೆ. ಇನ್ನು ಆ ಯಮನು ಎಷ್ಟು ಕಾಲ ಧರ್ಮಾಸನದಲ್ಲಿ ಮೆರೆದಾನು? ಇದೆಲ್ಲಾ ಆ ಧರ್ಮಸಿಂಹಾಸನದ ಮಹಿಮೆಯಲ್ಲವೇ ಅಪ್ಪಾ?

ಬ್ರಹ್ಮ:—ಭಲೆ! ಭಲೆ!

ನಾರದ:—ಇದನ್ನೆಲ್ಲ ತಿಳಿದೂ ಇನ್ನು ಯಮನನ್ನು ಮನ್ನಿಸಬಹುದೆ?

ಬ್ರಹ್ಮ:—ಕೂಡದು!

ನಾರದ:—ಹಾಗೆಯೇ ಯಮನು ಸಾವಿತ್ರಿಗೆ ಕೊಟ್ಟ ಪತಿಭಿಕ್ಷೆಯ ವರವನ್ನು ರದ್ದುಗೊಳಿಸಬೇಕು! ಆಗತಾನೇ ನಿನ್ನ ಲಿಖಿತದ ಮರ್ಯಾದೆ ಉಳಿದೀತು! ಯಮನಿಗೂ ತನ್ನ ವರಗಳ ಬೆಲೆಯೆಷ್ಟೆಂದು ಗೊತ್ತಾದೀತು!

ಬ್ರಹ್ಮ:—ಆಹಾ! ಅದೂ ಆಗಬೇಕೆ?

ನಾರದ:—ಮತ್ತೆ?

ಬ್ರಹ್ಮ:—ಕೊಟ್ಟ ವರಗಳನ್ನು ರದ್ದುಗೊಳಿಸಿದರೆ, ಜನರಿಗೆ ದೇವ ರಲ್ಲಿ ವಿಶ್ವಾಸ ಕಡಿಮೆಯಾಗುವದಿಲ್ಲವೆ?

ನಾರದ:-ದೇವತೆಗಳು ಕೊಟ್ಟ ನೂರಾರು ವರಗಳಲ್ಲಿ ಇಂತಹ ಲೋಕ ಕಲ್ಯಾಣಕಾರಕವಾದ ಒಂದೆರಡು ವರಗಳು ರದ್ದಾದರೆ ಏನಾದೀತು ಮಹಾ!

ಬ್ರಹ್ಮ:—ಸರಿ ಸರಿ!

ಸರಸ್ವತಿ:—ಅಯ್ಯೋ! ನಾರದಾ! ಆ ವರಗಳನ್ನು ರದ್ದುಗೊಳಿಸಿದರೆ ಪಾಪ! ಸಾವಿತ್ರಿ ನಿತ್ಯ ದುಃಖಕ್ಕೆ ಈಡಾಗುವಳಲ್ಲ!

ಬ್ರಹ್ಮ:—ಪ್ರಿಯೆ! ನಾರದನ ಇಷ್ಟೆಲ್ಲಾ ಜಾಲಗಳ ಉದ್ದೇಶವೇ ಇದಾಗಿದೆ. ನಾರದಾ, ಸರಸ್ವತಿಗಾಗಿ ಸ್ವಲ್ಪ ವಿವರಿಸಯ್ಯಾ!

ನಾರದ:—ಅಮ್ಮಾ, ಸತೀ ಸಾವಿತ್ರಿಗಾಗಿ ಹಂಬಲಿಸಬೇಡ. ಪ್ರಖರ ಪತಿವ್ರತೆಯಾದ ಆವಳು ದೇವಾಧಿ ದೇವರನ್ನೇ ಮೆಚ್ಚಿಸಿ ತನಗೆ ಬೇಕಾದ

ವರಗಳನ್ನು ಪಡೆಯಬಲ್ಲಳು ತಾಯಿ! ರಹಸ್ಯವನ್ನು ಕೇಳು, ಯಮನ ವರ್ತನೆಯಿಂದ ಸಾವಿತ್ರಿಯು ಪಾತಿವ್ರತ್ಯಪ್ರಭಾವವು ಚೆನ್ನಾಗಿ ಪ್ರಕಾಶವಾಗಲಿಲ್ಲ ಪರಮ ಪುಣ್ಯಾತ್ಮನಾದ ರಾಜರ್ಷಿ ಸತ್ಯವಾನನು ವಿಷ್ಣುದೂತರ ಮೂಲಕವಾಗಿ ವೈಕುಂಠಕ್ಕೆ ಹೋಗಬೇಕಿತ್ತೆಂದೂ, ಇದರ ವಿಷಯವಾಗಿ ಯಮನು ಯೋಚಿಸಬೇಕಿತ್ತೆಂದೂ ಕೆಲವರಾಡುವರು ಸಾವಿತ್ರಿಯ ಬಾಯಿಗೆ ಸಿಕ್ಕಿಬಿದ್ದ ಯಮನು ಹೇಗಾದರೂ ತಪ್ಪಿಸಿಕೊಂಡು ಪಾರಾದನು!

ಸರಸ್ವತಿ:— ಇದರಲ್ಲಿ ಯಮನು ಅಷ್ಟೆಲ್ಲಾ ಯೋಚನೆ ಮಾಡದಿರಲಿಕ್ಕೆ ಸಾವಿತ್ರಿಯ ಪಾತಿವ್ರತ್ಯಪ್ರಭಾವವೇ ಕಾರಣವಾಗಿರಬಹುದು. ಅದಕ್ಕಾಗಿ ಸಾವಿತ್ರಿಯನ್ನು ಮೆಚ್ಚಬೇಕಲ್ಲವೆ?

ನಾರದ:—ಮೆಚ್ಚಬೇಕು. ನಿಜ. ಮೆಚ್ಚಿ ಕರ್ತವ್ಯವನ್ನು ಮರೆತವನು ಧೀರನೆ? ಅಮ್ಮಾ! ಯಮನು ಸತ್ಯವಾನನ ಆಯುರ್ದಾಯದ ವಿಧಿಯನ್ನರಿತು, ಪರಮ ಪುಣ್ಯಾತ್ಮನಾದ ಅವನ ವಿಷಯವಾಗಿ ವೈಕುಂಠಕ್ಕೆ ಬಿನ್ನವತ್ತಳೆಯನ್ನು ಕಳುಹಿಸಬೇಕಿತ್ತು. ಆಗ ವಿಷ್ಣುದೂತರು ಅವನನ್ನು ವೈಕುಂಠಕ್ಕೆ ಒಯ್ಯುತ್ತಿದ್ದರು. ಸಾವಿತ್ರಿ ಅಷ್ಟು ಪಾತಿವ್ರತ್ಯದ ಶಕ್ತಿಯುಳ್ಳವಳಾಗಿದ್ದರೆ ಪತಿಯ ಹಿಂದೆ ವೈಕುಂಠಕ್ಕೇ ಹೋಗುತ್ತಿದ್ದಳು; ತಕ್ಕ ನಿವೃತ್ತಿಯೂ ಅಲ್ಲಿ ಅವಳಿಗೆ ಆಗುತ್ತಿತ್ತು. ಈ ಅಮೂಲ್ಯವಾದ ಪುಣ್ಯಸಂಧಿಯನ್ನು ತಪ್ಪಿಸಿ ಯಮನು ತನ್ನ ಅಧಿಕಾರ ಮರ್ಯಾದೆಯನ್ನು ಮೀರಿ, ಸರ್ವಾಧಿಕಾರಿಯಂತೆ ವರ್ತಿಸಿ, ಪರಮಾತ್ಮ ದ್ರೋಹ ಮಾಡಿರುವದರ ಜತೆಗೆ, ಸಾವಿತ್ರಿಯ ಕೀರ್ತಿಯ ಪ್ರಕಾಶವನ್ನು ಸಂಕುಚಿತ ಪಡಿಸಿರುತ್ತಾನೆ. ಆದುದರಿಂದ ಈಗ ಸತ್ಯವಾನನ ಆಯುಷ್ಯವನ್ನು ರದ್ದುಪಡಿಸುವುದರಿಂದ ಸಾವಿತ್ರಿಯ ಮಹಿಮೆ ಬೆಳಗುವುದೆಂದು ತಿಳಿ.

ಸರಸ್ವತಿ:—ಆಯಿತು; ಆದರೆ ಅದೆಲ್ಲಾ ಸತ್ಯವಾನನ ಹಣೆ. ಬರೆಹದಂತೆ ತಾನೇ ಜರುಗಿತು.

ನಾರದ:—ಹೌದು. ಅದೂ ಅವನ ಹಣೆಯಲ್ಲಿರುವ ಬ್ರಹ್ಮಲಿಖಿತದ ಅರ್ಥವೇ ಆಗಿದೆ.

ಬ್ರಹ್ಮ:—ಅಹಾ! ಚನ್ನಾಗಿ ಹೇಳಿದಿ! ಇರಲಿ. ಇನ್ನು ಯಮನ ಅಧಿಕಾರಕ್ಕೆ ಯಾವ ಪ್ರಾಣಿಯ ಗೊತ್ತು ಮಾಡಲ್ಪಟ್ಟದೆಯೊ?

ನಾರದ:—ಅದೂ ಗೊತ್ತು ಮಾಡಲ್ಪಟ್ಟಿದೆ. ನಿನ್ನ ಹುಂಕಾರವೊಂದೇ ಇನ್ನು ಉಳಿದುದು! ಅಳಕಾಪುರಿಯ ಕುಬೇರನು ಶೈಮಿನಿಗೆ ಇದಿರಾಗಿಯೇ ಇರುವನಲ್ಲವೆ? ಅವನು ಶೈಮಿನಿಯನ್ನು ಸುಲಭವಾಗಿ ಆಳಿಕೊಂಡು ಹೋಗಬಹುದು.

ಬ್ರಹ್ಮ:—ಹೋಗಬಹುದು! ಹಾಗೆ ಹೋಗಬಲ್ಲವನಿಗೆ ಒಮ್ಮೆಲೆ ಸ್ಥಿರಾಧಿಕಾರವೋ-ಅಲ್ಲಾ-—

ನಾರದ:—ಸ್ಥಿರಾಧಿಕಾರ ಕೊಟ್ಟರೆ ಏನು ಪ್ರಯೋಜನ?

ಬ್ರಹ್ಮ:—ಆ! ಹಾಗೆ ಹೇಳು! ಸರಿ! ಸರಿ!

ನಾರದ:—ಪ್ರಕೃತ ಪರೀಕ್ಷಾರ್ಥವಾಗಿಯೇ ಕೊಡುವುದು. ಆ ಮೇಲೆ ಆಗುವ ಹಾಗೆ ಆಗಿಯೇ ಆಗುತ್ತದಲ್ಲಾ!

ಬ್ರಹ್ಮ:—ನಿಜ ನಿಜ! ಈ ಎಲ್ಲಾ ಸಂಗತಿಗಳನ್ನು ಎಲ್ಲಾ ಬಲ್ಲ ನಮ್ಮ ಪ್ರಭುಪ್ರವರರಿಗೆ ತಿಳಿಸಿ, ಅವರ ಸಮ್ಮತಿಯನ್ನು ಕ್ರಮಪ್ರಕಾರ ಪಡೆಯಬೇಕಲ್ಲವೆ?

ನಾರದ:—ತಂದೆಯೇ, ಎಲ್ಲವನ್ನು ಬರೆಯಿಸಿ ನನ್ನ ಕೈಗೇ ಕೊಡಿರಿ!

ಬ್ರಹ್ಮ:—ಹೌದು. ನಿನ್ನ ಕೈಗೇ ಕೊಡಬೇಕಾದುದು. (ಸರಸ್ವತಿಗೆ) ವಾಗ್ದೇವಿ! ನಿನಗೆಲ್ಲವೂ ಗೊತ್ತಾಯಿತಷ್ಟೆ? ಇನ್ನು ಪತ್ರವನ್ನು ಬರೆ. ಅದರಲ್ಲಿ ಯಮನ ಅಪರಾಧಗಳನ್ನು ಸಂಕ್ಷೇಪ-ಸಂಪುಷ್ಟವಾಗಿ ತೋರಿಸು. ಕುಬೇರನಿಗೆ ಶೈಮಿನಿಯ ಅಧಿಕಾರದನ್ನು ಕೊಡಬಹುದೆಂಬ ನಮ್ಮ ಯೋಚನೆಯನ್ನೂ ಸೂಚಿಸು.

ಸರಸ್ವತಿ —ಆಜ್ಞೆ (ಪತ್ರವನ್ನು ಬರೆದು ಬ್ರಹ್ಮನ ಕೈಗೆ ಕೊಡುವಳು)

ಬ್ರಹ್ಮ (ನೋಡಿ ತಲೆದೂಗಿ): —ಸರಿಯಾಗಿದೆ. ದೇವಿ! ಪದ್ಮ ಮತ್ತು ಹಂಸಮುದ್ರೆಗಳನ್ನು ತಾ. (ಸರಸ್ವತಿ ಕೊಟ್ಟ ಆ ಮುದ್ರೆಗಳನ್ನು ಆ ಪತ್ರದಲ್ಲೊತ್ತಿ, ನಾರದನ ಕೈಯಲ್ಲಿ ಕೊಡುವನು.) ನಾರದಾ! ಇನ್ನು ನೀನು ಹೋಗಿ ಮುಂದಿನ ಕಾರ್ಯಗಳನ್ನು ಪೂರಯಿಸು.

ನಾರದ:—ಅಪ್ಪಣೆ (ಎದ್ದು ವಂದಿಸಿ) ಜಯ ನಾರಾಯಣ! ಹರಿ ನಾರಾಯಣ! [ಶ್ರು] (ಹೋಗುವನು.)

## ದೃಶ್ಯ ೨—ದಾರಿ.

ನಾರದ (ಕೈಯೊಳಗಿನ ಪತ್ರದೊಂದಿಗೆ ಪ್ರವೇಶಿಸಿ):—ಜಯ ನಾರಾಯಣ! ನಾರಾಯಣ! ಆಹಾ! ಜಗತ್ಪಿತಾಮಹನಾದ ಬ್ರಹ್ಮನನ್ನು ನನ್ನ ಕಾರ್ಯಕ್ಕೆ ಅನುಕೂಲಪಡಿಸಿಕೊಳ್ಳುವ ಮುಖ್ಯ ಕಾರ್ಯವು ಬಹು ಸುಲಭವಾಗಿ ನೆರವೇರಿಬಿಟ್ಟಿತು. ಯಮನು ಮಾಡಿದುದು ನ್ಯಾಯವೇ ಸರಿಯೆಂದು ಬ್ರಹ್ಮದೇವನು ಎಲ್ಲಿ ತೀವ್ರ ವಾದಮಾಡುವನೋ ಎಂದು ನಾನು ಹೆದರಿಕೊಂಡೇ ಇದ್ದೆನು, ಆದರೆ ಸರ್ವಜ್ಞನಾದ ಬ್ರಹ್ಮನು ನನ್ನ ಸೂಚನೆಗಳಿಗೆಲ್ಲಾ ಸೈ ಸೈ ಎಂದು ನಾಲ್ಕು ತಲೆಗಳನ್ನೂ ಆಡಿಸಿಯೇ ಬಿಟ್ಟನು ಯಮನ ಅಪರಾಧ ವಿವರಣೆಯ ಪತ್ರವನ್ನು ಬರೆಸಿ ನನ್ನ ಕೈಯಲ್ಲಿಯೇ ಕೊಟ್ಟುದು ಬಲು ಬಲು ಅನುಕೂಲವಾಯಿತು! ಇನ್ನು ಇದನ್ನು ಒಯ್ದು ಹರಿ-ಹರರಿಗೆ ತೋರಿಸಿ, ಅವರ ಒಪ್ಪಿಗೆಯನ್ನು ಪಡೆದುಬಿಟ್ಟರೆ ಮುಗಿಯಿತು. ಆದರೆ—ಮೊದಲು ಹರಿಯ ಬಳಿಗೆ ಹೋಗಬೇಕೋ-ಹರನ ಬಳಿಗೆ ಹೋಗಬೇಕೋ? (ಯೋಚಿಸಿ) ಮೊದಲು ಹರನ ಬಳಿಗೆ ಹೋದರೆ ಸ್ವಲ್ಪ ಕಷ್ಟವುಂಟು ಹರನು ಈ ಪತ್ರವನ್ನು ನೋಡಿ, 'ಹೇಗೆ?' 'ಏಕೆ?' ಎಂದೆಲ್ಲಾ ಇಪ್ಪತ್ತೈದು ಕುಂಟು ಪ್ರಶ್ನೆ ಮಾಡಿಯಾನು. ಆದುದರಿಂದ ಮೊದಲು ಹರಿಯ ಸನ್ನಿಧಿಗೇ ಹೋಗೋಣ ಆ ಪರಾತ್ಪರನ ಇಚ್ಛೆಯಂತೆಯೇ ನಾನು ಈ ಲೀಲೆಯಲ್ಲಿ ತೊಡಗಿರುವೆನಾದುದರಿಂದ, ಆತನು ಸಂತೋಷಪೂರ್ವಕವಾಗಿ ತನ್ನ ಸಮ್ಮತಿಯ ಮುದ್ರೆಯನ್ನು ಕರುಣಿಸಿಯೇ ಕರುಣಿಸುವನು. ಆ ಮೇಲೆ ಕೈಲಾಸಕ್ಕೆ ಹೋದರೆ, ಶಿವನು ಹರಿಮುದ್ರೆಯನ್ನು ಕಂಡು, ಮರುಮಾತಾಡದೆ ತನ್ನ ಒಪ್ಪಿಗೆಯಾಕಿಬಿಡುವನು. ಇದೇ ಸರಿ. ಮೊದಲು ವೈಕುಂಠಕ್ಕೇ ಹೋಗುವೆನು ಜಯ ನಾರಾಯಣ ನಾರಾಯಣ!

(ಹೋಗುವನು.)

---

## ದೃಶ್ಯ ೩—ಶ್ರೀ ವೈಕುಂಠ

(ಶ್ರೀಮನ್ನಾರಾಯಣನು ಶೇಷಶಾಯಿಯಾಗಿರುವನು. ಲಕ್ಷ್ಮಿ ಪಾದಸೇವೆ ಮಾಡುತ್ತಿರುವಳು.)

ಲಕ್ಷ್ಮಿ:—ಕಾಂತಾ! ಸತೀ ಸಾವಿತ್ರೀದೇವಿಯನ್ನು ಈ ವೈಕುಂಠಕ್ಕೆ ಬರಮಾಡುವ ಯೋಗವನ್ನು ಕಲ್ಪಿಸುವೆನೆಂದು ಹೇಳಿ ಹೋದ ನಮ್ಮ ನಾರದನು ಇನ್ನು ಕಾಣುವದಿಲ್ಲವೇಕೆ?

ನಾರಾಯ:—ಕಾಂತೆ! ಆತುರಪಡಬೇಡ ನಾರದನು ಕೈಗೊಂಡ ಕಾರ್ಯವು ವ್ಯರ್ಥವಾಗದು. ಆತನು ಎಲ್ಲವನ್ನೂ ಕ್ರಮಪಡಿಸಿಕೊಂಡ ಅದೋ ಬರುತ್ತಿರುವನು ನೋಡಿದಿಯಾ?

ನಾರದ (ತೆರೆಯಲ್ಲಿ [೨೭] ):—ಜೈ ಲಕ್ಷ್ಮೀನಾರಾಯಣ! (ಬಂದು ಶಾಂತಮೂರ್ತಿ! (ವಂದಿಸುವನು)

ನಾರಾಯ (ಮಂದಹಾಸದಿಂದ ಕೈಸನ್ನೆ ಪೂರ್ವಕ ಹರಸುತ್ತ).— ನಾರದಾ! ಕೈಕೊಂಡ ಕಾರ್ಯವು ಎಲ್ಲಿಯವರೆಗೆ ಬಂತು? ನಮ್ಮ ಲಕ್ಷ್ಮಿ ದೇವಿ ಅದನ್ನು ತಿಳಿಯಲು ತುಂಬಾ ಕುತೂಹಲದಿಂದಿರುವಳು.

ನಾರದ:—ಸರ್ವಾಂತರ್ಯಾಮಿ! ತಾಯಿ! ಸತೀಶಿರೋಮಣಿಯಾದ ಸಾವಿತ್ರಿಯ ವೈಕುಂಠಾಗಮನಕ್ಕೆ ಇನ್ನು ಸ್ವಲ್ಪ ಕಾರ್ಯ ಮಾತ್ರವೆ ಉಳಿದಿದೆ. ದೇವಾ! ಭೈರವಿಯೆಂಬ ಇನ್ನೊಬ್ಬಳು ಸತೀಮಣಿಯು ಪ ತಾಪಯೋಗವೊಂದನ್ನು ಕಲ್ಪಿಸಿ, ಆ ಮೂಲಕವಾಗಿ ಯಮನ ಅಪರಾಧ ವನ್ನು ಬ್ರಹ್ಮನಿಗೆ ದೃಷ್ಟಾಂತ ಪಡಿಸಿ, ಅವನು ಒಪ್ಪುವಂತೆ ಮಾಡಿದೆನು ಈ ಸಂದರ್ಭದಲ್ಲಿ ಧನಮತ್ತತೆಯಿಂದ ಕೊಬ್ಬಿರುವ ಕು ಬೇ ರ ನ ಗರ್ವ ಭಂಗಕ್ಕೂ ಒಂದು ದಾರಿಯನ್ನು ತೆಗೆದಿದ್ದೇನೆ. ಶ್ರೀ ಪರಮಾತ್ಮ! ಇಗೋ ಬ್ರಹ್ಮನು ಬರೆದು ಕೊಟ್ಟಿರುವ ಯಮನ ಅಪರಾಧ ವಿವರಣೆಯ ಪತ್ರವಿದು ಇದಕ್ಕೆ ನಿನ್ನ ಅನುಮತಿರೂಪವಾದ ಶಂಖ-ಚಕ್ರಗಳ ಮುದ್ರೆಯನ್ನು ಕರು ಣಿಸು. (ಭಕ್ತಿಯಿಂದ ಪತ್ರವನ್ನು ಕೊಡುವನು. ಲಕ್ಷ್ಮೀನಾರಾಯಣರು ಮಂದಹಾಸಪೂರ್ವಕ ತಮ್ಮೊಳಗೇ ಓದಿಕೊಂಡು ತಲೆದೂಗುವರು ನಾರಾಯಣನು ಶಂಖ-ಚಕ್ರಗಳ ಮುದ್ರೆಯನ್ನು ಆ ಪತ್ರದ ಮೇಲೆ ಒತ್ತಿ ನಾರದನಿಗೆ ಕೊಡುವನು- ನಾರದನು ಅದನ್ನು ಭಕ್ತಿಯಿಂದ ಕಣ್ಣಿಗೆ ಒತ್ತಿ ಕೊಳ್ಳುವನು.)

ನಾರಾಯಣ:—ಕಾಂತೆ! ನೋಡಿದಿಯಾ ನಮ್ಮ ನಾರದನ ಚಾತು

ಲಕ್ಷ್ಮಿ (ತನ್ನೊಳಗೆ):-ನಾರದಾ! ಇನ್ನು ಸತೀಮಣಿ ಸಾವಿತ್ರಿಯನ್ನು ಇದಿರುಗೊಳ್ಳಲು ನಾನು ಸಿದ್ಧಳಾಗಿರಬಹುದಷ್ಟೆ?

ನಾರದ.—ಓಹೋ! ಸಂದೇಹವೇನು ತಾಯೇ! ಶ್ರೀಹರಿಪ್ರಸಾದ ರೂಪವಾದ ಶಂಖ-ಚಕ್ರ ಮುದ್ರೆಗಳು ದೊರೆತ ಮೇಲೆ ಇನ್ನೇತರ ಕೊರತೆ? ದೇವಾ! ಹೋಗಿ ಬರುವೆನು. ಅಪ್ಪಣೆ ದಯಪಾಲಿಸು. (ಬಾಗುವನು.)

ನಾರಾ. -ಹೋಗಿ ಬಾ, ನಾರದಾ! ನಿನಗೆ ಜಯವಾಗಲಿ! (ಕೈಸನ್ನೆಯಿಂದ ಹರಸುವನು ನಾರದನು ವಂದಿಸಿ ಹೋಗುವನು.)[೨೮]

---

ದೃಶ್ಯ ೪—ದಾರಿ.

ನಾರದ (ಪ್ರವೇಶಿಸಿ):-ಆಹಾ! ಕಪಟ ನಾಟಕ ಸೂತ್ರಧಾರಿಯಾದ ಮಹಾವಿಷ್ಣುವಿನ ಮುದ್ರೆ ಕೇಳದೆಯೇ ಸಿಕ್ಕಿದ ಹಾಗೆ ಸಿಕ್ಕಿತು. ಇನ್ನು ಪರಮೇಶ್ವರನ ಒಪ್ಪಿಗೆಯೊಂದು ಸಿಕ್ಕಿರೆ ಯಮನು ಅಪರಾಧಿಯೆಂದು ಸಿದ್ಧವಾಗಿ ಹೋಗುವದು. ಅಂತೆಯೇ ಕೈಲಾಸದ ಬಳಿಗೇನೋ ಬಂದೆನು. ಬ್ರಹ್ಮ-ವಿಷ್ಣುಗಳ ಮುದ್ರೆಯನ್ನು ಕಾಣುತ್ತಲೇ ಅವನು ಸುಲಭವಾಗಿ ತನ್ನ ತ್ರಿಶೂಲದ ಮುದ್ರೆಯನ್ನು ಒತ್ತಿಯೇ ಬಿಡುವನೆನ್ನಲು ಏನೂ ಸಂದೇಹವಿಲ್ಲ, ಆದರೆ. ಆ ರುದ್ರಸ್ವರೂಪನು ಈಗ ಯಾವ ಸ್ಥಿತಿಯಲ್ಲಿರುವನೋ ಏನೋ! ಸಮಯಾಸಮಯವರಿಯದೆ ಅವನ ಬಳಿಗೆ ಹೋಗಿ ಬಿಟ್ಟರೆ, ಅತನ ಫಾಲಾಗ್ನಿಗೆ ನಾನು ಬಲಿಬೀಳಬೇಕಾದೀತೇನೋ! ಅಥವಾ ಆ ತ್ರಿಶಾಲಜ್ಞನು ಇದೆಲ್ಲಾ 'ನಾರದನ ವಿತಂಡ ಲೀಲೆಯೇ' ಎಂದು ಅರಿತುಕೊಂಡು ಕೋಪಗೊಂಡರೂ ಗೊಂಡಾನು. ಇದಕ್ಕೇನು ಮಾಡಲಿ? ನಾರಾಯಣ! ನಾರಾಯಣ! ಆಹಾ! ಇದೇನು? ಈ ನಾರದನು -- ಶ್ರೀಮನ್ನಾರಾಯಣನ ದಿವ್ಯನಾಮಾಧಾರದಿಂದ ದೃಢವಾಗಿರುವ ಈ ನಾರದನು-ಈ ಕ್ಷುದ್ರ ವಿಷಯಕ್ಕೆಲ್ಲಾ ಅಂಜಬಹುದೆ? ನನ್ನ ಈ ತಂಬೂರಿಯ ಗಾನದಿಂದ ಶಿವನ ಎಂತಹ ಕೋಪವನ್ನಾದರೂ ಶಾಂತಪಡಿಸಿ, ನನ್ನ ರಾಗಕ್ಕೆ ತಕ್ಕ ತಾಳವನ್ನೇ ಹಾಕಿಸಬಲ್ಲೆನು ಅವನಿಂದ! ಹಾವಾಡಿಗನ ನಾಗಸ್ವರಕ್ಕೆ ಕ್ರೂರ ಸರ್ಪವು-ಕೂಡಾ ತಲೆಯಾಡಿಸಿ ಕುಣಿಯುವಂತೆ, ನನ್ನ ಈ ತಂಬೂರಿಯ ಗಾನಕ್ಕೆ ಪರವಶ

ನಾಗಿ, ಆ ಶಿವನು ನನ್ನ ರಾಗಕ್ಕೆ ತಲೆಯಾಡಿಸುವದರಲ್ಲಿ ಯಾವ ಸಂದೇಹವೂ ಇಲ್ಲ. ಎಲೈ ತಂಬೂರಿಯೆ! ಜಾಗೃತನಾಗು! ಕೈಲಾಸವು ಸಮೀಪಿಸಿಬಿಟ್ಟಿತು! [೨೯] (ಹೋಗುವನು)

---

ದೃಶ್ಯ ೫—ಕೈಲಾಸ

( ಶಿವ-ಪಾರ್ವತಿಯರು ಕುಳಿತಿರುವರು, ಅಲ್ಲಲ್ಲಿ ನಂದೀಗಣಗಳೂ ಇವೆ )

ನಾರದ (ತೆರೆಯಲ್ಲಿ) [೩೦] ನಾರಾಯಣ ನಾರಾಯಣ!

ಪಾರ್ವತಿ:—ನಾಥಾ! ನಾರದನ ಸಂಗೀತವು ಕೇಳಿಸುತ್ತದೆ! ಏನು ವಿಶೇಷವೊ!

ಶಿವ:—ಏನೋ ವಿಶೇಷವಿರಬೇಕು.

ನಾರದ (ಪ್ರವೇಶಿಸಿ) [೩೧]:-ಜಯ ಶಂಕರ-ನಾರಾಯಣ! (ವಂದಿಸುವನು.)

ಶಿವ:—ಏನು ನಾ ರ ದಾ! ಅಪರೂಪವಾಗಿ ಬರೋಣವಾಯಿತಲ್ಲ! ಎಲ್ಲಾ ಕುಶಲವೇ?

ನಾರದ·—ಕುಶಲ ಮಹಾದೇವಾ! (ಸ್ವಗತ) ಅಬ್ಬ! ಪರಮೇಶ್ವರನು ಪ್ರಸನ್ನನಾಗಿಯೇ ಇರುವನು.

ಶಿವ:—ವಿಶೇಷವೇನು?

ನಾರದ:—ಪರಮೇಶ್ವರ! ವಿಶೇಷವೆಂದೇ ಬಂದಿರುವೆನು. ಬ್ರಹ್ಮ-ವಿಷ್ಣುಗಳ ಕಾರ್ಯಾರ್ಥವಾಗಿ ಬರೋಣಾಯಿತು.

ಶಿವ.—ಆಹಾ! ಅದೇನು, ಬೇಗನೆ ತಿಳಿಸೋಣಾಗಲಿ!

ನಾರದ:—ಶಂಭೋ, ಈ ಪತ್ರವನ್ನು ನೋಡಿದರೆ ಎಲ್ಲಾ ವೇದ್ಯವಾಗುವದು. ಆ ಮೇಲೆ ಇದಕ್ಕೆ ನಿಮ್ಮ ಒಪ್ಪಿಗೆಯ ಗುರುತನ್ನು ದಯಪಾಲಿಸಬೇಕು. (ಪತ್ರವನ್ನು ಕೊಡುವನು)

ಶಿವ (ಓದುತ್ತ):—ಓಹೋ!....ಆಶ್ಚರ್ಯ!.....ಬ್ರಹ್ಮದ್ರೋಹಿ ...ನಿಜ ನಿಜ!....ವರಗಳ ರದ್ದು!....ಆಹಾ!....ಹೊಸನ್ಯಾಯ!....ಸಮಂಜಸವಾಗಿದೆ! ...ಕುಬೇರನಿಗೆ ಧರ್ಮಾಧಿಕಾರ!....ಆಗಬಹುದು (ಓದಿ ಮುಗಿಸಿ) ನಿಜ! ಇಂತಹ ಸೂಕ್ಷ್ಮ ವಿಚಾರವು ಯಾರಿಗೂ ಥಕ್ಕನೆ ಹೊಳೆಯಲಾರದು. ಇದ

ರಿಂದ ಯಮನು ಶಿಕ್ಷಾರ್ಹನೇ ಸರಿ ಅಂದು ನನ್ನ ಪರಮ ಭಕ್ತನಾದ ಮಾರ್ಕಾಂಡೇಯನನ್ನು ಕೆಣಕಿ ನನ್ನ ಕೋಪಕ್ಕೆ ಆಹುತಿಯಾದನು. ಇಂದು ಹೀಗೆ ಅತ್ಯಾಚಾರ ಮಾಡಿದ್ದಾನೆಂದು ಬಲ್ಲವರಿಂದ ವಿವೇಚಿಸಲ್ಪಟ್ಟಿತು. ನಾರದಾ! ಬ್ರಹ್ಮ-ವಿಷ್ಣುಗಳ ಯೋಜನೆಗೆ ನನ್ನ ಸಂಪೂರ್ಣ ಸಮ್ಮತಿಯುಂಟು (ತ್ರಿಶೂಲದ ಮುದ್ರೆಯನ್ನೊತ್ತಿ ಪತ್ರವನ್ನು ನಾರದನಿಗೆ ಕೊಡುವನು. ಬಳಿಕ ಪಾರ್ವತಿಯನ್ನು ನೋಡಿ) ಪ್ರಿಯೇ, ನಮಗಿನ್ನು ಬೇಗನೆ ವೈಕುಂಠ ಯಾತ್ರೆಯ ಸುಯೋಗವುಂಟು! ಅಲ್ಲವೇ ನಾರದಾ?

ನಾರದ.—ಹಾಗಿದ್ದರೆ ಇನ್ನೊಮ್ಮೆ ಬಂದು ಅರಿಕೆ ಮಾಡುವೆನು. (ವಂದಿಸಿ) ಹೋಗಿ ಬರುವೆನು-ಅಪ್ಪಣೆಯಾಗಲಿ.

(ಶಿವನು ತಲೆಯನಾಡಿಸುವನು.)

ನಾರದ:—ಜಯ ಶಂಕರ-ನಾರಾಯಣ! (ಹೋಗುವನು)

---

## ದೃಶ ೬—ಗಗನ ಬೀದಿ

ನಾರದ (ಕೈಯಲ್ಲಿ ಪತ್ರದೊಂದಿಗೆ ಪ್ರವೇಶಿಸಿ):—ಜಯ ನಾರಾಯಣ! ಹರಿ ನಾರಾಯಣ! ಎಲೈ ತಂಬೂರಿಯೆ! ಆಹಾಹಾ! ಬ್ರಹ್ಮದೇವನು ಬರೆದಿತ್ತ ಈ ಪತ್ರಕ್ಕೆ ಪರಮಾತ್ಮ ಪರಮೇಶ್ವರರು ಎಷ್ಟು ಸುಲಭವಾಗಿ ಒಪ್ಪಿಗೆಯಿತ್ತರು! ವಿಷ್ಣುವಂತೂ ನನ್ನ ಯೋಜನೆಗೆ ಅನುಕೂಲವಾಗಿಯೇ ಇರುವನು. ಅರ್ಥಾತ್ ಅವನ ಕೋರಿಕೆಯಂತೆಯೇ ನಾನು ಈ ಲೀಲೆಯನ್ನು ನಡೆಯಿಸುರುವದಾಗಿದೆ. ಶಿವನಂತೂ ಮೊದಲೇ ಯಮಾಂತಕನೆಂದು ಪ್ರಸಿದ್ಧನು! ಆದುದರಿಂದಲೇ ಅವನೂ ಸುಲಭವಾಗಿ ಈ ಪತ್ರಾಭಿಪ್ರಾಯಕ್ಕೆ ಒಪ್ಪಿ ತ್ರಿಶೂಲದ ಮುದ್ರೆಯನ್ನು ಹಾಕಿರುವನು. ತ್ರಿಮೂರ್ತಿಗಳೆಂದರೆ ಅಭೇದಭಾವವುಳ್ಳ ಮೂರು ಮೂರ್ತಿಗಳೇ ಸರಿ! ನಾರಾಯಣ! ಇನ್ನು ಉಳಿದಿರುವದು ಕೇವಲ ಅಲ್ಪ ಕಾರ್ಯ. ಈ ಪತ್ರವನ್ನು ಬ್ರಹ್ಮನಿಗೆ ಕೊಟ್ಟು, ಕುಬೇರನಿಗೆ ಧರ್ಮಾಧಿಕಾರಪಟ್ಟ ಪತ್ರವನ್ನು ಹೊರಡಿಸಬೇಕು ಬ್ರಹ್ಮನಿಂದ ಅಧಿಕಾರಪತ್ರವನ್ನು ಬ್ರಹ್ಮ ಶಕ್ತಿ-ಧರ್ಮ ಮುದ್ರೆಗಳನ್ನೂ ಪಡೆದುಕೊಂಡು ಹೋಗಿ ಕುಬೇರನಿಗೆ ಕೊಟ್ಟು, ಅವನನ್ನು ಉಬ್ಬಿಸಿ ಜೈಮಿನೀ ನಗರಕ್ಕೆ ಕಳುಹಿಸಿಬಿಟ್ಟೆನೆಂದರೆ ತೀರಿತು! ನಡೆ, ತಂಬೂರಿಯೆ! ( [ಇತಿ] ಹೋಗುವನು)

---

## ದೃಶ್ಯ ೭—ವನಮಾರ್ಗ

(ಕುಬೇರನು ತಿರುಗಾಡಿಕೊಂಡು, ದಾರಿ ನೋಡುತ್ತ ಬರುವನು. ನಾರದನ ಸಂಗೀತವು ತೆರೆಯಲ್ಲಿ)

ಕುಬೇರ (ಗಡಿಬಿಡಿಯಿಂದ ನೋಡಿ) -ಆಹಾ! ಇಲ್ಲಿಲ್ಲಿಯೋ ನಾರದ ಸಂಗೀತವು ಕೇಳಿಸಿತಲ್ಲಾ! ಬಂದರೇನು ಮಹಾನುಭಾವರು? (ಅತ್ತಿತ್ತ ನೋಡಿ) ಎಲ್ಲಿ? ನನಗೆ ಶುಭವಾರ್ತೆಯನ್ನು ತಂದರೆ? ಗಾಯನವನ್ನೂ ತಂಬೂರಿಯನ್ನೂ ಆಲಿಸಿ) ಓಹೋ! ಇಲ್ಲ ಇಲ್ಲ! ನಾರದರಿನ್ನೂ ಬರಲಿಲ್ಲ. ಅದೇನೋ ನನ್ನ ಚಿತ್ತಭ್ರಮೆ. ಅವರು ನನಗೆ ಯಮಪಟ್ಟವನ್ನು ಕೊಡಿಸುವೆನೆಂದು ಹೇಳಿದುದರಿಂದ ನಾನು ಅದನ್ನೇ ಯೋಚಿಸಿಕೊಂಡು ಈ ವನದಲ್ಲಿ ಮಲಗಿರುವೆನೋ ಇಲ್ಲವೋ?—ಇದೇ ನನಗೆ ನಾರದ ಭ್ರಾಂತಿಯನ್ನು ಹುಟ್ಟಿಸಿರಬೇಕು. ಅಲ್ಲದೆ ಅವರು ಅಂತಹ ಘನಕಾರ್ಯವನ್ನು ಪೂರಯಿಸಿಕೊಂಡು ಇಷ್ಟು ಬೇಗನೆ ಹೇಗೆ ಬಂದಾರು? ಅಂತೂ ಬರುವರು! ಬೇಗದಲ್ಲೇ ಬರುವರು ಶುಭವಾರ್ತೆಯನ್ನು ತರುವರು!

ನಾರದ (ತೆರೆಯಲ್ಲಿ) [ಇಳ]:—ಜಯ ನಾರಾಯಣ!

ಕುಬೇರ:—ಆರೆರೆ! ನಾರದರು! ನಾರದರು!! ನಾರದರು!!! ಸತ್ಯವಾಗಿಯೂ ನಾರದರು ಬಂದೇ ಬಿಟ್ಟರು!

ನಾರದ (ಪ್ರವೇಶಿಸುತ್ತ):--ಅಯ್ಯೋ! ತಂಬೂರಿಯೆ! ಮತ್ಸರಗ್ರಸ್ತನೂ ಮಹತ್ವಾಕಾಂಕ್ಷಿಯೂ ಆದ ಈ ಕುಬೇರನು ಯಮಪಟ್ಟದ ಧ್ಯಾನದಿಂದ ಭ್ರಾಂತನಾಗಿ ಭ್ರಮಿಸುವನಲ್ಲಾ! ನಾರಾಯಣ!

ಕುಬೇರ:—ನಾರದರೆ! ನಾರದರೆ! ನಮಸ್ಕಾರ! ನಿಮ್ಮನ್ನೇ ಕುರಿತು ಯೋಚಿಸುತ್ತಿದ್ದೆನು!

ನಾರದ:—ಆಹಾಹಾ! ಬಹಳ-ಬಹಳ-ಬಹಳ ಸಂತೋಷ!

ಕುಬೇರ:-ಸ್ವಾಮಿ! ಅದು ಆ . ಘನ. ಕಾರ್ಯವು ಹಣ್ಣೋ-ಕಾಯೊ?

ನಾರದ:—ಕುಬೇರಾ, ಈ ನಾರದನು ಕೈಕೊಂಡ ಕಾರ್ಯವು ಕಾಯಾಗಿಯೇ ಇರುವುದುಂಟೆ? ಹಣ್ಣೇ ಹಣ್ಣು! ಒಳ್ಳೇ ಹಣ್ಣು! ಪರಿಪಕ್ವವಾದ ಹಣ್ಣು! ಇಗೋ, ಹಿಡಿ! (ಒಂದು ಪತ್ರವನ್ನು ನೀಡುವನು.)

ಕುಬೇರ (ದೊಡ್ಡ ಕಣ್ಣುಗಳಿಂದ ನೋಡುತ್ತ):-ಇದೇನಿದು? ಆಹಾ! ಜಗತ್ಪಿತಾಮಹನ ಹಂಸ- ಪದ್ಮ ಮುದ್ರೆಗಳೂ, ವಿಷ್ಣು ಮಹಾಮಹಿಮನ ಶಂಖ ಚಕ್ರ ಮುದ್ರೆಗಳೂ-ಪರಮೇಶ್ವರನ ತ್ರಿಶೂಲ ರೇಖೆಯೂ ಈ ದಿವ್ಯ ಪತ್ರದಲ್ಲಿ ಕಂಗೊಳಿಸುವನಲ್ಲ!

ನಾರದ.—ಕುಬೇರಾ, ಇದು ಶ್ರೀ ತ್ರಿಮೂರ್ತಿಗಳ ಒಮ್ಮನಸ್ಸಿನ ಒಪ್ಪಿಗೆಯಿಂದ ನಿನಗೆ ದೊರೆತಿರುವ ಜೈಮಿನಿಯ ಧರ್ಮಸಿಂಹಾಸನದ ಸ್ವಾಮ್ಯಾಧಿಕಾರ ಪತ್ರ!

ಕುಬೇರ.—ಆಹಾ! (ವಿನಯದಿಂದ ಆ ಅಧಿಕಾರಪತ್ರವನ್ನು ಪಡೆದು, ಕಣ್ಣಿಗೆ ಒತ್ತಿ, ಶಿರಸ್ಸಿನಲ್ಲಿ ಧರಿಸಿ, ಮತ್ತೆ ಕೈಯಲ್ಲಿ ಹಿಡಿದುಕೊಳ್ಳುವನು.)

ನಾರದ. - ಮತ್ತಿಗೋ! ಇದು ಜೈಮಿನಿಯ ಧರ್ಮಾಸನದಲ್ಲಿ ಅಧಿಷ್ಠಿತನಾಗಲು ನಿನಗೆ ಅಗತ್ಯವಾಗಿರುವ ಬ್ರಹ್ಮಶಕ್ತಿ! (ಬಿಂದು ಕಮಲನಾಳವನ್ನು ಕೊಡುವನು)

ಕುಬೇರ:—ಆಹಾ! (ಅದನ್ನೂ ಮೊದಲಿನಂತೆಯೇ ಸ್ವೀಕರಿಸುವನು)

ನಾರದ.—ಇನ್ನಿಗೋ ಇದು, ಜೈಮಿನೀ ನಗರದಲ್ಲಿ ನಿನ್ನ ಶಾಸನವು ಸ್ಥಾಪಿತವಾಗಲು ಬೇಕಾದ ಧರ್ಮಮುದ್ರೆಯು-ಉಂಗುರ.

ಕುಬೇರ:—ಆಹಾ! (ಕೈ ಬೆರಳನ್ನು ತೋರಿಸಲು, ನಾರದನು ಉಂಗುರವನ್ನು ಅವನ ಬೆರಳಿಗೆ ಹಾಕುವನು.)

ನಾರದ:—ಇನ್ನು ಕುಬೇರಾ! ನಾನು ನಿನಗೆ ಕೊಟ್ಟ ವಚನಬಂಧದಿಂದ ಮುಕ್ತನಾದೆನಷ್ಟೆ?

ಕುಬೇರ:-ಆಹಾ! ಮಹಾತ್ಮರೆ! ನಿಮ್ಮ ಅದ್ಭುತವಾದ ಯುಕ್ತಿ-ಶಕ್ತಿಗಳಿಗೆ ಅಸಾಧ್ಯವಾದ ಕಾರ್ಯವುಂಟೆ? ಆಹಾ! ಎಷ್ಟೊಂದು ಅವಲೀಲೆಯಾಗಿ ನೆರವೇರಿಸಿದಿರಿ?

ನಾರದ.-ಕುಬೇರಾ! ನಿನ್ನ ಈ ಹೊಗಳಿಕೆಗಳೆಲ್ಲಾ ಆ ಶ್ರೀಮನ್ನಾರಾಯಣಮೂರ್ತಿಗೇ ಸಮರ್ಪಣವಾಗಲಿ! ಅಯ್ಯಾ! ಧನಾಧೀಶನೆ! ಇನ್ನು ಮುಂದಣ ನಿನ್ನ ಕರ್ತವ್ಯವೇನೆಂಬುದನ್ನು ಬಲ್ಲೆಯಷ್ಟೆ? ಈ ಅಧಿಕಾರ ಪತ್ರ, ಬ್ರಹ್ಮಶಕ್ತಿ, ಧರ್ಮ ಮುದ್ರೆ ಇವುಗಳ ಸಹಾಯದಿಂದ ಯಮನನ್ನು ಪಟ್ಟದಿಂದ ತಳ್ಳಿ, ಧರ್ಮಸಿಂಹಾಸನವನ್ನು ಅಲಂಕರಿಸು. ಯಮನು ಸತ್ಯ

ಪಾನನಿಗೆ ಕೊಟ್ಟ ಆಯುಷ್ಯವನ್ನು ರದ್ದುಪಡಿಸುವ ವಿಷಯವನ್ನು ನಾನು ತ್ರಿಮೂರ್ತಿಗಳ ಕೂಡ ಪ್ರಸ್ತಾಪಿಸಿದೆನು. ಅವರೂ ಅದಕ್ಕೆ ಅನುಮೋದಿಸಿರುವುದು ಈ ಪತ್ರದಲ್ಲಿದೆಯಷ್ಟೆ? ಆದರೆ ಕುಬೇರಾ! ಪುಣ್ಯವಂತನಾದ ಸತ್ಯಪಾನನನ್ನು ಯಮಲೋಕಕ್ಕೆ ತರಿಸಿಕೊಳ್ಳಬೇಡ. ಚಿತ್ರಗುಪ್ತರ ದಾಖಲೆಯಲ್ಲಿರುವ ಅವನ ಪುಣ್ಯದ ತೂಕವನ್ನು ನೋಡಿಕೊಂಡು, ಪುನರ್ಜನ್ಮಕ್ಕೆ ಭಾಗಿಯೋ ಅಲ್ಲವೋ ಎಂಬುದನ್ನು ನಿಷ್ಕರ್ಷೆ ಮಾಡಿ, ಅವಕ್ಕೆ ತಕ್ಕ ಮೇಲಧಿಕಾರಿಗಳೆಡೆಗೆ ಬಿನ್ನವತ್ತಳೆಯನ್ನು ಕಳುಹಿಸು. ನನಗೆ ತೋರುತ್ತೆ, ಅವನು ವೈಕುಂಠಕ್ಕೇ ಹೋಗಲು ಅರ್ಹನಾಗಿರುವನೆಂದು.

ಕುಬೇರ.—ಅದನ್ನೆಲ್ಲಾ ನಾನು ನೋಡಿಕೊಳ್ಳುತ್ತೇನೆ–ನಾರದರೆ!

ನಾರದ:—ಸರಿ, ಹಾಗಾದರೆ! ಧರ್ಮಕ್ಕೆ ಲೋಪವಾಗದಂತೆ ಶೈಮಿನೀ ನಗರವನ್ನು ಆಳು. ಯಮನ ಮೇಲೆ ಬೇಕಾದ ಹಾಗೆ ಹಗೆ ತೀರಿಸಿಕೋ. ಇನ್ನು ನಾನು ಹೋಗುವೆನು. ಆಜ್ಞೆಯೆ?

ಕುಬೇರ.—ತಡೆಯಿರಿ, ಸ್ವಾಮಿ. ಇಷ್ಟೆಲ್ಲ ಕಾರ್ಯವನ್ನು ಸಾಧಿಸಿದ ತಾವು ನನ್ನೊಂದಿಗೆ ಶೈಮಿನೀ ನಗರಕ್ಕೆ ಬಂದು,—

ನಾರದ:—ಅಯ್ಯಯ್ಯೋ! ನಾರಾಯಣ! ಅದಾಗದಪ್ಪ! ಕುಬೇರಾ, ಈ ಸಂದರ್ಭದಲ್ಲಿ ನಿನ್ನೊಂದಿಗೆ ನಾನಿದ್ದರೆ, ಇದೆಲ್ಲಾ ಮಾಡಿದುದು ಈ ಜಗಳಗಂಟಿ ನಾರದನೇ ಎಂದು ಲೋಕಕ್ಕೆಲ್ಲಾ ಗೊತ್ತಾಗಿ, ಎಲ್ಲರೂ ನನ್ನನ್ನು ಹೀಯಾಳಿಸುವಂತಾದೀತು! ಆದುದರಿಂದ ಈಗ ನನ್ನನ್ನು ಬಿಡು ಇನ್ನೊಮ್ಮೆ ತಕ್ಕ ಸಮಯದಲ್ಲಿ ನಾನು ನಿನ್ನನ್ನು ಕಾಣುವೆನು.

ಕುಬೇರ:—ಹಾಗಾದರೆ ತಮ್ಮ ಚಿತ್ತ ಸ್ವಾಮಿ! ನಮಸ್ಕಾರ.

ನಾರದ:—ನಾರಾಯಣ! ನಾರಾಯಣ! (ಹೋಗುವನು)

ಕುಬೇರ:—ಆಹಾ! ಈ ನಾರದರು ಒಳ್ಳೇ ತಂತ್ರಶಾಲಿಗಳೇ ಸರಿ. (ಕೈಯಲ್ಲಿರುವ ವಸ್ತುಗಳನ್ನು ನೋಡಿ) ನನ್ನ ಅಧಿಕಾರಕ್ಕೆ ಇನ್ನು ಸಾಟಿಯುಂಟೆ? ಧನಾಧಿಕಾರದೊಂದಿಗೆ ಧರ್ಮಾಧಿಕಾರವೂ ಬಂತು ನನಗೆ ಈ ಅಧಿಕಾರ ಮುದ್ರೆಗಳಿಂದ ಆಹಾ!–ಈಗಲೇ ನನ್ನ ದೇಹದಲ್ಲಿ ಅಪೂರ್ವವಾದ ನೂತನ ಶಕ್ತಿಯು ಸಂಚಾರವಾಯಿತಲ್ಲ! ಆಹಾ! ತ್ರಿಮೂರ್ತಿಗಳ ಮುದ್ರಾ ಮಹಿಮೆಯೆ! ಯಮನ ದರ್ಪವನ್ನು ಮುರಿಯಬೇಕೆಂದು ಎಷ್ಟೋ ಕಾಲ

ದಿಂದ ಯೋಚಿಸುತ್ತಿದ್ದ ನನಗೆ, ಈಗ ಬಂತು ಸರಿಯಾದ ಸಮಯ! ಭಲೆ! ಭಲೆ! ನನ್ನ ಮಹತ್ತಾದ ಯಕ್ಷ ಸೈನ್ಯವನ್ನು ಹೊರಡಿಸಿಕೊಂಡು, ಮುತ್ತು ವೆನು ಜೈಮಿನೀ ನಗರವನ್ನು! ಜೈ ಕುಬೇರ ಧರ್ಮರಾಜಾ! ಜೈ [೩೫]

(ಹೋಗುವನು)

---

ದೃಶ್ಯ ೮—ಬೀದಿ.

(ಯಕ್ಷ ಸೇನಾಸಮೂಹದೊಂದಿಗೆ ಕುಬೇರನು ಖಡ್ಗಪಾಣಿಯಾಗಿ ಕುದುರೆಯ ಮೇಲೆ ಕುಳಿತುಕೊಂಡು ಹೋಗುವನು [೩೬] ಯಕ್ಷ ಪರಿವಾರವು "ಜೈ ಕುಬೇರ ಧರ್ಮರಾಜಾ! ಜೈ!" ಎಂದು ಜಯಜಯಕಾರ ಮಾಡುವದು.)

ಕುಬೇರ —ಅದಿಗೋ! ಜೈಮಿನೀ ನಗರವು ಸಮೀಪಿಸಿತು! ಯಮನ ಅಧೋಗತಿಯ ಕ್ಷಣವು ಸಮೀಪವಾಯಿತು! ಆಹಾ! ನಡೆಯಿರಿ. ಯಕ್ಷ ವೀರರೆ, ನಡೆಯಿರಿ!

ಯಕ್ಷರು —ಜೈ ಕುಬೇರ ಧರ್ಮರಾಜಾ! ಜೈ! (ಹೋಗುವರು.)

(ಕೆಲವು ಜನ ಯಮದೂತರು ಗಾಬರಿಯಿಂದ ಪ್ರವೇಶಿಸುವರು.)

ಒಬ್ಬ.—"ಆದರೆ! ನಮ್ಮ ಜೈಮಿನೀ ನಗರವನ್ನು ಸಮೀಪಿಸುತ್ತಿರುವ ಈ ಪ್ರಚಂಡವಾದ ಸೈನ್ಯವು ಯಾರದು?

ಇನ್ನೊಬ್ಬ:—ಓಹೊ! ಯಕ್ಷರು! ಯಕ್ಷರು! ಯಕ್ಷರ ಸೇನೆ!

ಮತ್ತೊಬ್ಬ:—ಅದೊದೊ! ಯಕ್ಷರಾಜನಾದ ಕುಬೇರ! ಕುಬೇರನು ನಮ್ಮ ಜೈಮಿನಿಯನ್ನು ಮುತ್ತಲಿಕ್ಕೆ ಬರುವನೇ?

ಮಗದೊಬ್ಬ:—ಹೌದೌದು! ಜೈ! ಕುಬೇರ ಧರ್ಮರಾಜಾ!-ಎಂಬ ಜಯಘೋಷಕ್ಕೆ ಅರ್ಥವೇನು?

ಬೇರೊಬ್ಬ:—ಅನರ್ಥವೇ ಸರಿ!

ಮೇಣೊಬ್ಬ:—ನಡೆಯಿರಿ, ನಡೆಯಿರಿ! ಧರ್ಮಪ್ರಭುಗಳೊಡನೆ ಅರಿಕೆ ಮಾಡೋಣ.

---

ದೃಶ್ಯ ೯—ಯಮನ ಓಲಗ

(ಯಮನು ಧರ್ಮಸಿಂಹಾಸನಸ್ಥನಾಗಿರುವನು ಚಿತ್ರಗುಪ್ತರು ಗ್ರಂಥಗಳನ್ನಿಟ್ಟುಕೊಂಡು ಕುಳಿತಿರುವರು. ಸೇವಕರು ಚಾಮರ ಬೀಸುವರು. ಕೆಲವರು ನಿಂತಿರುವರು.)

ವೈತಾಳಿಕರು:—[೩೭] ಧರ್ಮಪ್ರಭೋ, ಯಮಧರ್ಮ ದಂಡೇಶ್ವರರಿಗೆ ಜಯವಾಗಲಿ!

ಯಮ:—ಚಿತ್ರಗುಪ್ತರೆ, ಇಂದು ಪಾಪಿಗಳ ವಿಚಾರಣೆಯೇನೂ ಇಲ್ಲವೇನು?

ಚಿತ್ರ:—ಇಲ್ಲ ಪ್ರಭು!

ಯಮ.—ಇದೇನು? ಇತ್ತೀಚಿಗೆ ನಮಗೆ ವಿರಾಮಕಾಲದ ಸುಯೋಗವು ಪ್ರಾಪ್ತವಾದಂತಿದೆ!

ಚಿತ್ರ —ಧರ್ಮಪ್ರಭೋ! ಭೂಮಿಯಲ್ಲಿ ಸತ್ಯವಾನ್ ಚಕ್ರವರ್ತಿಯ ಧರ್ಮ ಪರಿಪಾಲನವು ನಡೆಯುತ್ತಿರುವದರಿಂದ ಪುಣ್ಯಕರ್ಮಿಗಳೇ ಹೆಚ್ಚಾಗಿ ಅಂತಹರೆಲ್ಲಾ ವಿಷ್ಣುದೂತರ ಮೂಲಕ ವೈಕುಂಠಕ್ಕೆ ಸಾಗಿಸಲ್ಪಟ್ಟಿರುವರಷ್ಟೆ? ಆದುದರಿಂದ ನಮ್ಮ ಕೆಲಸವು ಸ್ವಲ್ಪ ಕಡಿಮೆಯಾಗಿದೆ

ಯಮ:—ಸಂತೋಷ. ಈಗ ನಮ್ಮ ಸೆರೆಯಲ್ಲಿರುವ ಭದ್ರಬಾಹುವಿನ ಪಾಪವು ಇನ್ನೆಷ್ಟಿದೆ?

ಚಿತ್ರ —(ಪುಸ್ತಕದ ಹಾಳೆಗಳನ್ನು ಬಿಡಿಸಿ ಎಣಿಸಿ) ಪ್ರಭುವೆ! ಸ್ತ್ರೀಹತ್ಯೆ-ಬ್ರಹ್ಮಹತ್ಯಾದಿ ಮಹಾ ಪಾಪಗಳೆಲ್ಲಾ ಸುಟ್ಟು ಹೋದುವು ಇನ್ನು ಇಪ್ಪತ್ತೈದು ಬಗೆಯ ಚಿಕ್ಕ ಚಿಕ್ಕ ಪಾಪಗಳು ಮಾತ್ರವೇ ಇವೆ. ಇವುಗಳಾದರೂ ಇವನ ಪತ್ನಿಯ ಪಾತಿವ್ರತ್ಯದ ತಪಸ್ಸಿನ ಪ್ರಭಾವದಿಂದ, ಬೇಗವಲ್ಲಿ ಭಸ್ಮವಾಗಿ, ಅವನು ವೈಕುಂಠಕ್ಕೆ ತೋಗಲು ತಕ್ಕವನಾಗುವನು.)

ಯಮ:—ಎಲೈ ದೂತರೆ! ಭೈರವಿಯೆಂಬ ಆ ಮಾನವಿ ಇನ್ನೂ ತನ್ನ ಸಾಹಸದ ತಪಸ್ಸಿನಲ್ಲೆ ಇರುವಳೆ?

ದೂತ:—ಹೌದು ಮಹಾಪ್ರಭೂ!

ಯಮ:—ಇರಲಿ. ಆ ವಿಲಕ್ಷಣ ಪತಿವ್ರತಾರತ್ನವು ತನ್ನ ಆಯುಃಪರ್ಯಂತವೂ ತನ್ನ ಸಾಹಸವನ್ನು ಬಿಡಲಾರಳು. ಅವಳ ಈ ಬಗೆಯ

ಹೊಸ ರೀತಿಯ ತೀವ್ರ ತಪಃಸಾಧನ ಚರ್ಯೆಯಿಂದ ಅವಳ ಪತಿ ಪಾಪ ನಿರ್ಮುಕ್ತನಾಗಿ ವೈಕುಂಠಕ್ಕೆ ಸೇರಿದ ಮೇಲೆ, ಶ್ರೀ ಮಹಾವಿಷ್ಣು ಮೊದಲಾದವರೇ ಅವಳಿಗೆ ತಕ್ಕ ಫಲವನ್ನೀಯಬೇಕು ದೂತರೇ! ಅವಳು ನಮ್ಮ ಸಂಯಮಿನೀ ನಗರದೊಳಗೆ ಮಾತ್ರ ಪ್ರವೇಶ ಮಾಡದಿರಲಿ!

ದೂತ — ಅಪ್ಪಣೆ ಮಹಾಪ್ರಭೂ!

ಕೆಲವು ದೂತರು (ಓಡಿ ಬಂದು).— ಪ್ರಭೋ! ಅನರ್ಥ! ಅನರ್ಥ! ಕುಬೇರನು ಪ್ರಚಂಡವಾದ ಯಕ್ಷ ಸೈನ್ಯದೊಂದಿಗೆ ಅತಿಕ್ರಮ ಪ್ರವೇಶ ಮಾಡಿ ಬರುತ್ತಿರುವನು!

(ತೆರೆಯಲ್ಲಿ "ಜೈ ಕುಬೇರ ಧರ್ಮರಾಜಾ!" ಎಂದು ಅನೇಕರ ಜಯ ಘೋಷ)

ಯಮ:— ಯಾರಾರು? ಧನಮತ್ತನಾದ ಕುಬೇರನೇ?

(ಕುಬೇರನು ದರ್ಪದಿಂದ ಖಡ್ಗಪಾಣಿಯಾಗಿ ಬಂದು ನಿಲ್ಲುವನು. ಯಕ್ಷಸೈನಿಕರು "ಜೈ ಕುಬೇರ ಧರ್ಮರಾಜಾ!" ಎಂದು ಘೋಷಣ ಮಾಡಿ ಸಭೆಯ ಸುತ್ತಲೂ ನಿಲ್ಲುವರು. ಚಿತ್ರಗುಪ್ತಾದಿಗಳು ಕೂಡಾ ಆಶ್ಚರ್ಯದಿಂದ ನಿಲ್ಲುವರು.)

ಕುಬೇರ (ದರ್ಪದೃಷ್ಟಿಯಿಂದ ಯಮನನ್ನು ನೋಡಿ):— ಕುಬೇರನೇ! ಹೌದು! ಧನಮತ್ತನಾದ ಕುಬೇರನೇ! (ಧರ್ಮಾಸನದ ಬಳಿಗೆ ಹೋಗಿ) ಎಲೈ ಯಮ! ನೋಡು! ಕುಬೇರ ಧರ್ಮರಾಜನನ್ನು ನೋಡು! ಆಹಾ! ಧರ್ಮದ್ರೋಹಿಯೆ! ನಿನ್ನ ಸ್ವೇಚ್ಛಾಚರಣೆಗೆ ಇಂದು ತಕ್ಕ ಪ್ರಾಯಶ್ಚಿತ್ತವು ದೊರೆಯಿತು! (ಅಧಿಕಾರಪತ್ರವನ್ನು ತೋರಿಸಿ) ತ್ರಿಮೂರ್ತಿಗಳ ಈ ಆಜ್ಞಾಪತ್ರವನ್ನು ನೋಡು! ಇಳಿ ಇನ್ನು ಧರ್ಮಾಸನದಿಂದ! ಇದಿಗೋ—ಈ ಬ್ರಹ್ಮಶಕ್ತಿ ನಿನ್ನನ್ನು ಪದಚ್ಯುತನನ್ನಾಗಿ ಮಾಡಲಿ! (ಕಮಲನಾಳದಿಂದ ಸಿಂಹಾಸನವನ್ನು ಮುಟ್ಟುವನು)

ಯಮ (ಕೂಡಲೆ ಸಿಂಹಾಸನದಿಂದೆದ್ದು).— ಆಹಾ! ಆಶ್ಚರ್ಯ! ನನ್ನ ಶಕ್ತಿ ಒಮ್ಮೆಲೆ ಲೋಪವಾಗಿ ಹೋಯಿತಲ್ಲ! (ಸ್ತಬ್ಧತೆಯಿಂದ ಕೆಳಗಿಳಿದು, ಕುಬೇರನ ಕೈಯಲ್ಲಿರುವ ಪತ್ರವನ್ನು ನೋಡಿ—ಕುಬೇರನು ತೋರಿಸುತ್ತಿದ್ದಂತೆಯೇ ಓದಿ) ಆಹಾ! ಅದ್ಭುತ ನ್ಯಾಯವಿದು! ನಾನು

ಮಾಡಿರುವ ಧರ್ಮಗಳೆಲ್ಲಾ ಅನ್ಯಾಯವಾಗಿ ರೂಪಿಸಲ್ಪಟ್ಟಿರುವವಲ್ಲಾ! ಏನಾಶ್ಚರ್ಯವಿದು!

(ಕುಬೇರನು ಸಿಂಹಾಸನವೇರಿ ಕುಳಿತುಕೊಳ್ಳುವನು. ಅವನ ಪರಿವಾರವು ಜಯಘೋಷ ಮಾಡುವದು.)

ಯಮ-ಆಗಲಿ! ಪರಮಾತ್ಮನ ಚಿತ್ತ! ಎಲೈ ಚಿತ್ರಗುಪ್ತರೆ! ನನ್ನ ಪ್ರಿಯ ದೂತರೆ! ಇಂದಿಗೆ ಮುಗಿಯಿತು ನನ್ನ ಶೈಮಿನಿಯ ಅಧಿಕಾರ! ಪರಮಾತ್ಮನ ಆಜ್ಞೆ!-ಇದು ನನಗೆ ಶಿರಸಾವಮಾನ್ಯವು! ನಾನು ಈಗ ಭೂಲೋಕಕ್ಕೆ ಪತನನಾಗುವೆನು (ಚಿತ್ರಗುಪ್ತಾದಿಗಳು ಸ್ತಬ್ಧರಾಗಿ ನಿಂತಿರುವರು.) ದೇವ-ದೇವ ಮಹಾದೇವರ ಆಜ್ಞಾಪ್ರಕಾರ ನೀವೆಲ್ಲರೂ ನನ್ನನ್ನು ಸೇವಿಸಿದಂತೆಯೆ. ಇನ್ನು ಮೇಲೆ ಈ ಕುಬೇರ ಧರ್ಮರಾಜನನ್ನು ಸೇವಿಸಿಕೊಂಡಿರಿ!) ಸಿಂಹಾಸನಕ್ಕೆ ಕೈ ಮುಗಿದು [ಇಳಿ] ಮೃತ್ಯುದಂಡ ಕಾಲಪಾಶವನ್ನು ಸಿಂಹಾಸನದ ಅಕ್ಕ ಪಕ್ಕಗಳಲ್ಲಿಟ್ಟು, ತಲೆ ತಗ್ಗಿಸಿಕೊಂಡು ಹೋಗುವನು. ಚಿತ್ರಗುಪ್ತಾದಿಗಳೆಲ್ಲರೂ ವಿಷಣ್ಣವದನರಾಗಿ ಕೈಜೋಡಿಸುವರು.)

ಕುಬೇರ:—ಆಹಾ! ಈ ಯಮನು ನನ್ನೊಡನೆ [illegible] ನೇನೋ ಎಂದುಕೊಂಡಿದ್ದೆನು ಇವನಾದರೋ ಏನಿ[illegible] ಯಂತೆ ಹೊರಟು ಹೋದನಲ್ಲ! ಆಶ್ಚರ್ಯ!

ಚಿತ್ರ:-ಧನೇಶ್ವರಾ! ಧರ್ಮಾತ್ಮನಾದ ಯಮಧರ್ಮ[illegible] ತ್ರಿಮೂರ್ತಿಗಳ ಆಜ್ಞಾಪತ್ರಕ್ಕೆ ತಲೆ ತಗ್ಗಿಸಿಕೊಂಡು ಹೋದನೇ ಹೊ[illegible]ಸು ಸೋಡಿತನದಿಂದಲ್ಲ. ವಿನಯವೇ ವೀರತ್ವದ ಲಕ್ಷಣವೆಂದು ನಮ್ಮ ಮತ!

ಕುಬೇರ:—ಓಹೋ! ಒಳ್ಳೆಯ ಲಕ್ಷಣವಿದು. ಭಲೆ! ಅದಿರಲಿ! ಚಿತ್ರಗುಪ್ತಾದಿಗಳೆ! ಇನ್ನು ಮೇಲೆ ನೀವೆಲ್ಲರೂ ನನ್ನ ಆಜ್ಞೆಗೆ ಬದ್ಧರಾಗಬೇಕೆಂದ ನಾನೇನೂ ಹೇಳಬೇಕಾಗಿಲ್ಲವಷ್ಟೆ?

ಚಿತ್ರ:—ದೇವಾಜ್ಞೆ ನಮಗೆಲ್ಲರಿಗೂ ಶಿರಸಾವಮಾನ್ಯವಾಗಿರುವದು

ಎಲ್ಲರೂ:—ಜೈ! ಕುಬೇರ ಧರ್ಮರಾಜರಿಗೆ! ಜೈ!

ಘೋರ (ಅವಸರದಿಂದ ಪ್ರವೇಶಿಸಿ) ಪ್ರಭೋ! ಭೂಲೋಕದ ಭೈರವಿಯೆಂಬ ಮಾನವಿ, ನಮ್ಮನ್ನು ಮೀರಿ ಒಳಗೆ ಪ್ರವೇಶ ಮಾಡುತ್ತಿರವಳು. ಅವಳನ್ನು ತಡೆಯಲು ನಮ್ಮ ಶಕ್ತಿ ಲೋಪವಾಗಿ ಹೋಯಿತು ಹೊಸ ಶಕ್ತಿಯನ್ನು ದಯಪಾಲಿಸಬೇಕು!

ಕುಬೇರ:—ಏನೇನು? ಮಾನವಿ ಶೈಮಿನೀನಗರದೊಳಗೆ ಪ್ರವೇಶ ಮಾಡುವಳೇ? ಯಾರವಳು-ಚಿತ್ರಗುಪ್ತರೆ?

ಚಿತ್ರಗುಪ್ತ:—ಪ್ರಭು! ಅವಳೊಬ್ಬಳು ಪ್ರಖರ ಪತಿವ್ರತೆ! ಅವಳ ಪತಿ ಕಾಲಗತಿಯನ್ನು ಹೊಂದಿ ನಮ್ಮ ಸೆರೆಯಲ್ಲಿರುವನು. ಅವನನ್ನು ಅನು ಸರಿಸಿಕೊಂಡು ಅವಳು ಬರುತ್ತಿರುವಳು.

ಕುಬೇರ.—ಓಹೋ! ಇದೆಲ್ಲಾ ಆ ಸಾವಿತ್ರಿಗೆ ಯಮನು ಕೊಟ್ಟ ವರ ಗಳ ಪರಿಣಾಮ!

ಚಿತ್ರ:—ಅದೇನೋ ನಾವರಿಯೆವು. ಆಕೆಯ ಕರ್ಮಾಯುಷ್ಯವು ಇನ್ನೂ ಮುಗಿಯದಿರುವದರಿಂದ ಅವಳನ್ನು ಒಳಗೆ ಬಿಡದಂತೆ ಯಮ ಧರ್ಮರಾಜರು ಶಾಸನ ಮಾಡಿದ್ದರು. ಅವಳನ್ನು ಅನೇಕ ಬಾರಿ ಭೂಮಿಗೆ ತಳ್ಳಿದ್ದರೂ, ಮತ್ತೆ ಮತ್ತೆ ಇಲ್ಲಿಗೆ ಇರುತ್ತಲೇ ಇರುವಳು. ಅದಕ್ಕಾಗಿ ಧರ್ಮ ದೇವನು ದೂತರಿಗೆ ಆಗಾಗ ಕೊಡುವ ಶಕ್ತಿಗಳು ಈಗ ಲೋಪವಾಗಿ ಹೋ[illegible]ರುವ, ಇನ್ನು ಆ ಸತೀಮಣಿಯನ್ನು ತಡೆಯಲು ದೂತರಿಗೆ ತಾವು ಹೊಸ ಶಕ್ತಿಯನ್ನು ಕೊಡಬೇಕು.

ಕುಬೇರ—ಏನನ್ಯಾಯ! ಎಂತಹ ಅನರ್ಥ! ಇಲ್ಲಿಗೆ ಮಾನವರು ಬರುವ[illegible]? ಇವೆಲ್ಲಾ ಆ ಯಮಘಾತುಕನಿಂದಲೇ ಹುಟ್ಟಿದ ತಂಟೆ ಗಳು. [illegible]

(ಇಬ್ಬರು ದೂತರು ಘೋರರೂಪರೂ ಮುಂಬರುವರು) ಇದೋ! ತೆಗೆದು ಕೊಳ್ಳಿರಿ. ನಿಮಗೆ ನಾನು ಹೊಸ ಶಕ್ತಿಯನ್ನು ಕೊಡುವೆನು. (ಕೊಡುವನು ದೂತರು ಪಡೆಯುವರು.) ನೀವು ಆ ಮಾನವಿಯನ್ನು ಹಿಡಿದು ಇನ್ನೆಂದಿಗೂ ಇತ್ತಬಾರದ ಹಾಗೆ, ಭೂಮಿಯಲ್ಲಿ ಯಾವುದಾದರೊಂದು ಬಾವಿಯೊಳಗೆ ಅವಳನ್ನು ಚೆಲ್ಲಿ ಮೇಲೆ ಏನಾದರೂ ಮುಚ್ಚಿ ಬಂದು ಬಿಡಿರಿ! ಅವಳು ಆಯುಃಪರಿಯಂತ ಅಲ್ಲೇ ಬಿದ್ದಿರಲಿ ತಪಸ್ವಿನಿಯ ಹಾಗೆ!

ಚಿತ್ರ:—ಧರ್ಮರಕ್ಷಕರೆ! ನನ್ನದೊಂದು ಅರಿಕೆಯುಂಟು. ಆ ಸತೀ ಮಣಿ ಈ ಶೈಮಿನಿಯೊಳಗೆ ಪ್ರವೇಶ ಮಾಡದಂತೆ ತಡೆಯುವದಷ್ಟೇ ನಮ್ಮ ಧರ್ಮವಲ್ಲದೆ ಮರ್ತ್ಯಲೋಕದಲ್ಲಿ ಅವಳ ಸ್ವಾತಂತ್ರ್ಯಕ್ಕೆ ನಾವು ಭಂಗ ತರ ಕೂಡದು. ಅದು ದೋಷವಾಗಿ ಪರಿಣಮಿಸೀತು!

ಕುಬೇರ:—ಹೇಗಮ? ಅವಳು ಪದೇಪದೇ ಇಲ್ಲಿಗೆ ಬರುತ್ತಿರುವಾ ದರೆ, ನಾವು ಎಷ್ಟು ಬಾರಿ ಅವಳನ್ನು ತಡೆಯಬಹುದು?

ಚಿತ್ರ:—ಪ್ರಭೋ ಕೇವಲ ಆ ಮಾನವಿ ಮಾತ್ರಳು ಸೈಮಿನೀಗಮ ನದ ಸಾಹಸಕಾರ್ಯದಲ್ಲಿ ಇನ್ನೂ ತಾಳ್ಮೆಯನ್ನು ಬಿಡದಿರಲು, ದೇವತೆ ಗಳಾದ ನಾವು ಇಷ್ಟು ಬೇಗನೆ ತಾಳ್ಮೆಗೆಡಬಹುದೆ? ಧರ್ಮಕ್ಕೆ ಕೈಹಚ್ಚ ಬಹುದೆ?

ಕುಬೇರ:—ಅಯ್ಯಾ! ಚಿತ್ರಗುಪ್ತರೆ! ಆ ಧರ್ಮಮೂಢ ಯಮ ನೊಂದಿಗೆ ಇದ್ದು ಇದ್ದು ನಿಮ್ಮ ಮುದಿ ಬುದ್ಧಿಯೂ ಮಂಕಿಡಿದಂತೆ ಕಾಣುತ್ತದೆ. ಆ ಮಾನವಿಯನ್ನು ಹೀಗೆಯೇ ಬರಗೊಟ್ಟರೆ ಯಮಲೋಕದ ಮಾರ್ಗವು ಮರ್ತ್ಯರೆಲ್ಲರಿಗೂ ತಿಳಿದು ಹೋದೀತು!

ಚಿತ್ರ:—ತಿಳಿದೀತು-ಪ್ರಭೋ! ಅಂತಹ ಪುಣ್ಯಾತ್ಮರಿಗೆ ಮಾತ್ರವೇ ತಿಳಿದೀತು! ಅಂತಹ ಪುಣ್ಯಾತ್ಮರೊಡನೆ-ಅಂತಹ ಧರ್ಮಾತ್ಮರೊಡನೆ ಧರ್ಮ ದಿಂದ ಹೋರಾಡಿಯೇ ಧರ್ಮಪರೀಕ್ಷೆ ಮಾಡಬೇಕು, ಜಯವನ್ನು ಪಡೆಯ ಬೇಕು.

ಕುಬೇರ:-ಪಡೆದವನಲ್ಲ ಯಮ! ಆಹಾ! ಬರೀ ಬಾಯಿ ವೇದಾಂತವಿದು! ಇವಳನ್ನು ಹೀಗೆಯೇ ಬಿಟ್ಟರೆ, ನಾಳೆ ಇನ್ನೊಬ್ಬಳು; ನಾಡದು ಮತ್ತೊಬ್ಬಳು, ಹೀಗೆಲ್ಲಾ ಇಷ್ಟಾನುಸಾರವಾಗಿ ಮರ್ತ್ಯರು ಇಲ್ಲಿಗೆ ಬರಲಾರಂಭಿಸುವರು. ಆಗ ಸೈಮಿನಿಯ ಗತಿಯೇನಾದೀತು-ಬಲ್ಲಿರಾ?

ಚಿತ್ರ:-ಹಾಗೆಲ್ಲಾ ಬಂದು ಬಿಡಲು ಸೈಮಿನಿಯ ಮಾರ್ಗವು ಅಷ್ಟೇನೂ ಸುಲಭವಲ್ಲ. ಪ್ರಭೋ! ಏನೋ ನನಗೆ ತಿಳಿದ ಧರ್ಮವನ್ನು ಅರಿಕೆ ಮಾಡಿ ದೆನು. ಮುಖ್ಯವೇನೆಂದರೆ, ಧರ್ಮಕ್ಕೆ ತಿಲಮಾತ್ರ ಲೋಪವುಂಟಾದರೂ, ಈ ಧರ್ಮಸಿಂಹಾಸನವು ಸಹಿಸುವಂತಹದಲ್ಲ. ಇನ್ನು ಧರ್ಮಪ್ರಭುಗಳ ಚಿತ್ತ!

ಕುಬೇರ:—ಹಾಗೇ ಹೇಳಿರಿ. ನಾನೆಲ್ಲಿ ಬಲ್ಲೆನು. ಎಲೈ ದೂತರೆ? ಆ ಭೈರವಿಯ ವಿಷಯದಲ್ಲಿ ನಾನು ಹೇಳಿದಂತೆಯೇ ನೆರವೇರಿಸಿ ಬಿಡಿರಿ!

ಘೋರ-ದೂತರು:—ಅಪ್ಪಣೆ! (ಹೋಗುವರು)

ಕುಬೇರ:-ಚಿತ್ರಗುಪ್ತರೆ! ಇನ್ನೊಂದು ಮುಖ್ಯ ವಿಷಯವುಂಟು. ಯಮನು ಮಾಡಿದ ದೋಷದಿಂದಲೇ ಇಷ್ಟೆಲ್ಲಾ ಅನರ್ಥವಾಯಿತು. ಆದುದ

ರಿಂದ ಯಮನು ಸತ್ಯವಾನನಿಗೆ ಕೊಟ್ಟ ಆಯುಷ್ಯವನ್ನು ಇಷ್ಟಕ್ಕೆ ರದ್ದುಗೊಳಿಸಿ, ಬ್ರಹ್ಮ ಲಿಖಿತದ ಮರ್ಯಾದೆಯನ್ನು ಕಾಯಲಾಗದು. ಎಲ್ಲಿ, ಪುಸ್ತಕವನ್ನು ನೋಡಿ ಸತ್ಯವಾನನು ಮುಕ್ತಿಗೆ ಅರ್ಹನೋ ಅಲ್ಲವೋ ಹೇಳೋಣವಾಗಲಿ.

ಚಿತ್ರ.–(ಸಖೇದಾಶ್ಚರ್ಯದಿಂದ ತನ್ನಲ್ಲಿ)ಏನೇನಾಗುವದೋ ಆಗಲಿ! ನನಗೇನು? (ಪುಸ್ತಕ ಬಿಡಿಸಿ ಲೆಕ್ಕಹಾಕಿ ನೋಡಿ) ಪ್ರಭು! ಸತ್ಯವಾನನು ಸಂಪೂರ್ಣನಾಗಿ ನಿರ್ಲಿಪ್ತ ಕರ್ಮಿಷ್ಠನು. ಅಂತೆಯೆ ನೂರಕ್ಕೆ ನೂರೂ ಪುಣ್ಯವಂತನು. ಆದುದರಿಂದ ಎಲ್ಲಾ ಪುಣ್ಯ ಲೋಕಗಳಿಗೂ ಮೇಲಾದ ಮುಕ್ತಿಲೋಕ-ಶ್ರೀವೈಕುಂಠಕ್ಕೇ ಹೋಗಲು ಅರ್ಹನಾಗಿರುವನು.

ಕುಬೇರ.–ಸರಿ. ಹಾಗಾದರೆ ವೈಕುಂಠದ ಸರ್ವಾಧಿಕಾರಿಯ ಸನ್ನಿಧಿಗೆ ಬಿನ್ನವತ್ತಳೆಯನ್ನು ಕಳುಹಿಸೋಣವಾಗಲಿ ಹಾಗುಸತ್ಯವಾನನಿಗೆ, ಯಮನು ಕೊಟ್ಟ ಆಯುಷ್ಯವು ರದ್ದಾಗಿ ಹೋಗಲಿ!

ಚಿತ್ರ —ಆಜ್ಞೆ (ಪುಸ್ತಕ ನೋಡಿ) ನಮ್ಮ ಬಿನ್ನವತ್ತಳೆ ಶ್ರೀ ವೈಕುಂಠಕ್ಕೆ ಮುಟ್ಟಿ, ಪತ್ನಿಸೂತರು ಭೂಮಿಯನ್ನು ಮುಟ್ಟುವ ತನಕವೇ ಇನ್ನು ಸತ್ಯವಾನನಿಗೆ ಆಯುಷ್ಯ. ಆ ಮೇಲೆ ರದ್ದು! (ಗೀಟು ಎಳೆಯುವನು. ಬಳಿಕ ಬಿನ್ನವತ್ತಳೆಯನ್ನು ಬರೆದು ಮುಗಿಸಿ) ಪ್ರಭು! ಇದಿಗೋ! ವೈಕುಂಠಕ್ಕೆ ಬಿನ್ನವತ್ತಳೆ! (ಕೊಡುವನು)

ಕುಬೇರ (ಓದಿನೋಡಿ)—ಸರಿಯಾಗಿದೆ! (ಅದಕ್ಕೆ ಮುದ್ರೆಯನ್ನು ಒತ್ತಿ ದೂತನ ಕೈಗೆ ಕೊಟ್ಟು) ಶ್ರೀ ವೈಕುಂಠದ ಸರ್ವಾಧಿಕಾರಿಗೆ ಮುಟ್ಟಿಸು.

ದೂತ.—ಶಿರಸಾಜ್ಞೆ! (ಹೋಗುವನು)

---

ದೃಶ್ಯ ೧೦— ಕಾಡುದಾರಿ.

(ಬಳಿಯಲ್ಲಿ ಒಂದು ದೊಡ್ಡ ಬಂಡೆಗಲ್ಲು. ಯಮನು ಕಿರೀಟಹೀನನಾಗಿ ಚಿಂತೆಯಿಂದ ಪ್ರವೇಶಿಸುವನು)

ಯಮ:—ಆಹಾ! ಇದೇನು ಕಾಲವೈಪರೀತ್ಯ! ಮಹಾಪತಿವ್ರತೆಯಾದ ಸತೀ ಸಾವಿತ್ರಿಗೆ ನಾನು ಕೊಟ್ಟ ವರಗಳು ಧರ್ಮಯುಕ್ತವಾಗಿರಲು, ಅವೆಲ್ಲಾ ಅಧರ್ಮಾಂಶವಾಗಿ ಸಾರ್ದಟ್ಟು, ನನ್ನ ಮೇಲೆಯೇ ತಿರು

ಗಿದುವಲ್ಲ! ಅತ್ಯಾಶ್ಚರ್ಯ! ಆದರೆ!—ಇದೆಲ್ಲಾ ಆ ಮಹಾ ಮಾಯಾವಿ ನಾರದನ ಲೀಲಾಜಾಲವಾಗಿರಬೇಕು! ಅಂದು ದೇವೇಂದ್ರನ ಸಭೆಯಲ್ಲಿ ಅವನು ಕಲಹವನ್ನು ಹುಟ್ಟಿಸಿದಾಗಲೇ ನನಗೆ ಅನುಮಾನವಾಯಿತು!—ಯಾರಿಗೋ ಕೇಡುಗಾಲ ಬಂತೆಂದು! ಆದರೆ ನಾರದನ ಕಾರ್ಯದಲ್ಲಿ ಕಡೆಗೆ ಧರ್ಮಕ್ಕೇ ಜಯವಾಗುವಂತಿರಲು, ಈಗ ಹೀಗೇಕಾಯಿತು? ಆ ತ್ರಿಮೂರ್ತಿಗಳಿಗೂ ನಾನು ಹೇಗೆ ಅಪರಾಧಿಯಾಗಿ ತೋರಿದೆನು?. .

ನಾರದ (ತೆರೆಯಲ್ಲಿ) ನಾರಾಯಣ! ನಾರಾಯಣ!

ಯಮ.—ಅಬ್ಬ! ನಾರದನು ನೆನೆಸಿದಾಗಲೇ ಸಿದ್ಧನು!

ನಾರದ:—(ಪ್ರವೇಶಿಸಿ)[೩೮]ನಾರಾಯಣ!ಜಯ ನಾರಾಯಣ!

ಯಮ:-ನಮಸ್ಕಾರ, ನಾರದಾ, ಕಲಹ ಪ್ರಿಯನಾದ ನಿನಗೆ ನಮಸ್ಕಾರ ಮಾಡಲಿಕ್ಕೂ ಮನಸ್ಸು ಬೆದರುತ್ತಿರುವದು.

ನಾರದ:—ಬೆದರಬೇಡ ಯಮಧರ್ಮಾ! ನನಗೆ ನಮಸ್ಕಾರವನ್ನೂ ಮಾಡಬೇಡ, ಎಲ್ಲವೂ ಆ ಪರಮಾತ್ಮನಿಗೇ ಸಮರ್ಪಣ!

ಯಮ:—ಪರಮಾತ್ಮನಿಗೇ ಸಮರ್ಪಣ! ಎಂದು ಹೇಳುತ್ತ, ಒಳಗೊಳಗೆ ಎಂತೆಂತಹ ಮಾಯಾಜಾಲವನ್ನು ಹೆಣೆಯುವಿಯೊ? ಜೇಡನ ಜಾಲದಲ್ಲಿ ಸಿಕ್ಕಿದ ಪತಂಗದ ಹಾಗೆ ನಿನ್ನ ಮಾಯಾಜಾಲದಲ್ಲಿ ಸಿಕ್ಕಿಬಿದ್ದೆನಲ್ಲ ನಾನು? ನನ್ನನ್ನು ಅಧೋಗತಿಗೆ ತಂದೆಯಲ್ಲ ನಾರದಾ?

ನಾರದ:—ನಿಜವೇ! ಆದರೆ—

ಯಮ:-ಇನ್ನೇನಿದೆ-ಆದರೆ? ನನಗೆ ಇನ್ನೂ ಅಧಃಪಾತವಾಗಬೇಕು?

ನಾರದ:—ತಾಳು, ವೈವಸ್ವತಾ! ಅಧೋಗತಿಗಿಳಿಯುವದು. ಊರ್ಧ್ವಗತಿಗೆ ಏರಲಿಕ್ಕಾಗಿಯೇ ಎಂದು ನಂಬು. ಮುಂದೋಡುವವನು ಎರಡು ಹೆಜ್ಜೆ ಹಿಂದಿಟ್ಟು ಪ್ರಾರಂಭಿಸುವ ಹಾಗೆ, ಹಿಂದೆ ಬಿದ್ದ ನಿನ್ನ ಧರ್ಮವೇ ಮುಂದೆದ್ದು ಜಯಿಸುವುದೆಂದು ದೃಢವಾಗಿ ನಂಬು.

ಯಮ:—ಹೇಗೆ ನಂಬಲಿ? ಈಗೆಲ್ಲಾ ವಿರೋಧವಾಗಿದೆಯಲ್ಲಾ?

ನಾರದ:—ವಿರೋಧವಾದರೂ ಇದೀಗ ಮಧ್ಯಕಾಲವೆಂದು ತಿಳಿ!

ಯಮ:—ಅದು ಹೇಗೆ? ತ್ರಿಮೂರ್ತಿಗಳೇ ಒಪ್ಪಿ ನನ್ನದು ಅಧರ್ಮವೆಂದು ತೀರ್ಪುಕೊಟ್ಟು ಅಂತ್ಯ ಪಡಿಸಿರುವಾಗ, ಅದು ಮಧ್ಯಮ ಹೇಗೆ?

ಅವರಲ್ಲಿ ಬ್ರಹ್ಮ ಮಹೇಶ್ವರರ ಮಾತು ಹಾಗಿರಲಿ ಅವರು ಅಷ್ಟು ಪೆಂಡ್ತ ವಿಚಾರದೀವರಿಂದು ನಾನು ಹೇಳಲಾರೆನು ಬ್ರಹ್ಮ-ಶಿವರು ಹಿರಣ್ಯ-ಕಶಿಪು-ಭಸ್ಮಾಸುರಾದಿಗಳಿಗೆ ಕೇಳಿದ ವರಗಳನ್ನು ಕೊಟ್ಟು ಸಿಕ್ಕಿಬಿದ್ದವರು. ನಾನು ಹಾಗೆಲ್ಲಾ ರಾಕ್ಷಸಾದಿಗಳಿಗೆ ವರಗಳನ್ನು ಕೊಟ್ಟೆನೆ? ಸಾತ್ವಿಕಳೂ ಸಾಧ್ವೀಮಣಿಯೂ ಆದ ಸಾವಿತ್ರಿಗೆ ಅವಳು ಕೇಳಿದ ವರಗಳನ್ನು ಕೊಟ್ಟೆರು ವೆನು ಈ ನ್ಯಾಯಕ್ಕೆ ದೇವಾಧಿದೇವನಾದ ಶ್ರೀಮನ್ನಾರಾಯಣ ಮೂರ್ತಿಯೂ ವಿರೋಧ ಮಾದನಲ್ಲಾ ಎಂಬುದೇ ನನಗೆ ಮಿಗಿಲಾದ ಆಶ್ಚರ್ಯವನ್ನುಂಟುಮಾಡಿದೆ।

ನಾರದ—ನಿಜ ಯಮಧರ್ಮ! ಆ ಕಪಟ ನಾಟಕ ಸೂತ್ರಧಾರಿಯ ಲೀಲೆಯು ಅತ್ಯಾಶ್ಚರ್ಯ [illegible], ದೇವ ಸಹೋದರಾದಿ ಸರ್ವರೂ ಆತನ ಕೈಗೊಂಬೆಗಳು [illegible] ಅನುಸಾರವಾಗಿ ದೇವತೆಗಳನ್ನಾದರೂ ಆಡಿಸ [illegible] ಸಾಕ್ಷಿಯಾಗಿದೆ! ಪ್ರೈವಸ್ವತಾ! ಸರ್ವೋತ್ತಮನಾದ [illegible]! ಆ ಲೀಲಾ ವಿನೋದ ಲೋಲನು ನನ್ನ [illegible] ಆಟವನ್ನು ಆಡಿಸಿರುತ್ತಾನೆ.

ಯಮ [illegible] ವೇ ಸರಿ!

ನಾರದ—[illegible] ರ್ಮ! ಪರಾತ್ಪರನ ಉದ್ದೇಶವನ್ನು ಕೇಳು. ಅವನು ಮನ [illegible] ಕಾರ್ಯಸಾಧನೆಗಾಗಿ ನ್ಯಾಯವನ್ನು ಅನ್ಯಾಯವನ್ನಾಗಿ ಚಿತ್ರಿಸಬಲ್ಲನು, ಆದರೆ–ನೋಡು! ಪತಿವ್ರತಾ ಮಹಾತ್ಮ್ಯವನ್ನು ಲೋಕದಲ್ಲಿ ಉಜ್ವಲವಾಗಿ ಬೆಳಿಸಲಿಕ್ಕೂ ಸತೀ ಸಾವಿತ್ರಿಗೆ ನೀನು ಕೊಟ್ಟ ವರಗಳು ಧರ್ಮಸಮ್ಮತವಾದುವುಗಳೆಂದು ಸಿದ್ಧಾಂತ ಗೊಳಿಸಲಿಕ್ಕೂ ಪರಮಾತ್ಮನು ಹೂಡಿದ ಆಟವಿದು!

ಯಮ: – ಒಳ್ಳೆಯ ಆಟವಿದು!

ನಾರದ—ಇನ್ನು ಒಂದು ರಹಸ್ಯವುಂಟು ಬಹುಕಾಲದಿಂದ ನಿನ್ನ ಮೇಲೆ ವೈರ ಬುದ್ಧಿಯನ್ನು ತಾಳಿದ ಕುಬೇರನೂ ಇನ್ನು ಮೇಲೆ ಚನ್ನಾಗಿ ಬುದ್ಧಿಯನ್ನು ಕಲಿಯುವನು ನೋಡು!

ಯಮ.—ಸತ್ಯವೇನಿದು?

**ನಾರದ:—ಸತ್ಯ ವೆಂಬುದಕ್ಕೆ ಈ ಬಂಡೆಗಳ್ಲೇ ದೃಷ್ಟಾಂತವು!**

ಯಮ:—ಏನೇನು? (ನೋಡುವನು)

ಭೈರವಿ (ಬಂಡೆಗಲ್ಲಿನಡಿಯಲ್ಲಿ ಭಾವಿಯಲ್ಲಿ)-ಅಯ್ಯೋ ಧರ್ಮದೇವಾ! ಪತಿಪ್ರಾಣಿಯಾದ ನನ್ನನ್ನು ತಡೆದು ಈ ರೀತಿ ಹಿಂಸೆ ಗೊಳಿಸುವದು ತರವೆ? ಧರ್ಮವೆ? ನಿರ್ವಾಹವಿಲ್ಲ! ನಾನಿಲ್ಲಿಯೇ ಪತಿಯ ಪಾದವನ್ನು ಜಪಿಸುವೆನು. 'ಪತೀ-ಭದ್ರಬಾಹು! ಪತೀ-ಭದ್ರಬಾಹು .....!)

ಯಮ:—ಇದೇನಿದು? ಆ ಭೈರವಿಯ ಸ್ವರ ವಾಗಿದೆ!

ನಾರದ:—ಹೊಂ, ಹೌದು. ಕುಬೇರನು ತನ್ನ ಮೂಲವನ್ನು ತಾನೇ ಕತ್ತರಿಸಿ ಕೊಂಡನು. ಭಲೆ! ಯಮಧರ್ಮ! ಭೈರವಿ ಇಲ್ಲಿಯೇ ತಪಸ್ಸು ಮಾಡುತಿರಲಿ! ಈ ಸಾಧ್ವಿಮಣಿಯನ್ನು ಸಂಕಟಕ್ಕೀಡು ಮಾಡಿದ ಆ ಶಿಷ್ಯ ಗಳು ಮುಹೂರ್ತಗಳಾಗಿ ಹೋಗಿ ಕುಬೇರನನ್ನು ಪತನ ಗ [illegible] ಬಿಡು ವುವೇ [illegible] ಪಾತಿವ್ರತ್ಯದ ಪ್ರಭಾವವೇನು ಸಾಮಾನ್ಯವೇ? ನಡೆ [illegible] ಧರ್ಮ! ಸತೀಸಾವಿತ್ರಿಯ ಮುಂದಿರಕ್ಕೆ ತೆರಳೋಣ. ಅಲ್ಲಿಯೂ ವಿಪರೀತ ಸಂಭವವು ಸಂಭವಿಸಿ[illegible]

ಯಮ:—ಎಲ್ಲಾ ನಿಮ್ಮಗಳ ಆಟ!

ನಾರದ:—ನಾರಾಯಣ! ನಾರಾಯಣ! (ಹೋಗುವರು)

---

ದೃಶ್ಯ-೧೧ ಸಾವಿತ್ರಿಯ ಅರಮನೆ

(ಸತ್ಯವಾನನು ನಿಶ್ಚೇತನನಾಗಿ ಹಾಸಿಗೆಯಲ್ಲಿ ಬಿದ್ದಿರುವನು. ಸಾವಿತ್ರಿ ದುಃಖಿಸುತ್ತ ಪತಿಯ ಕಳೇವರದ ಬದಿಯಲ್ಲಿ ಕುಳಿತಿರುವಳು. ಇಬ್ಬರು ಕುಮಾರರೂ ದುಃಖಮುದ್ರೆಯಲ್ಲಿ ಕುಳಿತಿರುವರು.)

ಸಾವಿತ್ರಿ (ಪತಿಯ ತಲೆಯನ್ನು ತನ್ನ ತೊಡೆಯಲ್ಲಿರಿಸಿ):—ಹಾ! ಪರ ಮಾತ್ಮ! ಅಯ್ಯೋ ಇದೇನು ವಿಪರೀತ, ಅಕಸ್ಮಾತ್ತಾಗಿ ನನ್ನ ಪತಿ ಗತ ಪ್ರಾಣರಾಗಿ ಬಿದ್ದಿರುವರಲ್ಲ! ದೇವಾ! ಇವರಿಗೆ ಯಮಧರ್ಮದೇವನು ದೀರ್ಘಾಯುಷ್ಯವನ್ನು ಕರುಣಿಸಿರುವದು ಏನಾಯಿತು? ಹಾಯ್! ಹಾಯ್ ಧರ್ಮದೇವನ ವರವು ಸುಳ್ಳಾಯಿತೆ? [೩೯] ನಾನು ಯಾರಿಗಾದರೂ ಕೇಡು ಬಗೆದೆನೆ? ಏನೂ ತೋರುವದಿಲ್ಲವಲ್ಲಾ! ಯಾರಿಗೆ ಮೊರೆಯಿಡಲಿ? ಅಂಧ ಕಾರ! ಗಾಡಾಂಧಕಾರ! (ಮೂರ್ಛಿತಳಾಗುವಳು)

ನಾರದ.-(ಪ್ರವೇಶಿಸುತ್ತ) ನಾರಾಯಣ-ನಾರಾಯಣ! (ಯಮನೊಂದಿಗೆ ಪ್ರವೇಶಿಸುವನು ಕುಮಾರರು ಎದ್ದು ಕೈ ಮುಗಿದು ನಿಲ್ಲುವರು. ನಾರದನು. ಸಾವಿತ್ರಿಯು ಒಳಗೆ ಬಂದು)ಸಾಧ್ವೀಶಿರೋಮಣಿ! ಸಾವಿತ್ರಿ! ಏಳೇಳು ಶಾಂತಳಾಗು.

ಸಾವಿತ್ರಿ (ಎದ್ದು).—ಹಾ! ದೇವಮುನೀಂದ್ರರೇ! ಸ್ವಾಮಿ! ನೀವೇ ಗತಿ. (ನಾರದನ ಕಾಲಿಗೆ ಬೀಳುವಳು)

ನಾರದ.—ದೀರ್ಘ ಸುಮಂಗಲೀಭವ! ಸೌಭಾಗ್ಯವತೀ! ಪುತ್ರ-ಪೌತ್ರ ಸರ್ವ ಸೌಭಾಗ್ಯಾಭಿವೃದ್ಧಿರಸ್ತು!

ಸಾವಿತ್ರಿ.—ಆಹಾ! ಮಹಾತ್ಮರ ಅಮೃತ ವಾಣಿಯಿಂದ ಹೊರಟ ಆಶೀರ್ವಾದಕ್ಕೂ, ಇಲ್ಲಿ ಘಟಿಸಿರುವುದಕ್ಕೂ ವಿರೋಧವಾಗಿದೆ!

ನಾರದ.—ಇದನ್ನರಿತೇ ಬಂದಿರುವೆನು! ದೇವಿ! ದುಃಖಿತೆಯಾಗಬೇಡ! ಅಧೀರೆಯಾಗಬೇಡ!

ಸಾವಿತ್ರಿ (ಯಮನನ್ನು ನೋಡಿ):-ಆಹಾ! ಯಮಧರ್ಮನೇ! ಏನಿದು! ವೇಷ! ಧರ್ಮರಾಜನಿಗೆ ದೀನೆಯ ನಮಸ್ಕಾರವು! (ಕೈ ಮುಗಿದು) ಧರ್ಮಾಧೀಶ್ವರಾ! ಏಕೀ ದೀನವೇಷ? ನಿನ್ನ ಕಾಲಪಾಶವೆಲ್ಲಿ? ಮೃತ್ಯುದಂಡವೆಲ್ಲಿ? ಕಿರೀಟವೆಲ್ಲಿ? ನಾನು ಈಗಲೂ ಹಿಂಬಾಲಿಸುವೆನೆಂದು ತಿಳಿದು, ನನಗೆ ಗುರುತು ಹತ್ತದಂತೆ ಈ ಬಗೆಯ ವೇಷವನ್ನು ತಾಳಿ ಬಂದಿರುವೆಯಾ? ಅಯ್ಯಾ ನ್ಯಾಯಾಧೀಶ್ವರಾ! ನನಗೆ ಪತಿಭಿಕ್ಷೆಯನ್ನಿತ್ತು, ಮರಳಿ ತೆಗೆದುಕೊಳ್ಳಬಹುದೆ? ನಾನೇನು ಅಪರಾಧ ಮಾಡಿದೆನು?

ಯಮ.—ತಾಯಿ! ನಾನೂ ಏನೂ ಅರಿಯೆನು. ಪದಚ್ಯುತ ನಾನು ನಾನು ಈಗ ನಿನ್ನನ್ನೇ ಶರಣು ಹೊಕ್ಕಿರುವೆನು. ನಿನಗೆ ತಕ್ಕ ಸಮಾಧಾನವನ್ನು ಈ ನಾರದನೇ ಕೊಡಬಲ್ಲನು.

ನಾರದ.—ನಿಜ, ಸಾವಿತ್ರೀದೇವಿ! ಕೇಳು. ಅಂದು ಯಮಧರ್ಮನು ನಿನಗೆ ಕೊಟ್ಟಿರುವ ವರಗಳ ವಿಷಯವಾಗಿ ದೇವಲೋಕದಲ್ಲಿ ವಿವಾದವೆದ್ದು ಯಮನ ಮೇಲೆ ಅಪರಾಧವು ಹೇರಲ್ಪಟ್ಟಿತು. ಯಮಧರ್ಮನು ಈಗ ಅಧಿಕಾರದಿಂದ ಚ್ಯುತನಾಗಿ ಬಿದ್ದಿರುವನು. ಧರ್ಮಾಧಿಕಾರವೀಗ ಕುಬೇರನಿಗೆ ವಹಿಸಲ್ಪಟ್ಟಿದೆ. ಲೋಕಪಿತಾಮಹನಾದ ಬ್ರಹ್ಮನ ವಿಧಿಯ ಮರ್ಯಾದೆ

ಯನ್ನು ಕಾಪಾಡಲಿಕ್ಕಾಗಿ ನಿನ್ನ ಪತಿಯ ಆಯುರ್ದಾಯವು ರದ್ದಾಗಿ ಹೋಯಿತು.

ಸಾವಿತ್ರಿ.—"ಅಯ್ಯೋ! ಹೀಗಾಯಿತೆ? ಹಾಗಾದರೆ ನನ್ನ ಪತಿ ಈಗ ಕೈಮಿನಿಯಲ್ಲಿರುವನೆ?"

ನಾರದ:—ಇಲ್ಲ. ಸಾಧ್ವಿ ಕೈಮಿನಿಯಲ್ಲಿಲ್ಲ. ಮಹಾಪುಣ್ಯಶಾಲಿಯಾದ ನಿನ್ನ ಪತಿ ವಿಷ್ಣುದೂತರ ಮೂಲಕವಾಗಿ ವೈಕುಂಠಕ್ಕೆ ತೆರಳಿ ಅಲ್ಲಿ ಶೋಭಿಸುತ್ತಿದ್ದಾನೆ.

ಸಾವಿತ್ರಿ.—ಹಾ! ಕೈಮೀರಿ ಹೋಯಿತು! ಪತಿಯೊಂದಿಗೆ ವೈಕುಂಠಕ್ಕೆ ಹೋಗುವ ಪುಣ್ಯವನ್ನು ನಾನು ಗಳಿಸಲಿಲ್ಲವೆ? ಪಾಪಿಯುನಿಯಾದ ನನಗೆ ದೀರ್ಘಾಯುಷ್ಯವೆ? ಸ್ವಾಮಿ! ನೀವೇ ಶರಣು! ಪತಿಹೀನೆಯಾಗಿ ಹೇಗೆ ಬಾಳಲಿ? ನಾನೂ ವೈಕುಂಠಕ್ಕೆ ಹೋಗುವೆನು ಹೇಗೆ ಹೋಗಲಿ? ನಾರದ ಮುನೀಂದ್ರರೆ! ಬೇಡಿಕೊಳ್ಳುವೆನು! ನನಗೆ ಆ ಮಾರ್ಗವನ್ನು ನೀವೇ ತೋರಿಸಿಕೊಡಬೇಕು! (ನಾರದನ ಕಾಲಿಗೆ ಅಡ್ಡ ಬೀಳುವಳು.)

ನಾರದ:—ಸಾಧ್ವೀಶಿರೋಮಣಿ-ಸಾವಿತ್ರಿ! ಪರಮಪತಿವ್ರತೆಯಾದ ನಿನಗೆ ಅಸಾಧ್ಯವಾದ ಕಾರ್ಯವು ಯಾವುದೂ ಇಲ್ಲವೆಂದು ತಿಳಿ. ಅಂದು ಯಮಧರ್ಮನ ಕೈಯಿಂದ ಪತಿಯನ್ನು ಬಿಡಿಸಿಕೊಂಡು ಬಂದಂತೆಯೇ, ಇಂದುವೈಕುಂಠದಿಂದಲೂ ಬಿಡಿಸಿಕೊಂಡು ಬಂದು, ಈ ಭೂಲೋಕದಲ್ಲಿಯೇ ವೈಕುಂಠಸುಖವನ್ನು ಅನುಭವಿಸುವಿ!

ಸಾವಿತ್ರಿ:—ಸ್ವಾಮಿ! ನನ್ನ ಮನಸ್ಸು ವೈಕುಂಠವನ್ನೆ ಕುರಿತು ಹಾರುತ್ತಿದೆ ತಕ್ಕ ದಾರಿಕಾಣದೆ ತತ್ತಳಿಸುತ್ತಿದ್ದೇನೆ. ನನಗೆ ಬೇಗನೇ ಆ ದಿವ್ಯ ಮಾರ್ಗವನ್ನು ತೋರಿಸಿಕೊಡೋಣಾಗಬೇಕು.

ನಾರದ:—ದೇವಿ! ನೀನು ಪಾವನ ತರಂಗಿಣಿಯಾದ ಗಂಗಾನದಿಯ ಮಾರ್ಗವಾಗಿ ವೈಕುಂಠಕ್ಕೆ ಸುಲಭವಾಗಿ ತೆರಳಬಹುದು [೪೦] ಶ್ರೀಹರಿಯ ಸಿರಿಯಡಿಯ ನಖಾಗ್ರದಿಂದ ಹುಟ್ಟಿದ ಪವಿತ್ರವಾದ ಗಂಗಾಪ್ರವಾಹವು ಸ್ವರ್ಗ, ಮರ್ತ್ಯ, ಪಾತಾಳಗಳಲ್ಲಿಯೂ ಗಮನ ಮಾಡುತ್ತಿರುವನು: ಆ ಗಂಗಾದೇವಿಯ ಮಡಿಲಲ್ಲಿ ಮಲಗಿ ನೀನು ಹಾಯಾಗಿ ವೈಕುಂಠವನ್ನು ಸೇರಬಹುದು

ಸಾವಿತ್ರಿ—ಆಹಾ! ಧನ್ಯಳಾದೆನು. ಆ ಪರಮಾತ್ಮನ ದಿವ್ಯ ದರ್ಶನದ ಸುಯೋಗ! ಆಹಾ! ಮಂಗಳ ಮೂರ್ತಿ! ಪರಂಧಾಮ! ನನ್ನನ್ನು ದಿವ್ಯ ಸನ್ನಿಧಾನದಲ್ಲಿ ಸೇರಿಸಿಕೊ! ದೇವಾ!

ನಾರದ—ಆಹಾ! ಶ್ರೀ ಲಕ್ಷ್ಮೀನಾರಾಯಣರೇ ನಿನ್ನ ದರ್ಶನಕ್ಕಾಗಿ ದಾರೀಕಾಯುತ್ತಿದ್ದಾರೆ. ಹೇ ಮಹಾಭಾಗೆ! ನಿನ್ನ ಸೌಭಾಗ್ಯಕ್ಕೆ ಎಣೆಯೇ ಇಲ್ಲ

ಸಾವಿತ್ರಿ—ಎಲ್ಲಾ ಆತನಲೀಲೆ ಆ ಪರಾತ್ಪರನ ವಿಚಿತ್ರಲೀಲಾ ಜಾಲವನ್ನು ಪಾಮರಳಾದ ನಾನೇನು ತಿಳಿಯಬಲ್ಲೆನು! ದೇವಾ! ನಿನ್ನ ಕೋಟಿ ಲೀಲೆಗಳಿಗೆ ನಮಸ್ಕಾರವು! (ಯಮನಿಗೆ) ಧರ್ಮದೇವಾ! ನೀನು ನನ್ನ ಪೂಜಾಪ್ರಸಾದವನ್ನು, ನನ್ನ ಕುಮಾರರು ಮಾಡುವ ಪೂಜೋಪಚಾರಾದಿಗಳನ್ನು ಸ್ವೀಕರಿಸಿಕೊಂಡು, ನನ್ನ ಪುತ್ರರನ್ನೂ ಪತಿಯ ಕಳೇಬರವನ್ನೂ ಕಾಪಾಡಬೇಕೆಂದು ಬೇಡುವೆನು.

ಯಮ—ಹಾಗೆಯೆ ಆಗಲಿ, ತಾಯಿ! ನೀನು ನಿಶ್ಚಿಂತಳಾಗು!

ಸಾವಿತ್ರಿ—ಕುಮಾರರೆ! ನೀವೂ ನಿಶ್ಚಿಂತರಾಗಿರಿ! ಮಹಾತ್ಮರ ಅನುಗ್ರಹವ್ಯತ್ರ ನಮ್ಮ ಮೇಲೆ ಬಿದ್ದಿತು. ನಾನು ನಿಮ್ಮ ತಂದೆಯೊಂದಿಗೆ ಬರಲು ವೈಕುಂಠಕ್ಕೆ ಹೋಗುತ್ತೇನೆ. ನೀವು ಈ ಪ್ರತ್ಯಕ್ಷ ಧರ್ಮದೇವನನ್ನು ಪೂಜಿಸಿಕೊಂಡಿರಿ.

ಕುಮಾರರು—ಅಮ್ಮಾ! ನಾವು ನಿನ್ನ ಆಜ್ಞಾಧೀನರಾಗಿರುವೆವು.

ನಾರದ:—ಸಾವಿತ್ರಿ! ಇನ್ನು ಈ ಯಮಧರ್ಮನಿಗೂ ನಿನ್ನಿಂದಲೇ ಬೆಳಗಾಗ ಬೇಕಾಗಿದೆ

ಸಾವಿತ್ರಿ—ನನ್ನಿಂದೇನಾದೀತು? ಎಲ್ಲಾ ಆತನ ಆಟ!

ನಾರದ—ಆಹಾ! ನಿನ್ನ ಪಾತಿವ್ರತ್ಯಕ್ಕೆ ಜಯವಾಗಲಿ! (ಳಗ)ಇನ್ನು ಹೊರಡು! (ಸಾವಿತ್ರಿ ಮೊದಲಾದವರೆಲ್ಲರೂ ಹೊರಡುವರು)

— —

## ದೃಶ್ಯ-೧೨—ಕಾಡುದಾರಿ.

(ಮುಂದೆ ನಾರದನೂ, ಅವನ ಹಿಂದೆ ಯಮನೂ ಅವನ ಹಿಂದೆ ಸಾದವೇಷದಲ್ಲಿ ಸಾವಿತ್ರಿಯೂ ಕುಮಾರರೂ ಪ್ರವೇಶಿಸುವರು.)

ನಾರದ:—[೪೨]ಆಹಾ! ಸಾಧ್ವೀಶಿರೋಮಣಿ! ಸಾವಿತ್ರಿ! ಅಗೋ ನೋಡು! ಗಂಗಾ ಪ್ರವಾಹವು ಸಮೀಪಿಸಿತು. ಭಾಗೀರಥಿಯ ಮಂಜುಳ ನಿನಾದವು ಕಿವಿಗಿಂಪಾಗಿ ಕೇಳಿಸುತ್ತಿದೆ.

ಸಾವಿತ್ರಿ:—ಆಹಾ! ಗಂಭೀರ ವಾಹಿನಿಯಾದ ಗಂಗಾ ತರಂಗಿಣಿ ನನ್ನನ್ನು ಪ್ರೇಮಾದರದಿಂದ ಕರೆಯುತ್ತಿರುವಳು.

ನಾರದ:—ಹೌದು ಹೌದು. [೪೩] (ಹೋಗುವನು ಅವನ ಹಿಂದೆ ಎಲ್ಲರೂ-ಯಮನು ತಲೆದೂಗುತ್ತಾ-ಹೋಗುವರು.)

---

ದೃಶ್ಯ ೧೩—ಗಂಗಾ ತೀರ

(ನಾರದನೂ ಸಾವಿತ್ರಿಯೂ ಕುಮಾರರೂ ಯಮನೂ ಬರುವರು)

ನಾರದಾದಿ ಎಲ್ಲರೂ:—ಪುಣ್ಯಸಲಿಲೆಯಾದ ಗಂಗಾ ನದಿಗೆ ಜಯ ವಾಗಲಿ!

ಸಾವಿತ್ರಿ:—(ನಾರದನಿಗೆ ಅಡ್ಡ ಬಿದ್ದು) ತ್ರಿಲೋಕ ಸಂಚಾರಿಗಳೇ! ತ್ರಿಲೋಕ ಗಾಮಿನೀ ಪಾವನೆಯಾದ ಗಂಗಾದೇವಿಯೊಂದಿಗೆ ಹೋಗಲು ಅಪ್ಪಣೆ ಕೊಡೋಣ ವಾಗಲಿ!

ನಾರದ:—(ಹರಸುತ್ತ) ಸಾಧ್ವೀ! ನಿನಗೆ ಜಯ ವಾಗಲಿ!

ಸಾವಿತ್ರಿ:—(ಯಮನಿಗೆ ಅಡ್ಡ ಬಿದ್ದು) ಧರ್ಮದೇವಾ! ಹೋಗಿ ಬರುವೆನು!

ಯಮ:—ತಾಯಿ! ನಿನಗೆ ಸರ್ವ ಮಂಗಳವಾಗಲಿ!

ಕುಮಾರರು:-(ಸಾವಿತ್ರಿಗೆ ಅಡ್ಡ ಬಿದ್ದು)ಅಮ್ಮಾ ಹರಸೋಣವಾಗಲಿ!

ಸಾವಿತ್ರಿ:—ಮಕ್ಕಳೇ! ಆಯುಷ್ಮಂತರಾಗಿರಿ. (ಅವರ ತಲೆಯನ್ನು ಹಿಡಿದೆಬ್ಬಿಸಿ ಗಂಗಾ ನದಿಯ ಕಡೆಗೆ ತಿರುಗಿ) ಹೇ! ವಾರೀರೂಪಿಣಿಯಾದ ಮಹಾದೇವಿಯೇ! [೪೪]ಹೇ! ಮಹಾವಾಹಿನಿ! ಮರ್ತ್ಯಳಾದ ನನ್ನನ್ನು ವೈಕುಂಠಕ್ಕೆ ಕೊಂಡೊಯ್ಯುವ ಶಕ್ತಿ ನಿನಗಲ್ಲದೆ ಇನ್ನಾರಿಗಿದೆ.? ತಾಯಿ! ವಿಷ್ಣುಕುಮಾರಿ! ಜೈಭಾಗೀರಥಿ! ನೀನೇಶರಣು! ನನ್ನನ್ನು ಪತಿಸಾನ್ನಿಧ್ಯದಲ್ಲಿ ಸೇರಿಸು ಜೈಗಂಗಾಭವಾನಿ! (ಧುಮುಕುವಳು.)

ನಾರದ-ಯಮ:—"ಜೈಗಂಗಾಭವಾನಿ!"

ಗಂಗಾದೇವಿ:—(ಪ್ರತ್ಯಕ್ಷಳಾಗಿ ಸಾವಿತ್ರಿಯನ್ನು ಆಲಂಗಿಸಿ) ಬಾ ಮಗು ಸಾವಿತ್ರಿ ಮಹಾಭಾಗೆ! ಪುಣ್ಯಾಂಗನೆ! ನಿನ್ನ ದಿವ್ಯಸ್ಪರ್ಶದಿಂದ ಪುಣ್ಯ ವಾಹಿನಿ ಎಂಬ ಹೆಸರು ನನಗಿಂದು ಸಾರ್ಥಕವಾಯಿತು. ನಾನು ಧನ್ಯ ಳಾದೆನು ಬಾ ಮಗಳೆ! ನಿನ್ನನ್ನು ಸುಖವಾಗಿ ವೈಕುಂಠಕ್ಕೆ ಕರೆದೊಯ್ಯುವೆನು

(ಆಲಂಗಿಸಿಕೊಂಡು ಹೋಗುವರು. ಮಾಯ)

ನಾರದ.—ಯಮಧರ್ಮ! ಇನ್ನು ಚಿಂತಿಸ ಬೇಡ, ಪರಮಾತ್ಮನ ಕೋರಿಕೆ ಈಡೇರಿತು ನಿನ್ನ ಗ್ರಹಣವು ಮುಕ್ತಾಯವಾಗಲಿಕ್ಕಾಯಿತು. ನೀನು ಶುಭಸಂದೇಶವನ್ನು ನಿರೀಕ್ಷಿಸುತ್ತ ಸಾವಿತ್ರಿಯ ಮಂದಿರದಲ್ಲಿಯೇ ಇರು. ನಾನೀಗ ಹೋಗಿ ಬ್ರಹ್ಮ ರುದ್ರಾದಿಗಳಿಗೆಲ್ಲಾ ಸಾವಿತ್ರಿ ವೈಕುಂಠಕ್ಕೆ ಪ್ರಯಾಣ ಬೆಳೆಸಿದ ಸಂಗತಿಯನ್ನು ತಿಳಿಸುತ್ತೇನೆ. ಲಕ್ಷ್ಮಿ-ಸರಸ್ವತಿ-ಪಾರ್ವತಿಯರ [illegible]ಂಗನದಿಂದ ಸಾವಿತ್ರಿ ಪರಮ ಪುನೀತೆ ಯಾಗಲಿ.

[illegible] — ಸಂತೋಷ. ಬಹುಸಂತೋಷ. ನಾರದರೆ! ಹೋಗಿಬನ್ನಿರಿ. (ವಂ[illegible])

[illegible]—ಕುಮಾರರೆ! ನೀವು ನಿಮ್ಮ [illegible]ನನೀ ಜನಕರ [illegible]ಣ್ಯಾ ಗಮನ[illegible] ನಿರೀಕ್ಷಿಸಿ ಕೊಂಡು, ನಿಶ್ಚಿಂತರಾಗಿರಿ.

[illegible]ಾರರು:—(ಬಾಗಿ)ಮಹಾತ್ಮರ ಅನುಗ್ರಹ!

ನಾರದ:—ಆಹಾ! ವೀರ ಕುಮಾರರೆಂದರೆ ನೀವೇಸರಿ! ನಾರಾಯಣ ನಾರಾಯಣ! (ಹರಸಿ-ಹೋಗುವನು)

ಕುಮಾರರು —ಧರ್ಮದೇವಾ ಬಾಲಕರಾದ ನಮ್ಮ ನ್ಯೂನಾತಿ ರೇಕವನ್ನು ಕ್ಷಮಿಸಿ ಕೊಳ್ಳಬೇಕು! ದಯಮಾಡಬೇಕು. (ವಿನಯದಿಂದ ಯಮನನ್ನು ಕರೆದೊಯ್ಯುವರು.)

ಯಮ:—ಆಹಾ! ಸಾತ್ವಿಕ ಬಾಲಕರೇ ಸರಿ! (ತಲೆದೂಗುತ್ತಾ ಹೋಗುವನು.)

---

## ದೃಶ್ಯ ೧೪—ಗಗನ ಮಾರ್ಗ

( ಬ್ರಹ್ಮನೂ-ಸರಸ್ವತಿಯೂ ಬರುವರು )

ಸರ:—ನಾಥಾ! ನಮ್ಮ ನಾರದನು ಎಂತಹ ಅದ್ಭುತವಾದ ವಾರ್ತೆಯನ್ನು ಹೇಳಿದನು! ಮರ್ತ್ಯಳಾದ ಸಾವಿತ್ರಿ ದೇಹದೊಂದಿಗೆ ವೈಕುಂಠಕ್ಕೆ ಹೋಗುವುದೆಂದರೆ ಏನಾಶ್ಚರ್ಯ!

ಬ್ರಹ್ಮ:—ದೇವಿ! ಮಹಾಪತಿವ್ರತೆಯ ದೇಹವು ಮರ್ತ್ಯ ದೇಹವಲ್ಲ. ಅವಳು ಮರ್ತ್ಯ ಲೋಕದಲ್ಲಿದ್ದರೂ ಸ್ವರ್ಗಧಾಮದಲ್ಲಿದ್ದರೂ, ಒಂದೇ ದಿವ್ಯ ದೇಹದವಳೆಂದು ತಿಳಿ. ಆಹಾ! ಪಾತಿವ್ರತ್ಯ ಪ್ರಭಾವವೆಂದರೇನು ಸಾಮಾನ್ಯವೆ!

ಸರ:—ನಿಜ ನಿಜ! ಅಂತಹ ಮಹಾಮಹಿಮಳಾದ ಸತೀ ಸಾವಿತ್ರಿಯನ್ನು ಕಣ್ಣಿಂಬಾ ನೋಡಿ ಧನ್ಯಳಾಗುವೆನು! ನಡೆಯಿರಿ-[illegible]

ಬ್ರಹ್ಮ:—ಅಗೋಗೋ! ಕೈಲಾಸನಾಥ ಶಿವನು ಪಾರ್ವತಿಯೊಡನೆ ಬರು[illegible]ವನು!

ಶಿವ (ಬಂದು) — ನಮಸ್ಕಾರ-ಸೃಷ್ಟಿಕರ್ತಾ!

ಬ್ರಹ್ಮ:—ನಮಸ್ಕಾರ-ಮಹಾದೇವ!

ಪಾರ್ವತಿ (ಬಂದು):—ಸೋದರಿ-ಶಾರದೆ! ಎಲ್ಲಿಗೆ[illegible]

ಸರಸ್ವತಿ:—ಗಿರಿಜಾದೇವಿ! ಭೂಲೋಕದ ಪ್ರಮುಖ ಪತಿವ್ರತೆಯಾದ ಸಾವಿತ್ರಿ ವೈಕುಂಠಕ್ಕೆ ವಿಜಯ ಮಾಡುತಿರುವಳಂತೆ-

ಪಾರ್ವತಿ:—ಹೌದಂತೆ ನಾರದನು ಈ ಅದ್ಭುತ ಸಮಾಚಾರವನ್ನು ನಮಗೂ ತಿಳಿಸಿದನು.

ಸರ.—ಆ ಸಾಧ್ವೀಮಣಿಯನ್ನು ನೋಡಲಿಕ್ಕಾಗಿಯೇ ನಾವು ಹೊರಟಿರುವೆವು.

ಪಾರ್ವತಿ:—ನಾವೂ ಅದಕ್ಕೇ!

ಬ್ರಹ್ಮ:—ನಡೆಯಿರಿ-ಹಾಗಾದರೆ!

ಶಿವ:—ಹೋಗೋಣ. ( ಹೋಗುವರು )

(ಒಂದು ಬದಿಯಿಂದ ಇಂದ್ರಾಗ್ನಿಗಳೂ ಇನ್ನೊಂದು ಬದಿಯಿಂದ ವರುಣ-ವಾಯುಗಳೂ ಬರುವರು )

ವರುಣ:—ನಮಸ್ಕಾರ-ದೇವೇಂದ್ರಾ!

ಇಂದ್ರ:—ನಮಸ್ಕಾರ-ಇದೇನು? ನಾವಿಲ್ಲಿ ಎಲ್ಲರೂ ಒಂದಾಗಿ ಸೇರಿದೆವಲ್ಲ!

ವರುಣ:—ಹೌದು ನಾರದರು ಒಂದು ಅತ್ಯಾಶ್ಚರ್ಯಕರವಾದ ವಾರ್ತೆಯನ್ನು ತಿಳಿಸಿರುವರು.

ಅಗ್ನಿ:—ನಮಗೂ ತಿಳಿಸಿದರು.

ವಾಯು.—ಭೂಮಿಯಿಂದ ಸತೀ-ಸಾವಿತ್ರಿ ಸದೇಹಳಾಗಿ ವೈಕುಂಠಕ್ಕೆ ನಡೆದಿರುವಳಂತೆ.

ಇಂದ್ರ:—ನಮ್ಮಂತಹರಿಗೇ ಪ್ರವೇಶಿಸಲು ದುರ್ಗಮನೀಯವಾದ ವೈಕುಂಠಕ್ಕೆ ಮಾನವಯೋರ್ವಳು ಹೋಗುವುದೆಂದರೆ ಏನಚ್ಚರಿ!

ಅಗ್ನಿ.—ಎಲ್ಲವೂ ಪಾತಿವ್ರತ್ಯಪ್ರಭಾವ!

ಇಂದ್ರ:—ಸಂಶಯವಿಲ್ಲ. ಆ ಸತೀ ಶಿರೋರತ್ನವನ್ನು ಕಣ್ಣಾರೆ ಕಾಣಬೇಕೆಂದೇ ನಾವು ಹೊರಟಿರುವೆವು.

ವರುಣ-ವಾಯು:—ನಾವೂ ಅದಕ್ಕಾಗಿಯೆ.

ಇಂದ್ರ.—ಸರಿ, ಹಾಗಾದರೆ ಯಮ ಕುಬೇರರು ಮಾತ್ರ ಇಲ್ಲವಾಗಿರುವರು

ಅಗ್ನಿ:—ಹೌದು, ಪಾಪ! ಯಮಧರ್ಮನಂತೂ ಬ್ರಹ್ಮಶಾಸನದಿಂದ ಭೂಮಿಗೆ ಪತನನಾದನಲ್ಲ.

ವರುಣ:—ಪಾಪ! ಅವನ ಪ್ರಾರಬ್ಧಕರ್ಮ! ಈಗ ಕುಬೇರನಿಗೆ ಯಮಾಧಿಕಾರವು ನೂತನವಾಗಿ ದೊರೆತಿರುವದರಿಂದ ಉಭಯ ದಿಕ್ಕುಗಳನ್ನು ಆಳುವ ಸಂಭ್ರಮದಲ್ಲಿ ಮುಳುಗಿ ಹೋಗಿರಬೇಕು!

ವಾಯು:—ಇಲ್ಲದಿದ್ದರೆ-ಈ ಪುಣ್ಯ ಯೋಗೋತ್ಸವವನ್ನು ನೋಡಲು ವೈಕುಂಠಕ್ಕೆ ಹೊರಡದಿರುತ್ತಿದ್ದನೆ?

ಅಗ್ನಿ:—ಅಥವಾ ನಾರದರು ಅವನಿಗೆ ಈ ಪುಣ್ಯ ಸಮಾಚಾರವನ್ನೆ ತಿಳಿಸಲಿಲ್ಲವೋ ಏನೋ!

ವಾಯು:—ಎಲ್ಲರಿಗೂ ತಿಳಿಸುವಂತೆಯೂ-ಇಷ್ಟವಿದ್ದ ದೇವತೆಗಳೆಲ್ಲಾ ವೈಕುಂಠಕ್ಕೆ ಬರಬಹುದೆಂತಲೂ-ಮಹಾವಿಷ್ಣು ಕರುಣಿಸಿರುವನಲ್ಲಾ!

ವರುಣ:—ಅದೇನೋ ಹೊಗಲಿ. ನಾವು ಹೋಗುವ

ಇಂದ್ರ:—ನಡೆಯಿರಿ. [ಅಂ]

---

ದೃಶ್ಯ ೧೫—ಶೈಮಿನಿಯ ಸಭಾಸ್ಥಾನ.

(ಚಿತ್ರಗುಪ್ತಾದಿಗಳೂ ಸೇವಕರೂ ಯಥಾ ಯಥಾ ಸ್ಥಾನದಲ್ಲಿರುವರು)

ವೈತಾಳಿಕರು:—ಜೈ ಕುಬೇರಧರ್ಮರಾಜಾ! ಜೈ! (ಪ್ರವೇಶಿಸಿ ಓರಣ ವಾಗಿ ನಿಲ್ಲುವರು. ಚಿತ್ರಗುಪ್ತಾದಿಗಳೂ ಎದ್ದು ನಿಲ್ಲುವರು. ಕುಬೇರನು ದರ್ಪದಿಂದ ಪ್ರವೇಶಿಸಿ, ಗಾಂಭೀರ್ಯದಿಂದ ಮುಂದೆ ಹೋಗಿ ಧರ್ಮಾಸನ ವನ್ನು ಏರಲು ಕಾಲೆತ್ತಿ, ಕೂಡಲೇ ಏನೋ ಪೆಟ್ಟು ತಿಂದವನಂತೆ, 'ಹಾ!' ಎಂದು ಕೂಗಿ ಹಿಂದೆ ಮಗುಚಿ ಬೀಳುವನು. ಎಲ್ಲರೂ ಬೆರಗಾಗುವರು. ಚಿತ್ರ ಗುಪ್ತರು ತಲೆದೂಗುವರು. ಸೇವಕರು ಬಿದ್ದವನನ್ನು ಎತ್ತಿ ಹಿಡಿಯುವ ಹವ ಣಿಕೆಯಿಂದ ಮುಂದುವರೆಯುವರು. ಅಷ್ಟರಲ್ಲಿ ಕುಬೇರನು ಎದ್ದು ನಿಂತು, ಬೆರಗಾಗಿ ಸಿಂಹಾಸನವನ್ನು ನೋಡುತ್ತ)

ಕುಬೇರ:—ಆಹಾ! ಏನೀ ವಿಪರೀತ! ಸಿಂಹಾಸನವು ನನ್ನನ್ನು ತಳ್ಳಿಬಿಟ್ಟಿತಲ್ಲ! (ದುರದುರನೆ ನೋಡುವನು)

ಚಿತ್ರ:—ಮಹಾಪ್ರಭು! ತಾವು ಏನೋ ಧರ್ಮಕ್ಕೆ ಲೋಪ ಮಾಡಿರ ಬೇಕು. ಅಂತೆಯೇ ಧರ್ಮಸಿಂಹಾಸವು ಸಹಿಸಲಿಲ್ಲ.

ಕುಬೇರ:—ನಾನು ಏನು ಧರ್ಮಕ್ಕೆ ಲೋಪ ಮಾಡಿದೆನು?

ಚಿತ್ರ:—ಜ್ಞಾಪಿಸಿಕೊಳ್ಳೋಣವಾಗಲಿ ಪ್ರಭು!

ಕುಬೇರ:—ಮರೆತರಲ್ಲವೇ ಜ್ಞಾಪಿಸಿಕೊಳ್ಳುವದು? (ತನ್ನ ಕೈಯಲ್ಲಿ ರುವ ಬ್ರಹ್ಮಶಕ್ತಿಯನ್ನು ನೋಡುತ್ತ) ಲೋಕ ಪಿತಾಮಹನ ಈ ಶಕ್ತಿ ನನ್ನ ಕೈಯಲ್ಲಿರುವಾಗಲೂ ಈ ಸಿಂಹಾಸನಕ್ಕೆ ಇಷ್ಟು ದರ್ಪವೆ?

ಚಿತ್ರ:- ಬ್ರಹ್ಮ ಶ ಕ್ತಿ ಗಿ ಂ ತ ಲೂ ಧರ್ಮಶಕ್ತಿ ... ಮಿಗಿಲಾದು ದೆಂದು, ತಮಗೆ ತಿಳಿಸಬೇಕಾಗಿ ಬಂದುದಕ್ಕೆ ಪರಮ ವಿಷಾದ ಪಡುತ್ತೇನೆ. ಪ್ರಭೊ! ನಾನು ಮೊದಲೇ ತಮಗೆ ಎಚ್ಚರಿಸಿದ್ದೇನೆ. ತಾವು ಸತೀಮಣಿಯಾದ ಆ ಶೈರವಿಯನ್ನು ಭೂಲೋಕದ ಭಾವಿಯಲ್ಲಿ ಮುಚ್ಚಿರುವ ಪಾಪ ದೋಷವೇ ಈಗ ತಮ್ಮನ್ನು ಬಾಧಿಸುತ್ತಿರುವದು.

ಕುಬೇರ:—ಆ ಅಲ್ಪ ಮಾನವಿಯಿಂದ ನನ್ನನ್ನೆ ತಳ್ಳುವಷ್ಟು ಶಕ್ತಿ ಯುಂಟಾಗುವದೆ? ಇದು ಸುಳ್ಳು! ಸುಳ್ಳು!

ಚಿತ್ರ:—ಪತಿವ್ರತಾಸ್ತ್ರೀಯ ಸಂತಾಪದಿಂದ ಬಿಡುವ ಒಂದೇ ಒಂದು ಬಿಸಿಯುಸಿರೇ ಸೂರ್ಯನನ್ನಾದರೂ ಸುಟ್ಟು ಬೂದಿ ಮಾಡಬಲ್ಲದು. ಅಂದು ಅನಸೂಯಾದೇವಿ ಪತಿಯ ಪಾದೋದಕವನ್ನು ತಳಿದು ತ್ರಿಮೂರ್ತಿಗಳನ್ನೆ ಶಿಶುಗಳನ್ನಾಗಿ ಮಾಡಿ ಆಡಲಿಲ್ಲವೆ?

ಕುಬೇರ:—ಇದ್ದರೂ ಇರಬಹುದು! ಆದರೆ ಇದೀಗ ಏನೋ ಆ ಮಾಯಾವಿಯಾದ ಯಮನ ಮಾಯೆಯೇ ಸರಿ! ಅವನು ಅದೃಶ್ಯರೂಪ ದಿಂದ ಈ ಸಿಂಹಾಸನದಲ್ಲಿ ಅಡಗಿರುವಂತೆ ಕಾಣುವದು. ಈಗಲೇ ಅವನನ್ನು ಮುರಿದು ಕೆಡಹುವೆನು. (ಬ್ರಹ್ಮಶಕ್ತಿಯಾದ ಕಮಲನಾಳವನ್ನೆತ್ತಿ ಸಿಂಹಾ ಸನದ ಮೇಲೆ ಬೀಸಿ ಹಾಕುವನು. ಅದು ತಿರುಗಿ ಅವನ ಮೇಲೆಯೇ ಬೀಳಲು 'ಹಾ!' ಎಂದು ಬೀಳುವನು. ಪುನಃ ಎದ್ದು ದುರದುರನೆ ನೋಡಿ 'ಅಂ' ಎಂದು ಗರ್ಜಿಸಿ) ದುಷ್ಟಪೀಠವೆ! ನನ್ನ ಬಲದಿಂದ ನಿನ್ನನ್ನು ಚೂರ್ಣ ಮಾಡುವೆನು!' (ಒದೆಯಲು ಕಾಲೆತ್ತಿ "ಅಯ್ಯೋ!" ಎಂದು ಪುನಃ ಬಿದ್ದು) ಅಯ್ಯಯ್ಯೋ! ಮೃತ್ಯುದಂಡವೆ! ಹಾ! (ಎದ್ದು) ಇಲ್ಲ! ಹೊಡೆಯಬೇಡ-ಬೇಡ! ಹಾ! ಹಾ! (ಹಿಂಜರಿದು ಹಿಂಜರಿದು ಓಡಿ ಹೋಗುವನು.)

ಚಿತ್ರ (ನೋಡಿ ತಲೆದೂಗಿ):—ಆ ಹಾ! ಪಾಪದಿಂದ ಕಲಂಕಿತನಾದ ಕುಬೇರನು ಈ ಧರ್ಮಾಸನದಿಂದ ಪತನನಾಗಿ ಓಡಿ ಹೋದನು. ಇನ್ನು ಅವನಿಗೆ ಈ ಧರ್ಮಾಸನವು ದಕ್ಕುವುದೆ? ಜೈಮಿನೀ ನಗರವು ಅರಾಜಕ ವಾದಂತೆಯೆ ಸರಿ. ಬ್ರಹ್ಮನ ಸನ್ನಿಧಿಗೆ ಹೋಗಿ ಇದಕ್ಕೆ ತಕ್ಕನಿವೃತ್ತಿಯನ್ನು ಶೋಧನೆ ಮಾಡಬೇಕಾಯಿತು. ಎಲೈ! ಅಪರಿಮಿತ ಶಕ್ತಿಶಾಲಿಗಳಾದ ಮೃತ್ಯುದಂಡ-ಕಾಲಪಾಶ-ಧರ್ಮಾಸನಗಳೆ! ನಾನು ಹಿಂದಿರುಗಿ ಬರುವ ವರೆಗೆ ಜೈಮಿನೀ ನಗರವನ್ನು ನೀವೇ ಕಾಯುತ್ತಿರಿ! ದೂತರೆ! ಎಚ್ಚರಿಕೆ! ನಾನು ಬ್ರಹ್ಮಲೋಕಕ್ಕೆ ಹೋಗಿ ಬರುವೆನು.

ದೂತರು:—ಅಪ್ಪಣೆ ಜೀಯಾ!

(ಚಿತ್ರಗುಪ್ತರು ಪುಸ್ತಕದ ಕಟ್ಟಿನೊಂದಿಗೆ ಹೋಗುವರು.)

ದೃಶ್ಯ ೧೬—ದಾರಿ.

(ಕುಬೇರನು ಚಿಂತೆಯಿಂದ ಪ್ರವೇಶಿಸುವನು)

ಕುಬೇರ:—ಹಾ! ಕಷ್ಟಕಾಲ! ಶೈಮಿನಿಯ ಸಿಂಹಾಸನವು ಏನೋ ಮಾಯಮಂತ್ರದಿಂದ ಕೂಡಿದೆ! ಅಯ್ಯೋ! ಈ ದುರಂತವಾದ ಮಹಾ ಅವ ಮಾನವನ್ನು ನಾನು ಹೇಗೆ ಸಹಿಸಲಿ? ಈ ಹಾಳು ಮುಖವನ್ನು ಹೇಗೆ ಇಟ್ಟುಕೊಳ್ಳಲಿ? ಸಹಿಸಲಾರೆ! ಸಹಿಸಲಾರೆ!

ನಾರದ (ಇನ್ನೊಂದು ಬದಿಯಿಂದ ಪ್ರವೇಶಿಸಿ):—ನೋಡಿದ್ಯೆ ತಂ-ಬೂರಿ! ಈ ಅಸೂಯಾಪರ ಕುಬೇರನ ದುರವಸ್ಥೆಯ! ಮದವೆಲ್ಲಾ ಇಳಿ ಯುತ್ತಿದೆ. (ಪ್ರಕಾಶ) ಜಯ ನಾರಾಯಣ ಹರಿ ನಾರಾಯಣ! (ಮುಂದೆ ಬರುವನು.)

—(ತ್ವರಿವಾಗಿ ಮೋರೆ ತಿರುಗಿಸಿಕೊಳ್ಳುವನು.)

—ಕುಬೇರ ಧರ್ಮರಾಜಾ! ನಿನ್ನನ್ನು ನೋಡಬೇಕೆಂದು ಶೈಮಿನಿ ಪುರದ ದಾರಿ ಹಿಡಿದಿದ್ದೆನು. ದಾರಿಯಲ್ಲಿಯೆ ನಿನ್ನ ದರುಶನವಾದುದು ಅನುಕೂಲವೇ ಸರಿ. ಎತ್ತ ಸವಾರಿ? ಅಳಕಾಪುರಿಗೆ ಹೋಟೆಯಾ? ಕುಶ ಲವೆ?

ಕುಬೇರ:—(ನಿರುತ್ತರ)

ನಾರದ(ಬಾಗಿ-ಕುಬೇರನ ಮುಖವನ್ನು ನೋಡಿ):-ಎಲಲ! ಇದೇನು? ನಿನ್ನ ಮುಖವು ಇಷ್ಟು ಮ್ಲಾನವಾಗಲೇನಾಯಿತು?

ಕುಬೇರ.—ಸಾಕು ನಾರದರೆ! ನಿಮ್ಮ ಸಹವಾಸ ಸಾಕು! ನಿಮ್ಮಿಂದಲೇ ನನಗೆ ಈ ದುರವಸ್ಥೆ ಬಂದೊದಗಿತು!

ನಾರದ.—ನಾರಾಯಣ! ನಾರಾಯಣ! ನಾನೇನು ಮಾಡಿದೆನು! ನಿನಗಾಗಿ ಇಷ್ಟೆಲ್ಲಾ ಕಷ್ಟಪಟ್ಟದ್ದಕ್ಕೆ ಇದೇ ಏನು ನಿನ್ನ ಪುರಸ್ಕಾರ? ಅಂತೂ ಕಡೆಗೆ ನಾರದನಿಗೆ ದೂರು ತಪ್ಪಲಿಲ್ಲ! ನಾರಾಯಣ! ನಾರಾಯಣ!

ಕುಬೇರ:—ನಾರದರೆ! ಶೈಮಿನಿಯ ಸಿಂಹಾಸನದಲ್ಲಿ ಯಾವುದೋ ಒಂದು ಮರ್ಮವುಂಟು. ಅದನ್ನು ತಿಳಿಸದೆ ನೀವು ನನಗೆ ಮೋಸ ಮಾಡ ಬಹುದೆ? ಒಮ್ಮೆ ಆಸೀನನಾದ ನನ್ನನ್ನು ಮತ್ತೊಮ್ಮೆ ಆ ಸಿಂಹಾಸನವು ಹತ್ತಗೊಡಲಿಲ್ಲ.

ನಾರದ:—ಓಹೊ! ಹಾಗೆ ಹೇಳು! ಕುಬೇರಾ! ಅದರಲ್ಲಿ ಅಂತಹ ಮರ್ಮವೇನೂ ಇಲ್ಲ! ಧರ್ಮ ಪ್ರವರ್ತನೆಯೆ ಅದರ ಮರ್ಮ. ನೀನು ಏನಾದರೂ ಅಧರ್ಮವನ್ನು ಆಚರಿಸಿದೆಯಾ?

ಕುಬೇರ.—ತಿಳಿದಿರುವಂತೆ ಏನೂ ಮಾಡಲಿಲ್ಲ.

ನಾರದ:—ಹಾಗಾದರೆ ತಡೆ, ನಾನು ನನ್ನ ತ್ರಿಕಾಲ ಜ್ಞಾನದಿಂದ ನೋಡಿ ಹೇಳುವೆನು (ಯೋಚಿಸಿ) ಹೊ| ತಿಳಿಯಿತು! ನೀನು ಭೈರವಿ ಎಂಬ ಮಹಾ ಪತಿವ್ರತೆಯು ಕೈಮಿನೀಗಮನವೆಂಬ ತಪಾನುಚರಣೆಗೆ ಭಂಗ ವನ್ನುಂಟು ಮಾಡಿ, ಅವಳನ್ನು ಒಂದು ಬಾವಿಯಲ್ಲಿ ಬಂಧಿಸಿರುತ್ತೀ! ಆ ದೋಷವೇ ನಿನಗೆ ಈ ಗತಿಯನ್ನು ತಂದಿತು|

ಕುಬೇರ —ಅಯ್ಯಯ್ಯೊ| ಇದೇನು ಸ್ವಾಮಿ| ಚಿತ್ರಗುಪ್ತರು ಹೇಳಿ ದಂತೆಯೇ, ಹೇ ... ವಲ್ಲ?

ನಾ... ...ಕುಬೇರಾ| ಧರ್ಮನಿರತರಾದ ಚಿತ್ರಗುಪ್ತರ ... ದೇಶವ... ... ಆ ... ಸ್ತ್ರೀಮಣಿಯನ್ನು ಹಿಂಸೆಗೊಳಿಸಿ ದ ... ಜನ ನಾದ ... ... ಕೃತಾಪರಾಧಿ ನೀನು, ನಿನ್ನ ದೋಷಪಗ... ...ನ್ನ ವನ್ನ ... ...ತ್ರೀ...ಯ ದೋಷಕ್ಕೆ ಭಾಗಿಯಾಗುವಿ

... —...ಮಿಲ್ಲ! ಮನ್ನಿಸಿರಿ ಸ್ವಾಮಿ! (ವಂದಿಸುವನು ... ಮಿ! ನಿಮ್ಮನ್ನೇ ... ...ಕ್ತಿಸುವೆನು| ಪತಿತನಾದ ನನಗೆ ನೀವೇ ತಕ್ಕ ನಿವೃತ್ತಿ ಮಾರ್ಗವನ್ನು ... ...ಡಬೇಕು.

ನಾರದ—ನಾನೇನು ಮಾಡಲಯ್ಯಾ| ಧರ್ಮಪಟ್ಟವಂತೂ ಇನ್ನು ನಿನಗೆ! ಸಿಕ್ಕದು ಈಗಣ ಪರಿಸ್ಥಿತಿಯನ್ನು ಯೋಚನೆ ಮಾಡಿದರೆ ಅಳಕಾ ಪುರಿಯ ಸಿಂಹಾಸನವೂ ನಿನ್ನನ್ನು ಏರಿಸಿಕೊಳ್ಳಲಾರದು

ಕುಬೇರ —ಅಯ್ಯಯ್ಯೊ! ಸರ್ವನಾಶ!

ನಾರದ—ಸರ್ವನಾಶವೇ!

ಕುಬೇರ.—ಅದೇನು?

ನಾರದ —ಅದೇನು| ಹಃ| ತ್ರಿಮೂರ್ತಿಗಳ ಆಜ್ಞೆಗೆ ವಿರುದ್ಧವಾಗಿ ಕೈಮಿನೀ ನಗರವನ್ನೆ ಅರಾಜಕಗೊಳಿಸಿದ ನೀನು, ಆ ಪರಮಾತ್ಮನಿಗೇ ದ್ರೋಹಿಯಾಗಿರುವಿಯಲ್ಲಾ| ಇಂತಹ ನೀನು ಕಳ್ಳನ ಹಾಗೆ ಹೋಗಿ ಧನ

ಪಟ್ಟದಲ್ಲಿ ಮಂಡಿಸಲು, ಧನಪಟ್ಟವು ಮಾತ್ರ ಸಾಮಾನ್ಯವೆಂದು ತಿಳಿದಿಯೇನು?

ಕುಬೇರ:—ಅಯ್ಯೋ! ಸ್ವಾಮಿ ನಾರದರೆ! ಇನ್ನೇನುಗತಿ? ಸ್ವಾಮಿ! ನನ್ನ ಮಾನಮರ್ಯಾದೆ ಪೂರಾ ನಿಮ್ಮ ಕೈಯಲ್ಲಿ ಕೊಟ್ಟಿದ್ದೇನೆ. ನನ್ನ ಧನಪಟ್ಟವಾದರೂ ನನಗೆ ಸಿಕ್ಕುವಂತೆ ನೀವೇ ಅನುಗ್ರಹ ಮಾಡಬೇಕು ಸ್ವಾಮಿ!

ನಾರದ:—ಕುಬೇರಾ! ಈ ವಿಷಯದಲ್ಲಿ ನಿನಗೆ ಅನುಗ್ರಹ ಮಾಡಲು ನಾನೇನೂ ಶಕ್ತನಲ್ಲ! ಆ ಸತೀಮಣಿ ಭೈರವಿಯೊಬ್ಬಳ ಹೊರತು ತ್ರಿಮೂರ್ತಿಗಳಾದರೂ ಶಕ್ತರಲ್ಲ! ಧರ್ಮವೆಂಬುದು ಅಷ್ಟು ಸೂಕ್ಷ್ಮವಿಚಾರವೆಂದು ತಿಳಿ ಕುಬೇರಾ! ನೀನೀಗ ಹೋಗಿ ಆ ಭೈರವಿಯನ್ನು ಬಾವಿಯಿಂದ ಮುಕ್ತಗೊಳಿಸಿ, ಅವಳೊಡನೆ ಕ್ಷಮಾಪಣೆ ಬೇಡಿದರೆ ಆಗಬಹುದು. ಅವಳು ಕ್ಷಮಿಸಿಕೊಂಡಳೆಂದರೆ ನೀನು ಖಂಡಿತವಾಗಿ ಮೊದಲಿನ ಧನಪಟ್ಟಾಧಿಕಾರವನ್ನು ಹೊಂದುವಿ. ಉಳಿದ ನಿನ್ನ ಅಪರಾಧಗಳನ್ನು ಮನ್ನಿಸುವಂತೆ, ನಿನ್ನ ಪರವಾಗಿ ಬೇಕಾದರೆ ನಾನೇ ತ್ರಿಮೂರ್ತಿಗಳೊಡನೆ ಕೇಳಿಕೊಳ್ಳುತ್ತೇನೆ.

ಕುಬೇರ:—ನಿಮ್ಮ ಮಹೋಪಕಾರ ಸ್ವಾಮಿ! ತಾವು ಆಜ್ಞಾಪಿಸಿದಂತೆಯೇ ಮಾಡುತ್ತೇನೆ. ಪತಿವ್ರತಾ ಸ್ತ್ರೀಯರ ಪ್ರಭಾವವು ಇಷ್ಟು ತೀವ್ರವಾದುದೆಂದು ತಿಳಿಯದೆ ಹೋದೆನು.

ನಾರದ.—ಈಗಾದರೂ ಚನ್ನಾಗಿ ತಿಳಿಯಲಿ! ನಾರಾಯಣ ನಾರಾಯಣ. (ಹೋಗುವನು.)

ಕುಬೇರ:—ಅಯ್ಯೋ! ಏನು ಮಾಡಲಿ? ಭೈರವಿಯನ್ನು ಹುಡುಕಿಕೊಂಡು ಭೂಮಿಗೇ ಹೋಗುವೆನು. (ಹೋಗುವನು)

★

# ಅಂಕ ೩

## ದೃಶ್ಯ—೧—ಶ್ರೀ ವೈಕುಂಠ.

(ಲಕ್ಷ್ಮೀ-ನಾರಾಯಣರು ಶೇಷಸಿಂಹಾಸನದಲ್ಲಿ ಮಂಡಿಸಿರುವರು. ಎಡ-ಬಲ ಪಾರ್ಶ್ವಗಳಲ್ಲಿ ತಂತಮ್ಮ ಪತ್ನಿಯರೊಂದಿಗೆ ಬ್ರಹ್ಮ-ಶಿವರು ಕುಳಿತಿರುವರು. ಸತ್ಯವಾನನೂ ಭದ್ರಬಾಹುವೂ ಅಕ್ಕ-ಪಕ್ಕಗಳಲ್ಲಿ ಕೈ ಜೋಡಿಸಿಕೊಂಡು, ನಿಂತಿರುವರು. ಸತ್ಯವಾನನು ವಿಷ್ಣುವನ್ನು ಸ್ತುತಿಸುವನು.) [೪೬]

ನಾರಾಯಣ.—ಆಹಾ! ಪಾತಿವೃತ್ಯದ ಪ್ರಭಾವವೇ ಪ್ರಭಾವವು! ಧೈರವಿಯ ಪಾತಿವ್ರತ್ಯದ ಪ್ರಭಾವದಿಂದ ಅವಳ ಪತಿಯಾದ ಭದ್ರಬಾಹು ಯಮಲೋಕದಿಂದ ಮುಕ್ತನಾಗಿ ಇಲ್ಲಿಗೆ ಬಂದು ಸೇರಿದನು. ಪತಿವ್ರತಾ ಶಿರೋಮಣಿಯಾದ ಸಾವಿತ್ರಿಯಾದರೋ—ಈಗ ಇಲ್ಲಿಗೇ ಮರ್ತ್ಯ ದೇಹದಿಂದ ಬರುತ್ತಲಿದ್ದಾಳೆ! ಎಂತಹ ಅಮರಯೋಗವಿದು!

(ಇಂದ್ರಾದಿದೇವತೆಗಳೂ-ಚಿತ್ರಗುಪ್ತರೂ-ಸಂಕೀರ್ತನೆ [೪೭] ಯೊಂದಿಗೆ ನಾರದನೂ ಬರುವರು.)

ಇಂದ್ರ:—ಸರ್ವೇಶ್ವರಾ! ಪರಾತ್ಪರಾ! ಮಹಾ ಪ್ರಭೋ ಕೋಟಿ ಕೋಟಿ ನಮಸ್ಕಾರಗಳು! ವಾಣೀಶ ಪರಮೇಶರಿಗೂ ಅನಂತ ಪ್ರಣಾಮಗಳು! ಮರ್ತ್ಯಲೋಕದ ಪರಮ ಪತಿವೃತೆಯಾದ ಸಾವಿತ್ರೀದೇವಿಯನ್ನು ಈ ದಿವ್ಯ ಧಾಮದಲ್ಲಿ ಸಂದರ್ಶಿಸುವಂತೆ-ನಾವೆಲ್ಲರೂ ಅನುಗ್ರಹೀತರಾದೆವು.

ನಾರಾಯಣ:—ಸಂತೋಷ. ನಿಮಗೆಲ್ಲರಿಗೂ ಶುಭಾಗಮನವಿರಲಿ! ಸುಸ್ವಾಗತವಿರಲಿ! ಆಹಾ! ನಾವು ತ್ರಿಮೂರ್ತಿಗಳೂ ಇಂದ್ರಾದಿ ದೇವತೆಗಳೂ-ಪಾತಿವ್ರತ್ಯದ ದಿವ್ಯಮಣಿಯನ್ನು ಕಾಣಲಿರುವ ಈ ಸುದಿನವು-ಈ ದ್ವಾದಶೀ ಪುಣ್ಯದಿನವು 'ಮುಕ್ಕೋಟಿ ದ್ವಾದಶಿ' ಎಂದು ಪ್ರಸಿದ್ಧವಾಗಲಿ!

ಎಲ್ಲರೂ:—ಜೈ! ಶ್ರೀ ತ್ರಿಮೂರ್ತಿ ಸ್ವರೂಪ! ಜೈ ಶ್ರೀಮನ್ನಾರಾಯಣ!

(ಗಂಗಾದೇವಿ ಪ್ರತ್ಯಕ್ಷಳಾಗಿ ಸತೀ ಸಾವಿತ್ರಿಯನ್ನು ಪರಮಾತ್ಮನ ಇದಿರಿನಲ್ಲಿ ನಿಲ್ಲಿಸುವಳು.)

ದೇವತೆಗಳು:—ಆಹಾ! ಸತೀಸಾವಿತ್ರಿ! ಸುಸ್ವಾಗತ! ಸುಸ್ವಾಗತ!
(ಹೂ ಮಳೆಗರೆಯುವರು-ಸಾವಿತ್ರಿಗೆ')

ಗಂಗಾದೇವಿ:—ಮಗಳೆ! ಸಾವಿತ್ರಿ! ನಿನ್ನ ಸೌಭಾಗ್ಯಕ್ಕೆ ಎಣೆಯೇ ಇಲ್ಲ! ನಿನ್ನ ಎದುರಿನಲ್ಲಿರುವ ಪರಾತ್ಪರನಾದ ಪರಮಾತ್ಮನನ್ನು ನೋಡು! ಕಣ್ದಣಿಯೆ ನೋಡು.

ಸಾವಿತ್ರಿ:—ಆಹಾ! ಇಲ್ಲಿಯ ದಿವ್ಯ ತೇಜೋಮಯವಾದ ಜ್ಯೋತಿಯಿಂದ ನನ್ನ ಕಣ್ಣುಗಳೇ ಕುರುಡಾದವು. (ಕೈಮುಗಿದು) ಹೇ ಪರಮಾತ್ಮ! ನಿನ್ನ ದಿವ್ಯ ರೂಪಗಳ ಸ್ವರೂಪವನ್ನು ನೋಡುವ ಶಕ್ತಿ ನನ್ನ ಈ ಮಾನವಳ ಕಣ್ಣುಗಳಿಗೆ ದಯಪಾಲಿಸು, ದಯಪಾಲಿಸು!

ನಾರಾಯಣ:—ಭದ್ರಾಂಗಿ! ಸಾವಿತ್ರಿ! ನಿನಗೀಗ ದಿವ್ಯದೃಷ್ಟಿಯನ್ನು ಕೊಟ್ಟಿರುವೆನು.

ಸಾವಿತ್ರಿ (ನೋಡಿ ಆನಂದದಿಂದ):—ಆಹಾ! ದೇವಾಧಿದೇವಾ! [ಹಾಡು] (ಅಡ್ಡಬಿದ್ದು) ಹೇ ಕರುಣಾನಿಧಿ! ತ್ರಿಮೂರ್ತಿಸ್ವರೂಪಾ! ಕೋಟಿ ಕೋಟಿ ನಮಸ್ಕಾರಗಳು!

ವಿಷ್ಣು:—ದೀರ್ಘಸುಮಂಗಲೀಭವ!

ಬ್ರಹ್ಮ:—ಪುತ್ರ-ಪೌತ್ರಸತ್ ಸಂತಾನಾಭಿವೃದ್ಧಿರಸ್ತು!

ಶಿವ:—ದೀರ್ಘಾಯುರಾರೋಗ್ಯ ಸರ್ವಸಂಪದಾಭಿವೃದ್ಧಿರಸ್ತು!

(ತ್ರಿಮೂರ್ತಿಗಳೂ ಸಾವಿತ್ರಿಯ ತಲೆಯಮೇಲೆ ಕೈಯಿಡುವರು)

ದೇವತೆಗಳು:—ತಥಾಸ್ತು! ತಥಾಸ್ತು! (ಪುಷ್ಪವನ್ನು ತಳಿಯುವರು.)

ನಾರಾಯಣ:—ಮಹಾಭಾಗೆ! ಎದ್ದೇಳು! ನಮ್ಮ ದೇವಿಯರು ನಿನ್ನ ಶುಭಾಲಿಂಗನಕ್ಕಾಗಿ ಕಾದಿರುವರು

(ಲಕ್ಷ್ಮಿ-ಸರಸ್ವತಿ-ಪಾರ್ವತಿಯರು ಆತುರದಿಂದ ಮುಂದೆ ಬರುವರು.)

ಲಕ್ಷ್ಮಿ:—ಭದ್ರೆ! ಶ್ರೀಮತಿಸಾವಿತ್ರಿ!

ಸರಸ್ವತಿ:—ಮಂಗಳಾಂಗಿ!

ಪಾರ್ವತಿ:—ಮಹಾಭಾಗೆ! ಎದ್ದೇಳು. (ಮೂವರೂ ಸಾವಿತ್ರಿಯನ್ನು ಹಿಡಿದೆಬ್ಬಿಸುವರು.)

ಸಾವಿತ್ರಿ:—ಮಹಾದೇವಿಯರೆ! ನಿಮಗೂ ನನ್ನ ಭಕ್ತಿಯುಕ್ತವಾದ ನಮಸ್ಕಾರಗಳು.

ಲಕ್ಷ್ಮಿ:—ನಿತ್ಯ ಸುಮಂಗಳಿಯಾಗು. (ಆಲಿಂಗಿಸುವಳು.)

ಸರಸ್ವತಿ:—ಚಿರಕಾಲ ಕುಂಕುಮ ಸೌಭಾಗ್ಯವತಿಯಾಗು. (ಆಲಿಂಗಿಸುವಳು.)

ಪಾರ್ವತಿ:—ಪತಿವ್ರತಾ ಶಿರೋರತ್ನವಾಗು. (ಆಲಿಂಗಿಸುವಳು.)

ಸಾವಿತ್ರಿ:—ಆಹಾ! ದೇವಾಧಿದೇವಿಯರ ಶುಭ ಸ್ಪರ್ಶದಿಂದಲೂ ಶುಭಾಲಿಂಗನದಿಂದ ಕೂಡಿದ ದಿವ್ಯಾಶಿರ್ವಾದಾಮೃತವರ್ಷಣದಿಂದಲೂ ನಾನು ಧನ್ಯೆಯಾದೆನು! ನನ್ನ ಉಭಯ ವಂಶಗಳು ಪಾವನವಾದುವು!

ವಾಣಿ:—ಸತೀಮಣಿ! ನಿನ್ನ ಸಂಯೋಗದಿಂದ ನಾವೂ ಆನಂದವಾರಿಯಿಂದ ಅಭಿಷೇಕಗೊಂಡೆವು.

ನಾರಾ:—ಈ ವೈಕುಂಠವೂ ಮೋದಗೊಂಡಿತು. ಮಗಳೆ! ಶುಭಾಂಗಿ! ನಿನ್ನ ಪತಿಭಕ್ತಿಗೆ ನಾವು ತ್ರಿಮೂರ್ತಿಗಳೂ ತುಂಬಾ ಮೆಚ್ಚಿರುವೆವು. ನಿನಗೆ ಬೇಕಾದ ವರಗಳನ್ನು ಕೇಳು ಕೊಡುವೆವು.

ಸಾವಿತ್ರಿ:—ಪರಾತ್ಪರ! ಕಂಡವರ ಕಾಮಧೇನುವಾದ ನಿನ್ನ ದಿವ್ಯ ಸಂದರ್ಶನಕ್ಕಿಂತಲೂ ಮಿಗಿಲಾದ ವರವು ಇನ್ನೊಂದುಂಟೆ? ಸರ್ವಾಭೀಷ್ಟ ಫಲಪ್ರದಾಯಕವಾದ ನಿನ್ನ ಮಂಗಳ ಪಾದದರ್ಶನಮಾತ್ರದಿಂದಲೇ ನನಗೆ ಬೇಕಾದ ವರಗಳೆಲ್ಲವೂ ಲಭಿಸಿದುವು. ಅಂತರ್ಯಾಮಿಯೂ ಪರಮ ಕರುಣಾಕರನೂ ಆದ ನೀನು ನನಗೆ ಬೇಕಾದ ವರಗಳನ್ನು ಆಗಲೇ ಕೊಟ್ಟಿಯಲ್ಲಾ!

ನಾರದ:—ಆಹಾ! ದೇವಾ! ಈ ಸತಿಯ ವಚನವು ಸತ್ಯವಾಗಿದೆ! ಈ ಸಾಧ್ವೀ ಈ ಪವಿತ್ರಧಾಮಕ್ಕೆ ಬಂದುದು ಪತಿಯನ್ನು ಭಿಕ್ಷಾರೂಪದಿಂದ ಪಡೆಯಲಿಕ್ಕಾಗಿ. ದಯಾಮಯನಾದ ನೀನು ಆಗಲೇ ಅದನ್ನು ಕರುಣಿಸಿದ ಮೇಲೆ ಈ ಮಹಾಭಾಗಿಗೆ ಇನ್ನೇನಾಗಬೇಕು?

ಬ್ರಹ್ಮ:—ಆಹಾ! ಸತ್ಯವು! ಸತ್ಯವು! ನಮ್ಮನ್ನೇ ಜಯಸಿದ ಈ ಪ್ರತಿಭಾಶಾಲಿನಿ ಯಮಧರ್ಮನನ್ನು ಸೋಲಿಸಿರುವದು ಯಥಾರ್ಥವೆ? ಆಗಿದೆ!

ಶಿವ:—ನಿಜ ನಿಜ! ಇವಳ ಭಕ್ತಿ ನಿಷ್ಠೆಗಳಿಗೆ ಮೆಚ್ಚಿ ಪರವಶರಾದ ನಾವು ಮಾಡಿದ ಆಶಿರ್ವಾದಗಳಿಂದ ಇವಳ ಪತಿ ಇವಳ ವಶನಾದನು.

ನಾರಾಯಣ:-ಆಹಾ! ಸೋಲಿಸಿ ಮೆಚ್ಚಿಸುವ ಧೀರಪತಿವ್ರತೆಯೆಂದರೆ ಸತೀ ಸಾವಿತ್ರಿಯೇ ಸರಿ. ಆಹಾ! ಯಮಧರ್ಮನು ಪಾಪ! ತೀರಾ ನಿರಪ ರಾಧಿ! ಅವನು ಈ ನಾರೀಮಣಿಗೆ ಕೊಟ್ಟವರಗಳೂ ಸಾಧುವಾಗಿವೆ! ಧರ್ಮ ಯುಕ್ತವೇ ಆಗಿವೆ!

ಸಾವಿತ್ರಿ:—ದೇವಾಧಿದೇವಾ! ಧರ್ಮಪರಾಯಣನಾದ ಯಮಧರ್ಮ ದೇವನಿಗೆ ಮೊದಲಿನಂತೆ ಶೈಮಿನಿಯ ಧರ್ಮಾಧಿಕಾರವನ್ನು ದಯಪಾಲಿಸು ವಂತೆ ವರವನ್ನೀಯಬೇಕಾಗಿ ಬೇಡುತ್ತೇನೆ.

ನಾರಾಯಣ:— ನ್ಯಾಯವಾದ ವರವೇ ಸರಿ! ಹಾಗೆಯೇ ಆಗಲಿ' ಯಮಧರ್ಮನೇ ಶೈಮಿನಿಯ ಧರ್ಮಾಸನದಲ್ಲಿ ಆಸೀನನಾಗಲಿ'

ಬ್ರಹ್ಮ-ಶಿವ:—ತಥಾಸ್ತು!

ಎಲ್ಲರೂ:—ಜೈ ಸಾವಿತ್ರೀದೇವಿಗೆ!

ಚಿತ್ರಗುಪ್ತ:-[ಮುಂದೆ ಬಂದು)ಆಹಾ! ಕೇಳಬೇಕೆಂದಿರುವ ವರಗಳು ಕೇಳದೆಯೇ! ಸಿಕ್ಕುವಂತಹ ಈ ವೈಕುಂಠದ ಮಹಿಮೆಯೇ ಮಹಿಮೆ! ದೇವಾಧಿದೇವನ ದಿವ್ಯಾನುಗ್ರಹದಿಂದ ಶೈಮಿನೀ ನಗರದ ಅರಾಜಕತೆ ತೊಲಗಿದಂತಾಯಿತು!

ನಾರಾಯಣ:—ಚಿತ್ರಗುಪ್ತಾ! ಶೈಮಿನೀ ನಗರವು ಅರಾಜಕ ವಾಗಿರುವದೆ?

ಚಿತ್ರಗುಪ್ತ:—ಹೌದು ಮಹಾಪ್ರಭು! ನೂತನಾಧಿಕಾರವನ್ನು ಹೊಂದಿದ ಕುಬೇರರು ಧರ್ಮಾಸನದಿಂದ ಪತನರಾಗಿ ಓಡಿಹೋದರು.. ಈ ವಿವರಗಳನ್ನು ವಿಜ್ಞಾಪಿಸಬೇಕೆಂದೇ ನಾನು ಇಲ್ಲಿಗೆ ಬಂದೆನು; ಆದರೆ ನಾನು ಅರಿಕೆಮಾಡುವದಕ್ಕೆ ಮುಂಚಿತವಾಗಿಯೇ ಶೈಮಿನಿಯ ರಾಜ ಸೂರ್ಯನೇ ಬೆಳಗಿದನು.

ನಾರಾಯಣ:—ಕುಬೇರನು ಪತನನಾಗಲು ಕಾರಣವೇನು?

ಚಿತ್ರಗುಪ್ತ:—ಸರ್ವೇಶ್ವರ! ಸತೀ ಸಾವಿತ್ರಿಯ ದಿವ್ಯಾನುಗ್ರಹದ ಶಕ್ತಿಯನ್ನು ಪಡೆದ ಭೈರವಿಯೆಂಬ ಪತಿವ್ರತೆಯೋರ್ವಳು ಪತಿಯನ್ನು ಅನುಸರಿಸಿಕೊಂಡು ಶೈಮಿನಿಯ ತಳಕವೂ ಬರುತ್ತಿದ್ದಳು. ಕುಬೇರನು ಆ

ಸಾಧ್ವಿಯನ್ನು ತಡೆದು ಭೂಮಿಯಲ್ಲಿ ಒಂದು ಬಾವಿಯಲ್ಲಿ ಮುಚ್ಚಿಸಿ ಬಿಟ್ಟಿನು

ಬ್ರಹ್ಮ-ಶಿವ.—ಅನ್ಯಾಯ! ಅನ್ಯಾಯ!

ಚಿತ್ರ:—ಈ ಅಧರ್ಮಾಚರಣೆಯ ದೋಷದಿಂದ ಅವನು ಧರ್ಮ ಸಿಂಹಾಸನದಿಂದ ಪತನನಾದನು.

ಶಿವ:—ಹಾಗಿದ್ದರೆ ಪತಿವ್ರತೆಯನ್ನು ಪೀಡಿಸಿದ ಆ ಪಾಪಿ ಪವಿತ್ರ ಪಾದ ಧನಾಧಿಕಾರಕ್ಕೂ ಅಯೋಗ್ಯನೇ ಸರಿ!

ನಾರಾ.—ಆದರೆ ಆ ಸತೀಮಣಿ ಭೈರವಿಯಲ್ಲಿ ಅವನು ಕ್ಷಮಾಪಣೆ ಕೇಳಿಕೊಂಡು, ಅವಳು ಕ್ಷಮಿಸಿದರೆ, ಅವನು ಉತ್ತರ ದಿಗ್ಪಟ್ಟದಲ್ಲಿ ಮಂಡಿಸ

ನಾರದ:-ಶ್ರೀ ಹರಿ! ಆ ಪ್ರಕಾರ ಕ್ಷಮಾಪಣೆ ಕೇಳುವಂತೆ ಹೇಳಿ ನಾನು ಕುಬೇರನನ್ನು ಭೈರವಿಯ ಬಳಿಗೆ ಕಳುಹಿಸಿದ್ದೇನೆ, ಆದರೆ ಆ ಪತಿವ್ರತೆ ತನ್ನ ಪತಿಗಾಗಿ ತುಂಬಾ ಸಾಹಸದ ತಪಸ್ಸಿನಲ್ಲಿರುವಳಾದುದರಿಂದ, ದೇವಾ! ಆ ಸಾಧ್ವಿಯ ಮನಸ್ಸಿಗೂ ಶಾಂತಿಯನ್ನೀಯಬೇಕೆಂದು ಬೇಡುತ್ತೇನೆ

ನಾರಾಯಣ:—ಆ ಸತೀಮಣಿಯನ್ನು ಶಾಂತಗೊಳಿಸುವ ಭಾರವು ಅವಳ ಪತಿಯಾದ ಭದ್ರಬಾಹುವಿಗೆ ಸೇರಲಿ. ಪಾತಿವ್ರತ್ಯದ ಪ್ರಭಾವವು ತನ್ನ ಪತಿಯನ್ನೇ ಸಾಕ್ಷಾತ್ಕರಿಸಿಕೊಳ್ಳಲಿ! ಎಲೈ ಭದ್ರಬಾಹು! (ಭದ್ರಬಾಹು ಕೈಜೋಡಿಸಿ ಮುಂದೆ ಬರುವನು) ನೀನು ಸಾಧ್ವಿಯಾದ ನಿನ್ನ ಪತ್ನಿಗೆ ದರುಶನವಿತ್ತು, ಅವಳನ್ನು ಶಾಂತಗೊಳಿಸಿ ಬರಬೇಕು, ಹಾಗು ಅವಳು ಭೂಮಿಯಲ್ಲಿರುವಷ್ಟು ಕಾಲವೂ ಅವಳ ಮನಃಚಕ್ಷುವಿಗೆ ನೀನು ಗೋಚರಿಸಿಕೊಂಡಿರು.

ಭದ್ರ:—ಪರಂಧಾಮಾ! ದಿವ್ಯಾಜ್ಞೆ!

ನಾರಾಯಣ:-ಮಗು, ಸಾವಿತ್ರಿ! ನಾವು ತ್ರಿಮೂರ್ತಿಗಳೂ ಮಾಡಿದ ಆಶೀರ್ವಾದಗಳಿಂದ ನಿನ್ನ ಸರ್ವಾಭೀಷ್ಟಗಳೂ ನಿನ್ನ ಕೈವಶವಾದುವು. ಇನ್ನು ನೀನು ಪತಿಯೊಂದಿಗೆ ಭೂಲೋಕವನ್ನು ಸೇರಿ ಆಯುಷ್ಯರಿಯಂತ ಅಲ್ಲಿಯೇ ವೈಕುಂಠಸುಖವನ್ನು ಅನುಭವಿಸಿ, ನಿಯಮಿತ ಕಾಲಾನಂತರದಲ್ಲಿ ಪತಿಯೊಡನೆ ಇಲ್ಲಿಗೆ ಬಂದು ಸೇರು!

ಸಾವಿತ್ರಿ:—ಪರಾತ್ಪರ ಪರಮಾತ್ಮ! ಸಚ್ಚಿದಾನಂದಮಯವಾದ ಈ ದಿವ್ಯಲೋಕದಿಂದ ಪುನಃ ಭೂಮಿಗೆ ತೆರಳುವಂತೆ ಅಜ್ಞಾಪಿಸಬೇಡ. ದೇವಾ! ನಾನು ಪತಿಯೊಂದಿಗೆ ಈ ದಿವ್ಯಧಾಮದಲ್ಲೇ ಇದ್ದು, ಸರ್ವದಾ ನಿನ್ನ ಚರಣ ಕಮಲಗಳನ್ನು ಪೂಜಿಸುತ್ತಿರುವಂತೆ ಅನುಗ್ರಹಿಸು!

ನಾರಾ:—ಮಾಂಗಲ್ಯರೂಪಿಣಿ! ವಿಧಿನಿಯಮವನ್ನು ಮೀರುವದು ಸಾಧ್ಯವಿಲ್ಲ; ಹಾಗು ಅದು ದೋಷವೆನಿಸುವದು. ನೀನು ಭೂಲೋಕ ದಲ್ಲಿಯೇ ಸರ್ವ ಸೌಭಾಗ್ಯಗಳೊಂದಿಗೆ ವಿರಾಜಿಸಿ, ಕರ್ಮಾಯುಷ್ಯವನ್ನು ಸತ್ಕರ್ಮಗಳಿಂದ ಕಳೆದುಕೊಂಡು ಆ ಮೇಲೆ ಇಲ್ಲಿಗೆ ಬರುವುದೇ ಸರಿಯಾದ ಮಾರ್ಗವು. ಸಾಧ್ವಿ! ನಿನ್ನ ಪವಿತ್ರವಾದ ಹೃದಯದಲ್ಲಿ ನಾನು ಸದಾ ನೆಲೆ ಸಿರುವೆನು. (ಲಕ್ಷ್ಮಿಯನ್ನು ನೋಡಿ) ಕಮಲಾ! ನಿನ್ನ ಶುಭಕರವಾದ ಕೋರಿಕೆ ಈಡೇರಿತಷ್ಟೇ? ಇನ್ನು ಈ ಪತಿವ್ರತೆಯನ್ನು ಇವಳ ಪತಿಯೊಂ ದಿಗೆ ಕಳುಹಿಸಿಕೊಡು!

ಲಕ್ಷ್ಮಿ:—ಕಾಂತಾ, ಕಳುಹಿಸಲು ಇಷ್ಟವಿಲ್ಲದಿದ್ದರೂ ವಿಧಿ ನಿಯ. ಮಾನುಸಾರವಾಗಿ ಕಳುಹಿಸಲೇಬೇಕಾಗಿದೆ. (ಸಾವಿತ್ರಿಯ ಕೈ ಹಿಡಿದು) ಶುಭಾಂಗಿ! ಬಾ! ನಿನ್ನ ಪತಿಯ ಬಳಿಯಲ್ಲಿ ಶೋಭಿಸು. (ಸಾವಿತ್ರಿಯನ್ನು ಕರೆದೊಯ್ದು ಸತ್ಯವಾನನ ಬಳಿಯಲ್ಲಿ ನಿಲ್ಲಿಸುವರು. ವಾಣೀ-ಗಿರಿಜೆ-ಸರ ಸ್ವತಿಯರು ಆ ದಂಪತಿಗಳಿಗೆ ಆರತಿಯನ್ನು ಎತ್ತುವರು.) [೪೯]

ಎಲ್ಲರೂ:—ಸಾವಿತ್ರಿ-ಸತ್ಯವಾನರಿಗೆ ಮಂಗಳವಾಗಲಿ!

---

ದೃಶ್ಯ ೨—ದಾರಿ.

(ನಾರದನೂ-ಯಮಧರ್ಮನೂ ಸಾವಿತ್ರೀ-ಸತ್ಯವಾನರೂ ಬರುವರು ಯಮನು ಕಿರೀಟಧಾರಿ.)

ನಾರದ:—[೫೦] ಯಮಧರ್ಮಾ! ಆ ಕಪಟ ನಾಟಕ ಸೂತ್ರಧಾರಿ ತನ್ನ ಮೂಲಕವಾಗಿ ಆಡಿಸಿದ ಈ ನಾಟಕವನ್ನು ನೋಡಿದಿಯಾ? ನಿನ್ನ ಧರ್ಮವನ್ನೂ ಪಾತಿವ್ರತ್ಯದ ಪ್ರಭಾವವನ್ನೂ ಕೋಟಿ ಸೂರ್ಯಪ್ರಕಾಶದಂತೆ ಬೆಳಗಿಸಿದನಲ್ಲಾ! ತಾಯಿ! ಸಾವಿತ್ರೀ, ಶ್ರೀ ವೈಕುಂಠದಿಂದ ಪತಿ ಸೌಭಾಗ್ಯ ದೊಂದಿಗೆ ತಿರುಗಿ ಬಂದಿರುವ ನೀನೇ ಧನ್ಯೆ! ನೀನೇ ಮಾನ್ಯೆ!

ಸಾವಿತ್ರಿ:—ಎಲ್ಲವೂ ಮಹಾತ್ಮರಾದ ನಿಮ್ಮ ಅನುಗ್ರಹ!

ನಾರದ:—ನಾರಾಯಣ! ನಾರಾಯಣ! ಎಲ್ಲವೂ ಅವನ ಆಟ: ಇನ್ನೀಗ ಸತೀಮಣಿಯಾದ ಭೈರವಿಯ ಉದ್ಧಾರವೊಂದು ಆಗಬೇಕು: ಅಗೋ ನೋಡು, ಕುಬೇರನು ಬಹು ಶ್ರಮಪಡುತ್ತಿರುವನು. ನಾನು ಮುಂದಾಗಿ ಹೋಗಿ ವಿಚಾರಿಸುವೆನು ನೀವು ನಿಧಾನವಾಗಿ ಹಿಂದಿನಿಂದ ಬನ್ನಿರಿ. ನಾರಾಯಣ. ನಾರಾಯಣ. (ಹೋಗುವನು.)

ಯಮ:—ಆಹಾ! ಈ ನಾರದನ ಲೀಲೆಯೇ ಲೀಲೆ!

ಸತ್ಯವಾನ:—ಲೀಲಾ ವಿನೋದದಲ್ಲಿ ಶ್ರೀಮನ್ನಾರಾಯಣನ ಕೃಪೆಯಾಳಲ್ಲವೇ ನಾರದರು?

ಯಮ:—ನಿಜ ನಿಜ ಜಯವಾಗಲಿ ನಾರದನಿಗೆ! (ಹೋಗುವರು.)

---

ದೃಶ್ಯ ೩—ಶಾಹುದಾರಿ.

(ಕುಬೇರನು ಬಂಡೆಯನ್ನು ಹಿಡಿಹಿಡಿದು ಅಲುಗಾಡಿಸುತ್ತಿರುವನು ಬಂಡೆಯ ಬುಡದಲ್ಲಿ ಭೈರವಿಯಿರುವಳು.)

ಭೈರವಿ (ಆಗಾಗ):—ಹಾ! ಪತೀ-ಭದ್ರಬಾಹು! ಭದ್ರಬಾಹು! ಪತೀ ಭದ್ರಬಾಹು!-(ಎಂದು) ಪರಮಾತ್ಮ! ನಾನು ಇನ್ನೆಷ್ಟುಕಾಲ ಈ ವಿಯೋಗ ದುಃಖವನ್ನು ಅನುಭವಿಸಲಿ? ಹೇ ಯಮಧರ್ಮ! ನನ್ನನ್ನು ಹೀಗೆ ಪೀಡಿಸುವುದರ ಬದಲಾಗಿ ನನ್ನ ಜೀವವನ್ನು ಕೊಂಡೊಯ್ಯಬಾರದೆ? ನಿನಗೆ ದಯವಿಲ್ಲವೆ? ಹಾ! ಪತೀ! ಭದ್ರಬಾಹು! ಭದ್ರಬಾಹು!

ಕುಬೇರ (ಬೆವರನ್ನು ಒರಸಿಕೊಳ್ಳುತ್ತ):—ಅಯ್ಯೋ! ನನ್ನ ಅದೃಷ್ಟ ಹೀಗಾಗಬೇಕೆ? ಈ ಬಂಡೆಗಲ್ಲು ನನ್ನ ಸರ್ವ ಶಕ್ತಿಗೂ ಮಿಂಚಿ ಹೋಯಿತಲ್ಲ! ಹಾಯ್! ಈ ಸಾಧ್ವೀಮಣಿಯ ಆರ್ತನಾದವು ನನ್ನ ಎದೆಯನ್ನೇ ಸೀಳಿ ಹಾಕುತ್ತಿದೆ! ಏನು ಮಾಡಲಿ? (ನಿಟ್ಟುಸಿರಿಡುವನು)

ನಾರದ (ಬಂದು):—ನಾರಾಯಣ! ಏನು ಕುಬೇರಾ! ಸತೀ ಭೈರವಿಯೊಡನೆ ಕ್ಷಮಾಪಣೆ ಕೇಳಿಕೊಂಡೆಯಾ?

ಕುಬೇರ:—ಸ್ವಾಮೀ! ನನಗೇನೋ ವಿಪರೀತ ಕಾಲವೇ ಸಂಭವಿಸಿತು. ಈ ಸತೀಮಣಿಯನ್ನು ಈ ಬಂಡೆಯಡಿಯಿಂದ ಬಿಡಿಸಲಿಕ್ಕೇ ನಾನು ಅಶಕ್ತನಾಗಿರಲು, ಕ್ಷಮಾಪಣೆಯನ್ನು ಹೇಗೆ ಕೇಳಲಿ?

ನಾರದ:—ಓಹೋ! ತಿಳಿಯಿತೀಗ! ನೀನು ಧರ್ಮಸಿಂಹಾಸನದಲ್ಲಿ ಮಂಡಿಸಿದ್ದಾಗ ಮಾಡಿರುವ ಆಜ್ಞೆಯಿಂದಲ್ಲವೇ ಈ ಕಲ್ಲು ಮುಚ್ಚಲ್ಪಟ್ಟಿರುವುದು?

ಕುಬೇರ:—ಹೌದು ಸ್ವಾಮಿ!

ನಾರದ:—ಹಾಗಾದರೆ ಈ ಕಲ್ಲನ್ನು ಅಲುಗಿಸಲಿಕ್ಕೂ ಆ ಧರ್ಮಪಟ್ಟಾಧಿಷ್ಠಿತ ಆಜ್ಞಾಶಕ್ತಿಯೇ ಒದಗಬೇಕಾಯಿತು! ಕುಬೇರಾ! ನೀನೀಗ ಧರ್ಮಪಟ್ಟದಿಂದ ಚ್ಯುತನಾಗಿರುವ ಕಾರಣ ನಿನ್ನ ಸಾಧನಾನ್ನು ಬರಿಕ್ಕೆ ಈ ಕಲ್ಲು ಕದಲಲಾರದು.

ಕುಬೇರ:—ಅಯ್ಯಯ್ಯೋ! ಹಾಗಾದರೆ?.. ....ನಾನು ..... ..

ನಾರದ:—ನೀನು ಕೇಳು! ಈಗ ಜೈಮಿನಿಯ ಧರ್ಮಪಟ್ಟವು ಯಮಧರ್ಮನಿಗೇ ತಿರುಗಿ ಕೊಡಲ್ಪಟ್ಟಿರುವದು. ಸತೀ ಸಾವಿತ್ರಿಯ ಚರಿತ್ರೆಯಿಂದ ಅವನು ನಿರಪರಾಧಿಯೆಂದು ಸಿದ್ಧನಾದನು. ನೀನು ಈಗ ಯಮನನ್ನು ಪ್ರಾರ್ಥಿಸಿ ಅವನಿಂದಲೇ ಭೈರವಿಯನ್ನು ವಿಮೋಚನೆಗೊಳಿಸಬೇಕು. ಅಗೋ! ನಿನ್ನ ಪುಣ್ಯವಶದಿಂದ ಸಾವಿತ್ರೀ-ಸತ್ಯವಾನರೊಂದಿಗೆ ಯಮಧರ್ಮನೇ ಇತ್ತ ಬರುತ್ತಿರುವನು. ಕುಬೇರಾ, ನೀನು ಪುಣ್ಯಶಾಲಿಯಾದುದರಿಂದಲೇ ಸತೀಸಾವಿತ್ರಿ-ಸತ್ಯವಾನರ ದರ್ಶನ ಭಾಗ್ಯವು ನಿನಗೊದಗಿತು!

(ಸಾವಿತ್ರಿ-ಸತ್ಯವಾನ-ಯಮ ಬರುವರು)

ಸತ್ಯವಾನ್:—ಕುಬೇರ ಚಕ್ರೇಶ್ವರನಿಗೆ ನಮಸ್ಕಾರವು. (ಕೈ ಮುಗಿಯುವನು. ಸಾವಿತ್ರಿಯೂ ಕೈ ಮುಗಿಯುವಳು.)

ಕುಬೇರ:-(ತಲೆವಾಗಿ ಯಮನ ಇದಿರಿನಲ್ಲಿ ನಿಂತು, ಗದ್ಗದಸ್ವರದಿಂದ) ಅಯ್ಯಾ! ಯಮಧರ್ಮಾ! ನನ್ನ ಅಪರಾಧವನ್ನು ಕ್ಷಮಿಸು

ಯಮ:—(ಕುಬೇರನ ಕೈಹಿಡಿದು) ಮಿತ್ರ-ಕುಬೇರಾ! ಹಾಗೆ ಕೇಳಬೇಡ! ನಾನು ಕ್ಷಮಿಸತಕ್ಕಂತಹುದು ಏನೂ ಇಲ್ಲ. ಎಲ್ಲಾ ಆ ಧರಸೂತ್ರನ ಆಟವು ನಾವು ಆ ಸೂತ್ರಧಾರನ ವೇಷಧಾರಿಗಳಾಗಿ ಕುಣಿದೆವು. ಅಷ್ಟೇ

ಕುಬೇರ! ಇನ್ನು ಮೇಲೆ ನಾವಿಬ್ಬರೂ ಸ್ನೇಹಿತರಾಗಿರೋಣ. (ಆಲಿಂಗಿಸು ವನು. ಬಳಿಕ ಬಂಟೆಯು ಕಲ್ಲನ್ನು ಅತ್ತ ಸರಿಸುವನು.)

ಸಾವಿತ್ರಿ (ಬಾವಿಯೊಳಗೆ ಕೈಹಾಕಿ):—ಭದ್ರೆ! ಭೈರವಿ! ನಿನ್ನ ಪತಿ ಭಕ್ತಿಗೆ ಪರಮಾತ್ಮ ಮೆಚ್ಚಿದನು. ನಿನ್ನ ಸಂಕಟವು ಇಂದಿಗೆ ಪರಿಹರಿಸಿತು. ಮೇಲೆ ಬಾ, ತಾಯಿ! (ಕೈಹಿಡಿದು ಭೈರವಿಯನ್ನು ಮೇಲೆತ್ತುವಳು.)

ಭೈರವಿ:-ಹಾ, ಇದೇನು? ಒಂದೇ ಬಾರಿಗೆ ದೇವ-ದೇವ ಮುನೀಂದ್ರರ ದರ್ಶನ!

ನಾರದ:—ಭೈರವಿ! ನಿನ್ನ ಪಾತಿವ್ರತ್ಯಕ್ಕೆ ಪರಮಾತ್ಮನು ಶ್ರೇಷ್ಠವಾದ ಪ್ರತಿಫಲವನ್ನು ಕೊಟ್ಟಿರುವನು.

ಕುಬೇರ:—(ಭೈರವಿಯ ಇದಿರಿನಲ್ಲಿ ಕೈಮುಗಿದು) ತಾಯಿ ಸತೀ ಮಣಿ! ನಿನ್ನನ್ನು ಬಾವಿಯೊಳಗೆ ಹಾಕಿ ಪೀಡಿಸಿದ ಮಹಾಪರಾಧಿಯಾದ ಈ ಕುಬೇರನನ್ನು ಕ್ಷಮಿಸು!

ಭೈರವಿ:—ನಾನೇನನ್ನು ಕ್ಷಮಿಸಲಿ? ಅಲ್ಪ ಮಾನವಿಯಾದ ನಾನು ದೇವರನ್ನು ಹೇಗೆ ಕ್ಷಮಿಸಲಿ? ಮಹಾದೇವಿಯಾದ ಈ ಸಾವಿತ್ರೀ ರಾಣಿಯ ಪುಣ್ಯಸ್ಪರ್ಶದಿಂದ ನನ್ನ ಸಕಲ ಬಾಧೆಗಳೂ ನಿವೃತ್ತಿಗೊಂಡವು. ಹೃದಯ ದಲ್ಲಿ ಏನೋ ಒಂದು ಬಗೆಯ ಆನಂದಲಹರಿಯೇಳುತ್ತಿದೆ! ಮನಸ್ಸಿನಲ್ಲಿ ಕೋಪಭಾವವಿದ್ದರಲ್ಲವೇ ಕ್ಷಮಿಸಬೇಕು!

ಕುಬೇರ:—ಆದರೂ ನಿನ್ನ ದಿವ್ಯವಾಣಿಯಿಂದ ಕ್ಷಮಿಸಿದೆನೆಂಬ ಶಬ್ದಗಳು ಹೊರಟರೆ ಮಾತ್ರವೇ ನಾನು ದೋಷ ಬಾಹಿರನಾಗುವೆನು.

ಭೈರವಿ:—ಹಾಗಾದರೆ ನಾನು ಕ್ಷಮಿಸಿರುವೆನು; ಮನಃಪೂರ್ವಕ ವಾಗಿಯೂ ಕ್ಷಮಿಸಿರುವೆನು!

ಕುಬೇರ:—ತಾಯಿ! ನನ್ನನ್ನು ಕಾಪಾಡಿದಿ! (ಕೈಮುಗಿಯುವನು.)

ಭೈರವಿ:—ನಾನೇನೂ ಅರಿಯದವಳು.

ನಾರದ:—ಸಾಧ್ವಿ! ಭೈರವಿ! ನಿನ್ನ ತೀವ್ರವಾದ ಪತಿನಿಷ್ಠೆಯ ತಪಃ ಪ್ರಭಾವದಿಂದ ನಿನ್ನ ಪತಿಗೆ ವೈಕುಂಠವು ಪ್ರಾಪ್ತವಾಯಿತು. ಪತ್ನಿಯ ಪಾವಿತ್ರ್ಯದಿಂದ ಪತಿಯ ಪಾಪವೆಲ್ಲಾ ದಗ್ಧವಾಗುವ ರೀತಿಯನ್ನು ಲೋಕ ವೆಲ್ಲಾ ನೋಡಿತು. ಅಗೋ, ನೋಡು! ಪರಮಾತ್ಮನು ನಿನ್ನ ಪತಿಯನ್ನು

ನಿನ್ನ ಬಳಿಗೆ ಕಳುಹಿಸಿದ್ದಾನೆ. ನಿನಗೆ ಸಾಕ್ಷಾತ್ಕಾರನಾಗುವ ದಿವ್ಯ ದೇಹದ ನಿನ್ನ ಪತಿಯನ್ನು ಕಣ್ತುಂಬಾ ನೋಡು!

ಭದ್ರಬಾಹು(ವಿಮಾನದಿಂದ ಕೆಳಗಿಳಿದು ಅಂತರದಲ್ಲೇ ನಿಂತು)ಆರ್ಯೆ! (ಭೈರವಿ ಕೈಮುಗಿಯುವಳು-) ದೇವಿ! ನಿನ್ನ ಪುಣ್ಯಕ್ಕೆ ಪಾರವಿಲ್ಲ. ಪಂಚ ಮಹಾಪಾತಕಗಳಿಂದ ಕಲುಷಿತನಾದ ನಾನು ನಿನ್ನ ತೀವ್ರವಾದ ತಪೋ ನಿಷ್ಠೆಯಿಂದ ವಿಷ್ಣು ಸಾಯುಜ್ಯವನ್ನು ಪಡೆದಿರುವೆನು. ಆಹಾ! ನಿನ್ನನ್ನು ಪತ್ನಿಯಾಗಿ ಪಡೆದು ಧನ್ಯನಾದೆನು. ಸಾಧ್ವಿ! ಇನ್ನು ಮೇಲೆ ನೀನು ಸಾಹಸ ಕಾರ್ಯಕ್ಕೆ ತೊಡಗಬೇಡ ಶಾಂತಿಯನ್ನು ಹೊಂದು. ಶ್ರೀ ಪರ ಮಾತ್ಮನ ಅನುಗ್ರಹದಿಂದ ನಾನು ಸರ್ವದಾ ನಿನ್ನ ಮನಸ್ಸಿನಲ್ಲಿ ಪ್ರತ್ಯಕ್ಷ ನಾಗಿರುವೆನು. ಆರ್ಯೆ! ವಿಧಿಯ ನಿಯಮವನ್ನು ಎಂದಿಗೂ ಮೀರಬಾರದು. ನೀನು ವಿಧಾತನ ನಿಯಮದಂತೆ ಕರ್ಮಭೂಮಿಯ ಶೇಷಾಯುಷ್ಯವನ್ನು ಸರಿಯಾಗಿ ಕಳೆದುಕೊಂಡು, ಆ ಮೇಲೆ ವಿಷ್ಣುಲೋಕಕ್ಕೆ ಬಂದು, ನನ್ನೊಂ ಡಿಗೆ ಸೇರುವಳಾಗು. ಇದೇ ಶ್ರೀ ಪರಮಾತ್ಮನ ಶುಭಾಜ್ಞೆ!

ಭೈರವಿ:—ಪತಿದೇವಾ! ಅನುಗ್ರಹೀತಳಾದೆನು.

ಭದ್ರ:—ನಿನಗೆ ಮಂಗಳವಾಗಲಿ!( ವಿಮಾನವು ಮೇಲೆರುವದು.)

ನಾರದ:—ಜಯ ನಾರಾಯಣ! ನಮ್ಮ ನಾಟಕವು ಮುಗಿಯಿತು. ಸಾವಿತ್ರಿ ಸತ್ಯವಾನರೆ! ನೀವಿನ್ನು ನಿರ್ವಿಘ್ನವಾಗಿ ಮಂಗಳಕರವಾಗಿ ರಾಜ್ಯ ಭಾರ ಮಾಡಿಕೊಂಡಿರಿ! ನಾನಿನ್ನು ನನ್ನ ಕೆಲಸಕ್ಕೆ ಹೋಗುವೆನು. ಯಮ ಧರ್ಮಾ! ಕುಬೇರಾ! ನೀವುಗಳೂ. ಪರಸ್ಪರ ಸ್ನೇಹಿತರಾಗಿ ನಿಮ್ಮ ನಿಮ್ಮ ಸ್ಥಾನಕ್ಕೆ ತೆರಳಬಹುದಲ್ಲ!

ಯಮ-ಕುಬೇರ:—ಇದೋ ಹೊರಟೆವು. ಸಾವಿತ್ರಿ-ಸತ್ಯವಾನರಿಗೆ ಶುಭವಾಗಲಿ![೫೧]

ನಾರದ:—ಜಯ ನಾರಾಯಣ! ನಾರಾಯಣ! (ಹೋಗುವನು.)

(ಎಲ್ಲರೂ ಹೋಗುವರು)

"ಕನ್ನಡ ಜಿಲ್ಲೆ ಒಂದಾಗಲಿ!"

# ಉತ್ತರ ಸಾವಿತ್ರಿ ನಾಟಕದ ಹಾಡುಗಳು.

[೧] (ನಾರದ) ಶ್ರೀಲಕ್ಷ್ಮೀವರ। ಪರಾತ್ಪರಾ ಜಯ। ಪಯೋಂಬು ನಿಧಿ ಭವನ॥ ತ್ರೈಲೋಕೇಶ್ವರ। ತ್ರಿಮೂರ್ತಿರೂಪಾ। ಚಿದಾನಂದ ಸದನಾ॥೧॥ ಶಂಖಚಕ್ರಗದಾ-ಪದ್ಮಧರಾ ಜಯ। ಪಂಕಜದಳನಯನಾ॥ಸಂಕಟಹರಣಾ। ಸುಗಣಾಭರಣಾ॥ ಶಂಕರನತ। ಚರಣಾ ॥೨॥ ಭುಜಂಗಶಯನ। ಖಗೇಂದ್ರ ಗಮನ। ಗಜೇಂದ್ರವರದಾತ। ಶ್ರೀಜಗನ್ಮೋಹನ। ರೂಪಾಕಾರಾ। ಸುರಾಧಿ ಪತಿವಿನುತ॥೩॥

[೨] ಕಂದ॥ (ನಾರದ) ಸುರರಿಗೆ ವರಮುನಿಗಳಿಗುಂ। ಬರುವುದಕಿನು ಕುಲಭವಲ್ಲ-ನಿನ್ನ [illegible]ದಿಂ॥ ಗರುಡನು-ಹನುಮನು ನಾನುಂ। [illegible]ಬಲ್ಲೆವು ಮತ್ರ್ಯ[illegible] [illegible]ರುವಳಪೆಂತು! ॥೧॥

[೩] (ನಾರದ) ಕಂದ॥ ಶ್ರೀಲಕ್ಷ್ಮೀಧವಪರಿಪರಿ। ಲೀಲಾಪ್ರಿಯ-ನಿನ್ನ [illegible] ॥ ಲೀಲೆಯನಾಡಿಸಿ ಸದ್ಗುಣ। ಶೀಲವ ಬೆಳಗಿಸುವೆ ದೇವ-ಶಾಂತ ಸುಮೂರ್ತೀ ॥ ೧ ॥

[೪] (ಭದ್ರಬಾಹು) (ಏಕತಾಳ)ಬ-ಬ್ಬಾರೆ। ಸುಂದರಿ। ಭಾರಲೀ ಮ। ನೋಹರೀ॥ ಬ-ಬ್ಬಾರೆ। ಸೈರಿಸೇ। ಮಾರತಾಪವಾ ॥ಪಲ್ಲವಿ॥ ನಿನ್ನ ನೋಡಿ। ಓಡಿ ಬಂದೆ। ನಿಂತೂ ಮಾ-ತಾಡೆಲೇ। ಕೋಪವೇಕೆ-ಎನ್ನೊಳು। ಕೋಮಲಾಂ--ಗಿಯೇ ॥ ಬಾರೇ--ನೀರೇ-ನರಗಿಣಿಯೇ। ತಾಳಾಲಾರೆ ಗುಣಮಣಿಯೆ। ಸಾರ-ಸಾಕ್ಷಿ-ಯೇ-ನಿನ್ನ। ಸೇರಿ-ಕೊಂಬೆ-ನೇ ॥ ಮಾರ-ಸುಂದ-ರಾಂಗಿ-ನಿನ್ನ-ಸೇರಿ ಸುಖೀ-ಸೂವೆ-ಬಾರೆ-॥

[೫] (ನಾರದ) ನಾರಾಯಣ ಗೋ-ವಿಂದ ಜಯ ಜಯ। ಪರಶರ ಪರಮಾನಂದ ॥ ಪಲ್ಲವಿ ॥ ಮಧುಕೈಟಭಹರ। ಮನ್ಮಥ ಜನಕಾ।ಗಂಗಾ ಪಾದಪುನೀತ-ಜಯ ಜಯ ॥೧॥

[೬] (ನಾರದ) ಗಾನವಿಲೋಲಾ । ತುಲಸೀ ಮಾಲಾ । ಮಾಯಾಜಾಲ ವಿನೋದ ಜಯ ಜಯ ॥ ೧ ॥

[೭] (ಸಾವಿತ್ರಿ) ಕಂದ ॥ ನಿರ್ಮಲರಿಂಗೆ ಸೌಮ್ಯಾ ದುಷ್ಕರ್ಮಿಗಳಿಗೆ ಘೋರ ರೂಪಿ-ಕಾಲಾಂತಕನೇ ॥ ಧರ್ಮಾಧೀಶ್ವರ ಮರ್ತ್ಯರ ಕರ್ಮಕೆ ಫಲವೀವ ದೇವ-ನಮೋನಮಸ್ತೆ ॥ ೧ ॥

[೮] (ನಾರದ) ಹರಿ ನಾರಾಯಣ। ದುರಿತ ನಿವಾರಣ। ಹರಿ ಸರ್ವೋತ್ತಮ ದೇವ-ಜಯ ಜಯ ನಾರಾಯಣ ಗೋವಿಂದ || ೨ ||

[೯] (ನಾರದ) ಕಂದ॥ ಯಮನಂ ಜಯಿಸಿದ ನಿನ್ನನು । ಕಮಲೋದರ ದೇವ ಮೆಚ್ಚಿಕೊಂಡಾಡುವನಾ॥ ಕಮಲಜೆ ನಿನ್ನಾಲಿಂಗನ। ಭ್ರಮೆಯಿಂ ಪಿಡಿದಿಹಳು-ಮಾನ್ಯೆ-ಪ್ರಮದಾಮಣಿಯೆ ॥ ೧ ॥

[೧೦] (ನಾರದ) ಸಜ್ಜನ ಪೋಷಕ-ದುರ್ಜನ-ನಾಶಕ ॥ ಶುದ್ಧ ಹೃದಯ ಸಂತೋಷಕಾಜಯ॥ ನಾರಾಯಣ ಗೋವಿಂದ ಜಯ-॥ ೪ ॥

[೧೧] (ನಾರದ) ನಾರಾಯಣ ಲಕ್ಷ್ಮೀಶ ಜಯ ಜಯ ॥ ನರರಕ್ಷಕರಗೋವಿಂದ ॥ ೫ ॥

[೧೨] (ನಾರದ)ತಾಳದಿ ಪಾಡುತ । ತಂಬೂರಿ ಬಾರಿಸಿ । ತಲೆಯೊಲಿದೊಲಿಯುವ ದೇವ-ಜಯ ಜಯ ॥ ನಾರಾಯಣ ಗೋವಿಂದ ॥ ೬ ॥

[೧೩] (ಸ್ತುತಿಪಾಠಕರು) ವೃತ್ತ ॥ ಜಯ ಜಯ ಸುರಲೋಕಾಧೀಶ-ದಿಕ್ಪಾಲನಾಥಾ । ಜಯ ಸುರಗಣಮೌಳೀ-ಮೇಘ ಪಾಲಾ-ಸುಶೀಲಾ ॥ ಜಯ-ಜಯತು ಸುಧರ್ಮಾ ಧರ್ಮಸಿಂಹಾಸನೇಂದ್ರಾ । ಜಯ ಶತಕ್ರತು ವಜ್ರೀ ವಿಷ್ಣುಪಾದಾಬ್ಜಭೃಂಗ ॥ ೧ ॥

[೧೪] (ನಾರದ) ಕಂದ ॥ ಸುರನಾಥನ ಶಂಕರನಂ । ಸರಸಿಜ ಸಂಭವನ ಸಕಲ ಜೀವಂಗಳನುಂ ॥ ಪೊರೆಯುವ ಧೀರನ ದೋರ್ವನೆ । ಸಿರಿದೇವಿಯ ರಮಣ ರಾಜ ವೈಕುಂಠೇಶಂ ॥ ೧ ॥

[೧೫] (ಕುಬೇರ) ಕಂದ || ನಾರಿಯ ಮಾತಿಗೆ ಸೋಲುತ | ಕೋಂಡುದಂ ಕೊಟ್ಟು ಬಂದೆ ಕೈಲಾಗದ ವೋಲ್ || ಆರಯ್ಯಲದಂ ಧರ್ಮದ ಪೂರಿರ್ಪೆಯ್ ಜಂಬವೇಕೆ? ಬ್ರಹ್ಮದ್ರೋಹಿ || ೧ ||

[೧೬] (ನಾರದ) ಪ್ರಕೃತಿಯ ಸೇರುತ| ವಿಕೃತಿಯ ಗಯ್ಸುತ|| ಸುಕೃತಿಯ ಕಾವ ಕೃಪಾಳು-ಜಯ ಜಯ || ನಾರಾಯಣ ಗೋವಿಂ || ೭ ||

[೧೭] (ನಾರದ) ಕಂದ || ಸೃಷ್ಟಿಸ್ಥಿತಿಲಯಕಾರಣ| ಶಿಷ್ಟರ ದುಃಖಾಪಹಾರಿ ಶೌರಿ [illegible]|| ಕಷ್ಟನಿವಾರಣ ಭಕ್ತರ| ದೃಷ್ಟಿಗೆ ಪ್ರತ್ಯಕ್ಷ ಮೂರ್ತಿ ಮಂಗಳಕೀರ್ತಿ || ೧ ||

[೧೮] (ನಾರದ) ಹರಿನಾರಾಯಣ-ಸಿರಿನಾರಾಯಣ| ಸರ್ವೋತ್ತಮ ಸಮವೀಕ್ಷಣಾ ಜಯ || ನಾರಾಯಣ ಗೋವಿಂದ || ೮ ||

[೧೯] (ನಾರದ) ಕಂದ || ಕನಸಲ್ಲಂ ನಿಜನಂಬಿದು | ವನಿತಾಮಣಿ ನಿನ್ನ ಸತಿಯ ಧರ್ಮಕೆ ಮೆಚ್ಚೀ || ಇನಿಯನ ಪಡೆಯುವ ಪಥವೊಂ| ದನು ತೋರಲು ಬಂದೆನೀಗ ತೊರೆಮನದಳಲಂ || ೧ ||

[೨೦] (ನಾರದ) ಕಂದ || ದಿನಕರನಿಗು ಚಂದ್ರನಿಗುಂ | ದಿನಕಿರುಳಾಗು ಧರ್ಮಗಳಿಗೂ ಪರಮಾತ್ಮನಿಗುಂ || ವನಿತಾ ಪಾತಿವ್ರತ್ಯಕು ಮಿನಿತುಂ ಭೇದಂಗಳಿಲ್ಲ-ತೊರೆಮನದಳಲಂ || ೧ ||

[೨೧] (ನಾರದ) ಸತ್ಯಪಾಲನಾ-ಘನಾ | ಸಾಧು ಶೀಲನೆ || ಪಲ್ಲವಿ || ಮುಕ್ತಿಗೊಯಿದು--ಕರಿಯ ಕಾಯಿದೇ-ಘನಾ- || ಅನು || ಸರ್ವಶಕ್ತನೇ-ದೇವನೇ-ಸರ್ವಲೋಕ ಸಾಕ್ಷಿಯೇ || ಸತ್ಯಮೂರ್ತಿ-ಶಾಂತರೂಪ-ನೇ-ರಮೇಶನೇ-ಘನಾ-|| ೧ ||

[೨೨] (ಭೈರವಿ)-ಕಂದ || ದೇವಿ ಪಮಾಮಾಯು | ತಾಯೇ | ಸಾವಿತ್ರಿಯೆ ನಿನ್ನ ಪುಣ್ಯ ಪದರಜವೆನ್ನಂ || ಶಾಪ್ರತೆ ನೀಕ್ಷ್ಯಂರಕ್ಷಿಸಿ | ಯಾವ್ವೆವ ಕ್ಷತವ ದಯವ ನೀಡಿಸಲೆನಗೆ || ೧ ||

[೨೩] (ಸರಸ್ವತಿ) (ದಾಟಿ:—ಕೃಪಸು ಸುಡಗುವೇಲರಾ) ಎಂಬಂತೆ ಪರನೇ-ಪದಮ ಜಾತನೇ-|| ಪಲ್ಲ | ಪರವೇ-ದಗಳವಮೂ-ಲ ಸುಮುಖಾ ಪರಮಾಗಮರೂ-ಪನೆ-ಚಾತುರ್ಮುಖಾ || ಅನು ಪಲ್ಲವಿ || ನಿತ್ಯತಪಸ್ವಿ ಸಂ-ತತ ಶಾಂತಿಯಾ | ನಿಖಿಳಲೋಕ ಜನಕ ಶ್ರೀಶ ತನಯಾ || ವೇದಾಂಗ ಚತುರ್ವೇದ ಸಂಗ್ರಹಣಾ | ವರಸುತಚರಣಾ | ಸುಮನಾ-ಸುಘನಾ || ೧ ||

[೨೪] (ನಾರದ)ಕಂದ|| ಜಯ ಬ್ರಹ್ಮಾಂಡದ ತಾತನೆ| ಜಯಜನಕನೆ ಸೃಷ್ಟಿಕರ್ತ ಜಯ ವಾಗೀಶಾ || ಜಯ ಪದ್ಮೋದರ ಸಂಭವ || ಜಯ ಪದ್ಮಾಸನ ಚತುರ್ಮುಖಾಗಮ ಕರ್ತಾ || ೧ ||

[೨೫] (ನಾರದ) ಏರಚೌಪದಿ || ಮಕ್ಕಳಿಲ್ಲದ ಮಂಪಮಕ್ಕಳ ಮಕ್ಕಳುಮಂದು | ದುಃಖಿಸಿ ತಪಿಸಿ ದೊಡ್ಡ ತಪಸು ಮಾಡಿ || ಮಕ್ಕಳನು ಪಡೆ... ...ರುಗುತಿರಲೀ ಯಮನು| ಮಕ್ಕಳೆನಿತನು ಕೊ... ...ಗೆ ನೋಡ || ೧||

[೨೬]-(ನಾರದ) ಮಂಗಳಗಾತ್ರಾ | ಮಾಧವ ಭೂ... ...ಧು ಸೂದನ ಮಾಂವೈರಿಜಯಜಯ ||೯|| ನಾರಾಯಣ ಗೋ——||

[೨೭] (ನಾರದ) ಹರಿಹರಿ ಮುಕುಂದಾ| ವಿಮಲವೈಕುಂಠ... ...ಮಾತ ದಯಾಸಾಂದ್ರಾನಂದಾ ||ಪಲ್ಲಾ|| ಪರಿಪರಿಮಾಯಾ ಲೀಲಾ ವಿನೋದ || ಪರಮ ಪುನೀತಪಾದಾ ||ಅನು ಪಲ್ಲ||

[೨೮]-(ನಾರದ)· ನೀರಜನೇತ್ರಾ| ನಿರ್ಮಲಪಾತ್ರಾ| ನೀಲಘನವರ್ಣ ಗಾತ್ರಾ| ಸುಚಿತ್ರಾ| ನೀಲ್ರಸುವರ್ಣಗಾತ್ರಾ ... ...ಚಾಂಬಕ... ...ತಿ-ವಾರಿಜ ಸುತಪಿತ| ವನಜಭನಾಂಡ-ವಿನುತ ||೧|| ಹ... ...ಕುಂದಾ| ವಿಮಲ-||

[೨೯] (ನಾರದ) ನಾರಾಯಣ ಶ್ರೀ... ...ಜಯಜಯ| ಪರತರ ಪರಮಾನಂದ ||

[೩೦] (ನಾರದ) ಭಕ್ತಮಾ-ನಸಪಯುರಿ--ಗೌರೀ!--ಭಕ್ತಮಾನಸ ವಿಹಾರೀ || ಪಲ್ಲವಿ || ಮುಕ್ತಿಯ ನೀನೆ-ಉ-ದಾರೀ—|| ಭಕ್ತ || ಅನು ೬

[೩೧] (ನಾರದ) ಕಂದ || ಹರಶಿವಶಂಕರಗಂಗಾ | ಧರಪನ್ನಗಧಾರಿ ಚಂದ್ರಚೂಡ ತ್ರಿನೇತ್ರಾ | ಪರಮೇಶ್ವರ ಹರಿಮಿತ್ರಾ | ಹರಿಗುಣ ಭೇದ್ಯೈಕ ರೂಪ ದೇವ ನಮಸ್ತೆ || (ವಂದಿಸುವನು)

[೩೨] (ನಾರದ) ನಿತ್ಯಾನಂದನೆ | ನಿತ್ಯೋಲ್ಲಾಸನೆ | ಸ್ತುತ್ಯ-ಚರಿತ ಚರಣಾ-ನಾರಾಯಣ | ಭಕ್ತಮಾ-ನಸ ವಿ-ಹಾರೀ || ೧ ||

[೩೩] (ನಾರದ) ಅಸುರರಕಾಲಾ| ಅಜಾಮಿಳಪಾಲಾ| ಆಶ್ರಿತಲೋಲ ಸುಶೀಲನೇಜಯ || ನಾರಾಯಣ ಗೋ || ೧೦ ||

[೩೪] (ನಾರದ)ಕರಿವರದನೆಜಯ-ಕಮಲಾಕರಜಯ ಕಪಟನಾಟಕ ಸೂತ್ರಧಾರಿ ಜಯಜಯ || ನಾರಾಯಣ ಗೊ—|| ೧೧ ||

[೩೫] (ಕುಬೇರ-ಯಕ್ಷಸೈನಿಕರು) ಜೈಕುಬೇರ | ಧರ್ಮರಾಜ| ಜೈ-ಜೈ-ಜೈ || ಪಲ್ಲ || ಕಾಲನಗರಿ ನನ್ನದಾಯ್ತು ಭಲೆಭಾಪುರೇ | ಕಾಲನನ್ನು ಮೆಟ್ಟಿ ಕುಳಿತು ಮೆರೆವೆನಾನುರೇ ಕಾಲಕಾಲನೆಂಬ ಬಿರುದು ಬಂತಲೇ ಭಲೇ| ಮ| ಹಾಲಕಪುರೀಶನೀಗ ಧರ್ಮರಾಜಲೇ||—ಭಲೇ-ಭಲೇ-ಭಲೆ| ಭಲೇ | ಭಲೇ | ಭಲೇ| ||ಜೈ ಕುಬೇರ ||

[೩೬] (ಸೈನಿಕರು) ಕಂದ || ಧರ್ಮಾಸೀನನಗೆ ದೇವಗೆ | ಧರ್ಮಾತ್ಮಗೆ ಧರ್ಮರೂಪ ಯಮಧರ್ಮಂಗೆ || ಧರ್ಮೇಶಗೆ ದಂಡೇಶಗೆ | ನಿರ್ಮಲ ವೈವಸ್ವತಂಗೆ ಜಯಜಯ ನಿರುತ||೧||

[೩೭] (ಕುಬೇರ) ಕಂದ| | ಇಳಿಧರ್ಮಾಸನದಿಂ ಕೆಳ | ಗಿಳಿಸೈಮಿಸಿ ಯಮಾಧಿಪತ್ಯ ದೀಮದನದೆಲ್ಲಂ || ಇಳಿಯಲಿದ್ರೋಹಿಯೆ ಜವದಿಂ| ದಿಳಿಯೆ ಪದವಿಯನು ತೊರೆದು ತೊಲಗೈ ತೊಲಗೈ||೧||

[೩೮] (ಯಮ) ವೀರಚೌ || ಹೇ ಧರ್ಮ ಪೀಠವೇ | ಹೇ ಧರ್ಮ ದಂಡವೇ | ಹೇ ಮೃತ್ಯುವೆ ಕಾಲ ಪಾಶಂಗಳೇ || ಹೇ ಚಿತ್ರಗುಪ್ತಾದಿ ಗೆಳೆಯರೇ-ದೂತರೇ | ಹೋಗುವೆನು ನಾಂ ಬೀಳುಕೊಂಡೀಗಳೇ || ೧ ||

[೩೯] ನಾರದ | ಕಂದ || ಲೀಲೆಯ ನೇನೆಂಬೆನಹಾ | ಕಾಲನ ಲೀಲೆಯನು ತಿಳಿಯುಲಾರಿಂಗೆ ಸಾಧ್ಯಂ?|| ಕಾಲಾಂತಕನನೆ ಪಿಡಿಯುತೆ| ಲೀಲೆಯು ಸಾಧಿಸುವ ಕಾಲದೇವ ನಮಸ್ತೆ || ೧ ||

[೪೦] (ಸಾವಿತ್ರಿ) ಕಂದ | ತೊರೆದೆನೆ ಪ್ರಾಣೇಶನ ಹಾ! | ಹರಿಹರಿಯೇ ಧರ್ಮದೇವನಿತ್ತಿಹ ವರಗಳ್ || ಮರಳಿದುವೇ ಅಕಟಕಟಾ | ಅರಿಯದೆ-ಏಂ ಪಾಪ ಗೈದೆ ನಾಂ ಪರಮಾತ್ಮಾ! || ೧ ||

[೪೧] (ನಾರದ) ಕಂದ || ಧರ್ಮಾತ್ಮರು ಧೀರರು ತಾವ್ | ಧರ್ಮಪರೀಕ್ಷೆಯು ಸುಯೋಗಕಂಜುವದುಂಟೆ? || ನಿರ್ಮಲ ಪಾತಿವ್ರತ್ಯದ | ಧರ್ಮಕೆ ದಿವ್ಯಪ್ರಕಾಶವೀವಂ ದೇವಂ || ೧ ||

[೪೨] ನಾರದ:— (ಮಾಂಡು—ಅದಿ ತಾಳ) ಶ್ರೀ ಪುರುಷೋತ್ತಮ | ಕರುಣಾ ಭರಣಾ | ಶೇಷ ಶಯನ ವರ | ಲಕ್ಷ್ಮೀರಮಣಾ || ಪ || ಸಂಸಾರಾರ್ಣವ | ದುಃಖೋದ್ಧಾರಣ | ಚಕ್ರಾಯುಧ ಸರ | ನೀರುಜ ಚರಣ || ೧ ||

[೪೩] (ನಾರದ) ಗಂಗಾಪಿತನೇ | ತ್ರಿಲೋಕವಂದ್ಯನೆ || ಕೋಮಳ ಮನಸಾ-ಶಾಮಳ ವರ್ಣಾ || ೨ || ಶ್ರೀ ಪುರುಷೋತ್ತಮ-|

[೪೪] (ಸಾವಿತ್ರಿ) ಕಂದ || ಹರಿಪಾದೋದಕೆ ಪಾವನೆ | ಸುರ-ಭೂ-ಪಾತಾಳಲೋಕ ಪುಣ್ಯಪ್ರವಾಹೇ! | ಶರಣಾಗತೆ ಯಾದೆನಂ | ವರಸಿರಿವೈಕುಂಠಕೊಯ್ಯೆ-| ಗಂಗಾ ಜನನಿ || ೧||

[೪೫] (ಇಂದ್ರಾದಿಗಳು) (ಭಜನೆ:—)ಹರಿನಾರಾಯಣ-ಶೌರೀ |-ಶ್ರೀಧರ | ಹರಿ-||ಪ|| ಸುರಮುನಿವರಗಣ ಸೇವಿತ ಚರಣಾ|| ಹರಿ-||ಅ ನು||

[೪೬] (ಸತ್ಯವಾನ್) ಕಂದ | ಸಂತತ ಶಾಂತಿಯು ಸದನಂ | ಚಿಂತಾಸಂತಾಪಹಾರಿ ಹರಿಯ ನಿಧಾನಂ || ಸಂತಸದೆರೆಗಳ ಕಡಲಿದ | ನಂತಂ ವೈಕುಂಠ ಸಚ್ಚಿದಾನಂದಮಯಂ || ೧ ||

[೪೭] (ನಾರದಾದಿಗಳು) ಅಚ್ಯುತಾನಂತ-ಮುರಹರ-ಮುಕುಂದ ‖ ಅಂಬುಜ ಲೋಚನ-ನಿತ್ಯಾನಂದ ‖ ೩ ‖ ಶ್ರೀ ಪುರುಷೋತ್ತಮ—‖ಅದ್ಭುತ ಚರಿತಾ-ವಿನುತ ಮಹಾಕಥ-ಸುರ ನರ ಉರಗೇಂದ್ರ ಸೇವಿತಪಾದಾ ‖ ೪ ‖ ಶ್ರೀ ಪುರು ‖

[೪೮] (ಸಾವಿತ್ರಿ) ಶ್ಲೋ ‖ ಶಾಂತಾಕಾರಂ ಭುಜಗ ಶಯನಂ-ಪದ್ಮನಾಭಂ ಸುರೇಶಂ ‖ ವಿಶ್ವಾಧಾರಂ ಗಗನ ಸದೃಶಂ-ಮೇಘವರ್ಣಂ-ಶುಭಾಂಗಂ ಲಕ್ಷ್ಮೀಕಾಂತಂ-ಕಮಲನಯನಂ । ಯೋಗಿಹೃದ್ಧ್ಯಾನಗಮ್ಯಂ । ವಂದೇ ವಿಷ್ಣುಂ ಭವಭಯ ಹರಂ ಸರ್ವಲೋಕೈಕನಾಥಂ ‖

(೪೯) ವಾಣಿ:—ಕಂದ ‖ ಜಯಮಂಗಳಸಾವಿತ್ರಿಗೆ|

ಗಿರಜೆ:—ಜಯಮಂಗಳ ಸತ್ಯವಾನ-ಚಕ್ರೇಶನಿಗೆ‖

ಪಾರ್ವತಿಕೂಡ ಮೂವರು:—ಜಯ ಪುಣ್ಯದಂಪತಿಗಳಿಗೆ | ಜಯ ಪಾತಿವ್ರತ್ಯಕೆಜಯ ಮಂಗಳಮನಿಶಂ‖

[೫೦] (ನಾರದ) ಅನಂತಶಯನಾ । ಅನಂತಸುಗುಣಾ । ಅನಂತ ವಿನೋದ ನಾಟಕ ರಚನಾ ‖೧‖ ನಾರಾಯಣ । ಗೋವಿಂದ ‖

[೫೧] (ಯಮ-ನಾರದರು) ಕಂದ ‖ ಮಂಗಳಸಾವಿತ್ರಿಗೆ ಜಯ । ಮಂಗಳ ಭೈರವಿಗೆ-ಸುಜನ ದಂಪತಿಗಳಿಗೆ ।। ಮಂಗಳ ಪಾತಿವ್ರತ್ಯಕೆ ‖ ಮಂಗಳ ರಂಗಸ್ಥಳಂಗೆ ಮಂಗಳಮನಿಶಂ ‖

ಭರತವಾಕ್ಯಂ ‖ ಕಂದ ‖ ಮಳೆಗರೆಯುಲಿ ತತ್ಕಾಲಕೆ । ನೆಲ ಬೆಳೆಯುಲಿ ಸಸ್ಯಶೋಭೆಯಿಂದಂ—ರಾಜರ್ ‖ ನೆಲೆನಲಿ ಧರ್ಮದಿ! ಕವಿಗಳ । ಕಲೆ ಬೆಳಗಲಿ ಕರುಣಾ ಮೂರ್ತಿದೇವನ ದಯದಿಂ ‖

‖ ಕನ್ನಡಚೆನ್ನುಡಿ ಉನ್ನತಿಗೇರಲಿ ‖

★

## ಶ್ರೀ ಶೇಷಾಚಲ ಗ್ರಂಥಮಾಲೆಯ ನಿಯಮಗಳು

# ಕಾಯಂ ಗ್ರಾಹಕರಿಗಾಗಿ

೧) ಎರಡು ರೂಪಾಯಿ ಪ್ರವೇಶ ಫೀ ಕಳುಹಿಸಿದವರು ಕಾಯಂ ಗ್ರಾಹಕರು. ಇವರಿಗೆ ಗ್ರಂಥಮಾಲೆಯ ಎಲ್ಲ ಹೊಸ ಪುಸ್ತಕಗಳನ್ನು ಮುಕ್ಕಾಲು ಬೆಲೆ ಮತ್ತು ಅಂಚೆ ವೆಚ್ಚ (ಪೋಸ್ಟೇಜು ಮತ್ತು ರಿಜಿಸ್ಟ್ರೇಶನ್ ಚಾರ್ಜ) ಇವುಗಳಿಗೆ ವ್ಹಿ. ಪಿ. ಮೂಲಕ ಕಳಿಸುವೆವು.

೨) ವರ್ಷದಲ್ಲಿ ಎರಡುಸಾರೆ ಹೊಸ ಪುಸ್ತಕಗಳು ಹೊರಡುವವು. ಪ್ರತಿ ಸಾರೆಯೂ ಎರಡಕ್ಕಿಂತ ಕಡಿಮೆ ಪುಸ್ತಕಗಳು ಹೊರಡಲಾರವು. ಪುಸ್ತಕಗಳನ್ನು ವ್ಹಿ. ಪಿ. ಮೂಲಕ ಕಳಿಸುವ ಮೊದಲು ಕಾಯಂ ಗ್ರಾಹಕರಿಗೆ ಸೂಚನಾ ಪತ್ರಗಳು ಕಳಿಸಲಾಗುವವು.

೩) ಎಲ್ಲ ಕಾಯಂ ಗ್ರಾಹಕರೂ ಎಲ್ಲ ಹೊಸ ಪುಸ್ತಕಗಳ ವ್ಹಿ.ಪಿ. ಸ್ವೀಕರಿಸಲೇಬೇಕು. ಯಾರು ವಾಪಸ ಬಿಡುವರೋ, ಅವರ ಪ್ರವೇಶ ಧನವನ್ನು ವಾಪಸು ಕೊಡೆವು, ಮುಂದೆ ಅವರಿಗೆ ಗ್ರಂಥಮಾಲೆಯ ಪುಸ್ತಕಗಳನ್ನು ಮುಕ್ಕಾಲುಬೆಲೆಗೆ ಕೊಡಲಾರೆವು.

೪) ಕಾಯಂ ಗ್ರಾಹಕರಿಗೆ ಅವರು ಅಪೇಕ್ಷಿಸಿದರೆ ಹೊಸ ಪುಸ್ತಕಗಳ ಸಂಗಡ ನಮ್ಮಲ್ಲಿ ಸಿಲ್ಕು ಇರುವ ನಮ್ಮ ಬೇರೆ ಪುಸ್ತಕಗಳನ್ನು ಅಂಚೆ ವೆಚ್ಚವಿಲ್ಲದೆ ಕೇವಲ ತೋರ ಬೆಲೆಗೇ ಕಳಿಸುವೆವು

# ಇತರ ಗ್ರಾಹಕರಿಗಾಗಿ

೧) ನಮ್ಮಲ್ಲಿ ಇಂದಿಗೆ ಸಿಗುವ ಪುಸ್ತಕಗಳನ್ನು ಬೇಡುವವರು ಕಾಲು ಬೆಲೆ ಅಡ್ವಾನ್ಸ ಕಳಿಸಿಯೇ ವ್ಹಿ. ಪಿ ಯಿಂದ ಬೇಡತಕ್ಕದ್ದು.

೨) ಎಷ್ಟೋ ಜನ ಪುಸ್ತಕ ಬೇಡುವವರು ವ್ಹಿ. ಪಿ. ತರಿಸಿಕೊಂಡು ವಾಪಸ ಬಿಟ್ಟು ನಮಗೆ ಹಾನಿ ಮಾಡುತ್ತಿರುವದರಿಂದ ಅಡ್ವಾನ್ಸ ಇಲ್ಲದ ಬೇಡಿಕೆಗಳತ್ತ ಗಮನವೀಯಲಾರೆವು

೩ ಎಲ್ಲ ಗ್ರಾಹಕರಿಗೂ ೧ ರೂ ಗೆ ಒಂದು ಆಣೆಯಂತೆ ಕಮಿಶನ್ ಕೊಡುವೆವು. ಪುಸ್ತಕಗಳ ಬೆಲೆಯು ಹೊರತು ಪೋಸ್ಟೇಜ ರಿಜಿಸ್ಟ್ರೇಶನ ಚಾರ್ಜು ಪ್ರತ್ಯೇಕ ಬೀಳುವದು.

ಬಿ. ಪಿ. ಕಾಳೆ.

೪೨ ವರ್ಷಗಳಿಂದಲೂ ಸಂತತ ಪ್ರಕಟವಾಗುತ್ತಿರುವ

## ಸದ್ಬೋಧ ಚಂದ್ರಿಕೆ

(ತಿಳಿಗನ್ನಡ ಮಾಸಪತ್ರಿಕೆ)

ಇವರಲ್ಲಿ ಧಾರ್ಮಿಕ, ಐತಿಹಾಸಿಕ, ಸಾಮಾಜಿಕ, ಲೇಖ-ಕಥೆ-ಕಾದಂಬರಿ ಗಳೂ ಚರಿತ್ರೆಗಳೂ ಪ್ರಕಟಿಸಲ್ಪಡುತ್ತಿರುವವು. ವಾರ್ಷಿಕ ಚಂದಾ ೩ ರೂ, ಬೇಗನೆ ಚಂದಾದಾರರಾಗಿರಿ.

ಮ್ಯಾನೇಜರ, ಸದ್ಬೋಧ ಚಂದ್ರಿಕೆ
ಪೋ. ಆನಂದವನ (ಹಾವೇರಿ)

---

## ವಿಕಟವಿನೋದಿನಿ

ಅರಳೇಪೇಟೆ ಬೆಂಗಳೂರುಸಿಟಿ

ಹಾಸ್ಯರಸಪ್ರಧಾನವಾದ ಚಿಕ್ಕ-ಚಿಕ್ಕ ಲೇಖಗಳಿಂದ ಪ್ರತಿ ತಿಂಗಳು ... ... ... ...ಗೊಳ್ಳುತ್ತಿರುವ ಮಾಸಪತ್ರಿಕೆ. ಬಿಡಿಸಂಚಿಕೆ ೨ ಆಣೆ

---

## ಅಂಬಿಕೆ

ಅತ್ಯುತ್ತಮ ಪತ್ತೇದಾರಿ ಕಾದಂಬರಿಯು ೩ನೇ ಮುದ್ರಣದ ಪುಸ್ತಕಗಳು ೧೫ನೇ ಸಪ್ಟಂಬರದಲ್ಲಿ ದೊರೆಯುವ

ಬೆಲೆ ೨-೪-೦ ಅಂಚೆವೆಚ್ಚ ೦-೫-೦ ಬಿ. ಪಿ. ಕಾಳೆ, ಮದಿಯಾಳ-ಧಾರವಾಡ

---

## ನಮ್ಮ ಕೆಲ ಉತ್ತಮ ಪುಸ್ತಕಗಳು.

ಇಂದುಮುಖಿ ೧-೪-೦ ಕಳ್ಳನಿಗೆ ಕಾಣಿಕೆ ೧-೪-೦ ಕೃತಕ ಕೈದಿಗಳು ೨ ರೂ ಕಾಲಸರ್ಪ ೨-೮-೦ ನನ್ನ ಗತಿ ೧೨ ಆ. ನರಹರಿ ೩ ರೂ. ನಿಗೂಢ ಕೊಲೆ ೧ ರೂ ಪತ್ತೆದಾರ ನರಸಿಂಗರಾಯ ೮ ಆ ಭಗವಾನ್‌ದಾಸ ೨-೮-೦ ಭಯಂಕರ ಕೊಲೆ ೧-೪-೦ ಮಾಯಾವತಿ ೨-೮-೦ ವಿಚಿತ್ರ ಚಟ ೧-೪-೦ ವಿಲಕ್ಷಣ ಸಾಹಸ ೬ ಆ. ಹಗೆ ೧-೪-೦ ಘಾತುಕ ಶಿತಿಕಂಠ ೧-೪-೦

ಇವಲ್ಲದೆ ಇನ್ನೂ ಅನೇಕ ಪತ್ತೇದಾರಿ, ಐತಿಹಾಸಿಕ, ಸಾಮಾಜಿಕ, ಪೌರಾಣಿಕ ಕಥೆ-ಕಾದಂಬರಿಗಳೂ ಚರಿತ್ರೆ—ನಾಟಕಗಳೂ ದೊರೆಯುವವು.

ಹೊಸ ಕ್ರಯಪಟ್ಟಿಗಾಗಿ ೧॥ ಆಣೆ.

## ಬಿ. ಪಿ. ಕಾಳೆ, ಮದಿಯಾಳ-ಧಾರವಾಡ